ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 14 ಗುರುವಾರ 2023

ಸಂಪುಟ: 44 | ಸಂಚಿಕೆ: 237 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com





ಲೋಕಸಭೆಯಲ್ಲಿ ಮೇಜು, ಆಸನಗಳ ಮೇಲೆ ಜಿಗಿದಾಡಿ ಸದನದಲ್ಲಿ ಅಲ್ಲೋಲ–ಕಲ್ಲೋಲ ಉಂಟು ಮಾಡಿದ ಉತ್ತರ ಪ್ರದೇಶದ ಸಾಗರ್ ಶರ್ಮಾ. ಬಲಚಿತ್ರದಲ್ಲಿ ಮನೋರಂಜನ್ ಹಳದಿ ಬಣ್ಣದ ಗ್ಯಾಸ್ ಸಿಡಿಸಿದ್ದರಿಂದ ತೊಳಲಾಡುತ್ತಿರುವ ಸಂಸದರು.

ಸಂಸತ್ ಭವನದಲ್ಲಿ ಭಾರೀ ಭದ್ರತಾ ಲೋಪ

ಮೈಸೂರಿನ ಮನೋರಂಜನ್, ಉತ್ತರ ಪ್ರದೇಶದ ಸಾಗರ್ ಶರ್ಮಾ ಪ್ರೇಕ್ಷಕರ ಗ್ಯಾಲರಿಯಿಂದ ಸದನಕ್ಕೆ ಜಿಗಿದು ದಾಂಧಲೆ

ಕಲರ್ ಗ್ಯಾಸ್ ಸಿಡಿಸಿ ರಂಪಾಟ

● ಈ ಇಬ್ಬರೂ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹರಿಂದ ಪಾಸ್ ಪಡೆದು ಪ್ರೇಕ್ಷಕರ ಗ್ಯಾಲರಿ ಪ್ರವೇಶಿಸಿದ್ದರು ● ಕೆಲ ಕಾಲ ಆತಂಕದ ಪರಿಸ್ಥಿತಿ; ಇಡೀ ಸದನ ತಲ್ಲಣ ● ಮತ್ತಿಬ್ಬರಿಂದ ಸಂಸತ್ ಹೊರಗೆ ಕಲರ್ ಗ್ಯಾಸ್ ಸಿಡಿಸಿ ಘೋಷಣೆ ● ಸದನದೊಳಗೆ ನುಗ್ಗಿ ಆಸನಗಳ ಮೇಲೆ ಜೂಟಾಟ ಆಡಿದ ಸಾಗರ್‌ನ ಹಿಡಿದು ಥಳಿಸಿದ ಸಂಸದರು ● ದೆಹಲಿ ಪೊಲೀಸರ ವಶಕ್ಕೆ ಆರು ದುಷ್ಕರ್ಮಿಗಳು; ಎಲ್ಲಾ ಕೋನಗಳಿಂದ ವಿಚಾರಣೆ ● ಸಂಸತ್ ಸದನದ ಮೇಲಿನ ಉಗ್ರರ ದಾಳಿಯ 22ನೇ ವರ್ಷ ಸ್ಮರಣೆಯಂದೇ ಸಂಸತ್ ಭವನದಲ್ಲಿ ಮತ್ತೊಂದು ಬಾರಿ ಭದ್ರತಾ ವೈಫಲ್ಯ



ಮನೋರಂಜನ್



ಸಾಗರ್ ಶರ್ಮಾ



ಅಮೋಲ್ ಶಿಂಧೆ



ನೀಲಂ

ನವದೆಹಲಿ, ಡಿ.13–ಹೊಸ ಸಂಸತ್ ಭವನದಲ್ಲಿ ಭಾರಿ ಭದ್ರತಾ ಲೋಪವುಂಟಾಗಿದೆ. ಸಂಸತ್ ಭವನದ ಮೇಲೆ ಭಯೋತ್ಪಾದಕರ ದಾಳಿ ನಡೆದು 22 ವರ್ಷ ಪೂರೈಸಿದ ದಿನವಾದ ಬುಧವಾರದಂದು ಇಬ್ಬರು ದುಷ್ಕರ್ಮಿಗಳು ಸಂಸತ್‌ನ ಪ್ರೇಕ್ಷಕರ ಗ್ಯಾಲರಿಯಿಂದ ಸದನದೊಳಗೆ ಹಾರಿ, ಕಲರ್ ಗ್ಯಾಸ್ ಸಿಡಿಸುವ ಮೂಲಕ ಅಲ್ಲೋಲ–ಕಲ್ಲೋಲ ಉಂಟು ಮಾಡಿ ಭಾರಿ ಆತಂಕ ಸೃಷ್ಟಿಸಿದ್ದಾರೆ. ಇದೇ ವೇಳೆ ಸಂಸತ್‌ನ ಹೊರಗೆ ನಾಲ್ವರು ಕಲರ್ ಗ್ಯಾಸ್ ಸಿಡಿಸಿ ಘೋಷಣೆ ಕೂಗಿದ್ದಾರೆ. ಭದ್ರತಾ ಸಿಬ್ಬಂದಿ ಈ ನಾಲ್ವರನ್ನು ಬಂಧಿಸಿದ್ದಾರೆ. ನಂತರ ಇವರೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಸಂಪರ್ಕದಲ್ಲಿದ್ದ ಮತ್ತಿಬ್ಬರನ್ನೂ ಪೊಲೀಸರು ವಶಕ್ಕೆ ಪಡೆದಿದ್ದು, ಇದೀಗ ಬಂಧಿತ ಎಲ್ಲಾ ಆರು ದುಷ್ಕರ್ಮಿಗಳನ್ನು ವಿಚಾರಣೆಗೊಳಪಡಿಸಲಾಗಿದೆ.

ಇಂದು ಮಧ್ಯಾಹ್ನ ಸ್ಪೀಕರ್ ಸ್ಥಾನದಲ್ಲಿ ಹಿರಿಯ ಸಂಸದ ರಾಜೇಂದ್ರ ಅಗರ್‌ವಾಲ್ ಕುಳಿತು ಕಲಾಪ ನಡೆಯುತ್ತಿದ್ದ ವೇಳೆ ಮಧ್ಯಾಹ್ನ 1.01 ಸಮಯದಲ್ಲಿ ಬಿಜೆಪಿ ಪಶ್ಚಿಮ ಬಂಗಾಲದ ಸಂಸದ ಖಾರ್ಗೇನ್ ಮುರ್ಮು ಅವರು ಮಾತನಾಡುತ್ತಿದ್ದಾಗ ಹಠಾತ್ತನೆ ಓರ್ವ ಪ್ರೇಕ್ಷಕರ ಗ್ಯಾಲರಿಯಿಂದ ಸದನದೊಳಗೆ ಧುಮುಕಿ 'ನಾನು ದೇಶಪ್ರೇಮಿ. ಸರ್ವಾಧಿಕಾರ ನಡೆಯಲ್ಲ. ಪ್ರತಿಭಟನೆ ನಡೆಸಲು ಬಂದಿದ್ದೇವೆ' ಎಂದು ಕೂಗುತ್ತಾ ಸಂಸದರ ಆಸನಗಳ ಮೇಲೆ ಜಿಗಿಜಿಗಿದು, ಸ್ಪೀಕರ್ ಆಸನದತ್ತ ಸಾಗಲಾರಂಭಿಸಿದ. ಇದೇ ವೇಳೆ ಮತ್ತೋರ್ವ ಪ್ರೇಕ್ಷಕರ ಗ್ಯಾಲರಿಯಿಂದ ಸದನಕ್ಕೆ ಜಿಗಿದು ಹಳದಿ ಬಣ್ಣದ ಗ್ಯಾಸ್ ಸಿಡಿಸಿದ್ದರಿಂದ ಸಂಸತ್‌ನಲ್ಲಿ ಭಾರಿ ಆತಂಕ ಸೃಷ್ಟಿಯಾಯಿತು. ಸ್ಪೀಕರ್ ಸ್ಥಾನದಲ್ಲಿದ್ದ ರಾಜೇಂದ್ರ ಅಗರ್‌ವಾಲ್ ಅವರು ತರಾತುರಿಯಲ್ಲಿ ಕಲಾಪವನ್ನು 2 ಗಂಟೆಗಳ ಕಾಲ ಮುಂದೂಡುವುದಾಗಿ ಘೋಷಿಸಿದರು. ಸದನದಲ್ಲಿದ್ದ ● 10ನೇ ಪುಟಕ್ಕೆ

ಗ್ಯಾಲರಿ ಪಾಸ್ ರದ್ದು

ಪ್ರೇಕ್ಷಕರ ಗ್ಯಾಲರಿಯಿಂದ ಸಂಸತ್‌ಗೆ ಜಿಗಿದು ಮನೋರಂಜನ್ ಮತ್ತು ಸಾಗರ್ ಶರ್ಮಾ ರಂಪಾಟ ನಡೆಸಿ, ಆತಂಕ ಉಂಟು ಮಾಡಿದ ಹಿನ್ನೆಲೆಯಲ್ಲಿ ಸಂಸತ್ ಮತ್ತು ಸಂಸದರ ರಕ್ಷಣೆ ದೃಷ್ಟಿಯಿಂದ ಪ್ರೇಕ್ಷಕರ ಗ್ಯಾಲರಿಯ ಪಾಸ್‌ಗಳನ್ನು ರದ್ದು ಮಾಡಿರುವುದಾಗಿ ಸ್ಪೀಕರ್ ಓಂ ಬಿರ್ಲಾ ಘೋಷಿಸಿದ್ದಾರೆ.

ಭದ್ರತಾ ವೈಫಲ್ಯ ಸಂಬಂಧ ವಿಪಕ್ಷಗಳಿಂದ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ



ನವದೆಹಲಿ, ಡಿ.13–ಲೋಕಸಭೆ ಕಲಾಪದ ವೇಳೆ ಭದ್ರತಾ ಲೋಪ ಉಂಟಾಗಿದ್ದು, ಈ ಸಂಬಂಧ ಪ್ರತಿಪಕ್ಷಗಳಾದ ಇಂಡಿಯಾ ಮೈತ್ರಿಕೂಟದ ನಿಯೋಗ ನಾಳೆ (ಗುರುವಾರ) ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಲಿದೆ. ಮೂಲಗಳ ಪ್ರಕಾರ ನಾಳೆ ಬೆಳಿಗ್ಗೆ 10 ಗಂಟೆಗೆ ಇಂಡಿಯಾ ಮೈತ್ರಿಕೂಟದ ನಾಯಕರ ಸಭೆ ನಡೆಯಲಿದ್ದು, ನಂತರ ನಿಯೋಗವು ರಾಷ್ಟ್ರಪತಿಗಳ ಭೇಟಿಗೆ ಸಮಯ ಕೋರಲಿದೆ. ಅಲ್ಲದೆ ನಾಳೆ ಸಂಸತ್ತಿನ ಉಭಯ ಸದನಗಳಲ್ಲಿ ಭದ್ರತಾ ಲೋಪದ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಬೇಕೆಂದು ಪ್ರತಿಪಕ್ಷಗಳು ಒತ್ತಾಯಿಸಲಿವೆ.

ಲೋಕಸಭಾ ಸ್ಪೀಕರ್‌ಗೆ ಪ್ರತಾಪ್ ಸಿಂಹ ವಿವರಣೆ

ನವದೆಹಲಿ, ಡಿ.13–ಸಂಸತ್‌ನಲ್ಲಿ ಕಲರ್ ಗ್ಯಾಸ್ ಸಿಡಿಸಿ ದಾಂಧಲೆ ನಡೆಸಿದ ಮೈಸೂರಿನ ಮನೋರಂಜನ್ ಮತ್ತು ಉತ್ತರಪ್ರದೇಶದ ಸಾಗರ್ ಶರ್ಮಾಗೆ ಪ್ರೇಕ್ಷಕರ ಗ್ಯಾಲರಿಗೆ ತಾವು ಪಾಸ್ ನೀಡಿದ ಬಗ್ಗೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ಸ್ಪೀಕರ್ ಓಂ ಬಿರ್ಲಾ ಅವರಿಗೆ ವಿವರಣೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹೊಸ ಸಂಸತ್ ಭವನ ವೀಕ್ಷಿಸಬೇಕೆಂಬ ಆಸೆಯಿಂದ ರಾಷ್ಟ್ರದ ಎಲ್ಲಾ ಕಡೆಯಿಂದಲೂ ಜನರು ದೆಹಲಿಗೆ ಬರುತ್ತಾರೆ. ನಾನೂ ಸೇರಿದಂತೆ ಎಲ್ಲಾ ಸಂಸದರು ಅವರವರ ಕ್ಷೇತ್ರದ ಜನರಿಗೆ ಪಾಸ್ ನೀಡುವ ಮೂಲಕ ಸಂಸತ್ ವೀಕ್ಷಿಸಲು ನೆರವಾಗುತ್ತೇವೆ. ಇಂತಹ ಸಂದರ್ಭದಲ್ಲಿ ನಾವು ಕ್ಷೇತ್ರದಿಂದ ಬಂದಿರುವ ವ್ಯಕ್ತಿಗಳ ಪೂರ್ವಾಪರದ ಬಗ್ಗೆ ತಿಳಿದುಕೊಳ್ಳುವುದು ಕಷ್ಟವಾಗುತ್ತದೆ. ನಾನೂ ಕೂಡ ಮೈಸೂರು ಮತ್ತು ಕೊಡಗಿನಿಂದ ಬರುವವರಿಗೆ ಸಂಸತ್ ವೀಕ್ಷಿಸಲು ಪಾಸ್‌ಗಳನ್ನು ಕೊಡುತ್ತೇನೆ. ಮೈಸೂರಿನ ಮನೋರಂಜನ್ ಪಾಸ್‌ಗಾಗಿ ಬಂದಿದ್ದ. ಸಾಗರ್ ಶರ್ಮಾನನ್ನು ತನ್ನ ಸಹೋದ್ಯೋಗಿ ಎಂದು ಆತ ಹೇಳಿಕೊಂಡು ಅವನಿಗೂ ಪಾಸ್ ಕೊಡಿಸಿದ್ದಾನೆ. ಸಹಜವಾಗಿ ಕ್ಷೇತ್ರದ ಜನರು ಸಂಸತ್ ವೀಕ್ಷಿಸಲಿ ಎಂಬ ಉದ್ದೇಶದಿಂದ ಪಾಸ್ ಕೊಡಲಾಗಿದೆಯೇ ಹೊರತು ಇವರುಗಳು ಇಂತಹ ಒಂದು ಕೃತ್ಯವನ್ನು ಎಸಗುತ್ತಾರೆ ಎಂಬುದನ್ನು ನಾನು ಕನಸು–ಮನಸಿನಲ್ಲೂ ನೆನಸಿರಲಿಲ್ಲ ಎಂದು ಪ್ರತಾಪ್ ಸಿಂಹ ವಿವರಣೆ ನೀಡಿದ್ದಾರೆ ಎನ್ನಲಾಗಿದೆ.

ದುಷ್ಕರ್ಮಿಗಳು ಸಿಡಿಸಿದ ಕಲರ್ ಗ್ಯಾಸ್ ಅಪಾಯಕಾರಿಯಲ್ಲ



ನವದೆಹಲಿ, ಡಿ.13–ಸಂಸತ್‌ನಲ್ಲಿ ಬುಧವಾರ ದುಷ್ಕರ್ಮಿಗಳು ಸಿಡಿಸಿದ ಕಲರ್ ಗ್ಯಾಸ್ ಅಪಾಯಕಾರಿಯಲ್ಲ ಎಂಬುದು ದೆಹಲಿ ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಇದೇ ವಿಷಯವನ್ನು ಸಂಸತ್ ಕಲಾಪದಲ್ಲಿ ಸ್ಪೀಕರ್ ಓಂ ಬಿರ್ಲಾ ಕೂಡ ಅಧಿಕೃತವಾಗಿ ಹೇಳಿದ್ದಾರೆ. ದುಷ್ಕರ್ಮಿಗಳು ಸಿಡಿಸಿದ ಹಳದಿ ಬಣ್ಣದ ● 10ನೇ ಪುಟಕ್ಕೆ

ತಪ್ಪು ಮಾಡಿದ್ದಲ್ಲಿ ನನ್ನ ಮಗನೇ ಆಗಿರಲಿ ಗಲ್ಲಿಗೇರಿಸಬೇಕು...!

ಮನೋರಂಜನ್ ತಂದೆ ದೇವರಾಜೇಗೌಡ ನೋವಿನ ನುಡಿ



ಮೈಸೂರು,ಡಿ.13(ಪಿಎಂ)– ಸಂಸತ್ ನಮ್ಮ ದೇಗುಲ, ಅಲ್ಲಿ ಇಂತಹ ಕೃತ್ಯ ಖಂಡನೀಯ. ನನ್ನ ಮಗ ಕೆಟ್ಟ ಕಾರ್ಯ, ಸಮಾಜಘಾತುಕ ಕೆಲಸ ಮಾಡುವವನಲ್ಲ ಎಂಬ ನಂಬಿಕೆ ಇದೆ. ತಪ್ಪು ಮಾಡಿದ್ದಲ್ಲಿ ನನ್ನ ಮಗನೇ ಆಗಿರಲಿ, ಇನ್ನೊಬ್ಬನೇ ಆಗಿರಲಿ, ಗಲ್ಲಿಗೇರಿಸಬೇಕು ಎಂದು ಮನೋರಂಜನ್ ತಂದೆ ದೇವರಾಜೇಗೌಡ ನೊಂದು ನುಡಿದರು. ಮೈಸೂರಿನ ವಿಜಯನಗರದ 2ನೇ ಹಂತದ ತಮ್ಮ ನಿವಾಸದ ಬಳಿ ಬುಧವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಅವನ ಬಳಿ ನಾಲ್ಕೈದು ಸಾವಿರ ಪುಸ್ತಕಗಳಿವೆ. ಹಾಕಿಕೊಳ್ಳುವ ಬಟ್ಟೆಗೆ ಆಸೆ ಪಟ್ಟವನಲ್ಲ. ಒಳ್ಳೆಯ ಬಟ್ಟೆ ಹಾಕಿಕೊಳ್ಳುವುದರಿಂದ ಏನು ಪ್ರಯೋಜನ ಎನ್ನುತ್ತಿದ್ದ. ಪುಸ್ತಕ ಓದುವ ಹುಚ್ಚು ಅವನಿಗೆ ಇತ್ತು. ಇದರಿಂದ ಅವನು ಯಾವ ರೀತಿ ಪ್ರಭಾವಿತನಾಗಿದ್ದನೋ ಗೊತ್ತಿಲ್ಲ. ಸ್ವಾಮಿ ವಿವೇಕಾನಂದರ ಕುರಿತ ಪುಸ್ತಕ ಹೆಚ್ಚು ಓದುತ್ತಿದ್ದ ಎಂದು ತಿಳಿಸಿದರು. ಅತಿಯಾಗಿ ಓದಿದ್ದೇ ತಪ್ಪಾಯಿತಾ ಎನ್ನಿಸುತ್ತೆ. ● 10ನೇ ಪುಟಕ್ಕೆ

ಮನೋರಂಜನ್ ಮನೆಯಲ್ಲಿ ಪೊಲೀಸರ ಪರಿಶೀಲನೆ



ಮೈಸೂರು,ಡಿ.13(ಪಿಎಂ)–ಸಂಸತ್‌ನಲ್ಲಿ ಕಲಾಪದ ವೇಳೆಯೇ ಸದನಕ್ಕೆ ಜಿಗಿದು, ಕಲರ್ ಗ್ಯಾಸ್ ಸಿಡಿಸಿ ದಾಂಧಲೆ ನಡೆಸಿ ಆತಂಕ ಸೃಷ್ಟಿಸಿದ ಪ್ರಕರಣದಲ್ಲಿ ಭಾಗಿಯಾಗಿರುವ ಮೈಸೂರಿನ ಮನೋರಂಜನ್ (34)ನ ವಿಜಯನಗರದ 2ನೇ ಹಂತದಲ್ಲಿರುವ ಮನೆಗೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಪುತ್ರ ಸಂಸತ್‌ನಲ್ಲಿ ರಂಪಾಟ ಮಾಡಿರುವ ವಿಷಯದ ಬಗ್ಗೆ ಆತನ ಪೋಷಕರು ● 10ನೇ ಪುಟಕ್ಕೆ

ವರದಕ್ಷಿಣೆ ಕಿರುಕುಳ ನೀಡಿ ಪತ್ನಿ ಕೊಲೆ; ಆರೋಪಿಗೆ ಜೀವಾವಧಿ ಶಿಕ್ಷೆ

ಕೊಳ್ಳೆಗಾಲ ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯದ ತೀರ್ಪು

ಮೈಸೂರು, ಡಿ.13(ಬಿಎಲ್‌ಯು)– ವರದಕ್ಷಿಣೆ ಕಿರುಕುಳ ನೀಡಿ ಪತ್ನಿ ಕೊಲೆ ಮಾಡಿದ ಪತಿಗೆ ಕೊಳ್ಳೆಗಾಲದ ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಕೊಳ್ಳೆಗಾಲ ತಾಲೂಕು ಸತ್ತೆಗಾಲದ ವಾಸಿ ನಾಗರಾಜು ಅಲಿಯಾಸ್ ಆರಬೆಳ್ಳ ಶಿಕ್ಷೆಗೊಳಗಾದ ಆರೋಪಿಯಾಗಿದ್ದಾನೆ.

ನಾಗರಾಜು 2017ರಲ್ಲಿ ನಂಜನಗೂಡು ತಾಲೂಕು ತಗಡೂರಿನ ಪುಟ್ಟಮ್ಮ ಎಂಬಾಕೆಯನ್ನು ಮದುವೆಯಾಗಿದ್ದನು. ಮದುವೆಯಾದ ನಂತರ ನಿನಗೆ ಪಿತ್ರಾರ್ಜಿತವಾಗಿ ಬಂದಿರುವ ಜಮೀನು ಸೇರಿದಂತೆ ಇತರೆ ಆಸ್ತಿ ಮಾರಾಟ ಮಾಡಿ ತನಗೆ ಹಣ ತಂದು ಕೊಡುವಂತೆ ದೈಹಿಕ ಹಾಗೂ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದನು.

ಇದಕ್ಕೆ ಪುಟ್ಟಮ್ಮ ಒಪ್ಪಲಿಲ್ಲ ಎಂದು ನಾಗರಾಜು ಏಪ್ರಿಲ್ 7, 2019 ರಂದು ಮಾರಣಾಂತಿಕ ಹಲ್ಲೆ ನಡೆಸಿ, ಕೊಲೆ ಮಾಡಿದ್ದನು. ಕೊಲೆ ಮರೆಮಾಚಲು ಪುಟ್ಟಮ್ಮಳನ್ನು ನೇಣು ಹಾಕಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಬಿಂಬಿಸಿದ್ದನು. ನಂತರ ಕೊಲೆ ಮಾಡಿರುವ ಕೆಲವು ಸಾಕ್ಷ್ಯಗಳನ್ನು ನಾಶಪಡಿಸಿದ್ದನು. ಈ ಸಂಬಂಧ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿದ ಕೊಳ್ಳೆಗಾಲದ ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯದ ನ್ಯಾಯಾಧೀಶರಾದ ಎನ್.ಆರ್.ಲೋಕಪ್ಪ ಅವರು ನಾಗರಾಜು ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಈ ಪ್ರಕರಣದಲ್ಲಿ ನಾಗರಾಜು ವಿರುದ್ಧ ನ್ಯಾಯಾಧೀಶರು ಹಲವು ಸೆಕ್ಷನ್‌ಗಳಲ್ಲಿ ದಂಡ ಕೂಡ ವಿಧಿಸಿದ್ದಾರೆ. ದಂಡ ಪಾವತಿಸಲು ಸಾಧ್ಯವಾಗದಿದ್ದರೆ ಶಿಕ್ಷೆ ಅನುಭವಿಸಬೇಕು ಎಂದು ಆದೇಶಿಸಿದ್ದಾರೆ. ಕೊಲೆ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಪಿ.ಮಂಜುನಾಥ್ ವಾದ ಮಂಡಿಸಿದ್ದರು.



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕಡೇ ಕಾರ್ತಿಕ ಸೋಮವಾರದ ವಿಶೇಷ ಪೂಜೆಯಲ್ಲಿ ಭಾಗವಹಿಸಿದ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಅವರನ್ನು ನಾಯಕ ಸಮುದಾಯದ ವತಿಯಿಂದ ಅದ್ದೂರಿಯಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಗರಪಾಲಿಕೆ ಮಾಜಿ ಸದಸ್ಯ, ದೇವಸ್ಥಾನದ ಗೌರವಾಧ್ಯಕ್ಷ ಲೋಕೇಶ್ ಪಿಯಾ, ಸಿದ್ದಪ್ಪ, ಸತೀಶ್, ವಸಂತ್, ರಂಗಸ್ವಾಮಿ, ಬಲರಾಮ್, ನಾಗೇಶ್ ನಾಯಕ, ನಾಯಕ ಸಮುದಾಯದ ಮುಖಂಡರು ಭಾಗಿಯಾಗಿದ್ದರು.



ಸವಿತಾ ಸಮಾಜದ ಜನರಿಗೆ ಮೀಸಲಾತಿ ನೀಡಬೇಕೆಂದು ಸವಿತಾ ಸಮಾಜದ ಪೀಠಾಧಿಪತಿಗಳಾದ ಶ್ರೀಧರ ನಂದನಾಥ ಸರಸ್ವತಿ ಸ್ವಾಮೀಜಿಯವರ ನೇತೃತ್ವದಲ್ಲಿ ಹುಬ್ಬಳ್ಳಿಯಿಂದ ಬೆಳಗಾವಿ ಸುವರ್ಣ ಸೌಧದವರೆಗೂ ಪಾದಯಾತ್ರೆ ನಡೆಸಲಾಯಿತು. ಈ ವೇಳೆ ವಿಧಾನಪರಿಷತ್ತಿನ ಮಾಜಿ ಸದಸ್ಯ ಎಂ.ಸಿ.ವೇಣುಗೋಪಾಲ್, ಕರ್ನಾಟಕ ರಾಜ್ಯ ಸವಿತಾ ಸಮಾಜದ ಮಾಜಿ ಅಧ್ಯಕ್ಷ ಯು.ಕೃಷ್ಣಮೂರ್ತಿ, ಮೈಸೂರು ಜಿಲ್ಲಾ ಅಧ್ಯಕ್ಷ ಎನ್.ಆರ್.ನಾಗೇಶ್, ಚಾಮರಾಜನಗರದ ಮಾಜಿ ಅಧ್ಯಕ್ಷ ಚಿನ್ನಸ್ವಾಮಿ, ತಿ.ನರಸೀಪುರ ತಾಲೂಕಿನ ಅಧ್ಯಕ್ಷ ನಾಗೇಂದ್ರ, ಬನ್ನೂರಿನ ಮಾಜಿ ಪುರಸಭಾ ಸದಸ್ಯ ಮುರಳೀಧರ, ಹಾಸನ ಜಿಲ್ಲಾಧ್ಯಕ್ಷ ರವಿಕುಮಾರ್ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಯ ತಾಲೂಕಿನ ಅಧ್ಯಕ್ಷರು, ಪದಾಧಿಕಾರಿಗಳು, ಸಮಾಜದ ಮುಖಂಡರು ಭಾಗವಹಿಸಿದ್ದರು.

ಮುಂದುವರೆದ ಅತಿಥಿ ಉಪನ್ಯಾಸಕರ ಪ್ರತಿಭಟನೆ



ಮೈಸೂರು, ಡಿ.13(ಜಿಎ)–ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸುವಂತೆ ಆಗ್ರಹಿಸಿ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಪ್ರತಿಭಟಿಸಿತು.

ನಗರದ ಉಪನಿರ್ದೇಶಕರ ಕಚೇರಿಯ ಮುಂಭಾಗ ಜಮಾವಣೆಗೊಂಡ ಅತಿಥಿ ಉಪನ್ಯಾಸಕರು ಕಾಯಂ ಮಾಡುವಂತೆ ನಾನಾ ಘೋಷಣೆಗಳನ್ನು ಕೂಗಿದರು. ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿರುವ ಪ್ರಾಧ್ಯಾಪಕರು ನಿವೃತ್ತಿ ಅಂಚಿನಲ್ಲಿದ್ದಾರೆ. ಹೀಗಾಗಿ ಸರ್ಕಾರ ಅತಿಥಿ ಉಪನ್ಯಾಸಕರ ಕಾಯಂಗೊಳಿಸಿ ಆದೇಶ ಹೊರಡಿಸಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಡಾ.ಆರ್.ವೆಂಕಟೇಶ್, ಡಿ.ನಾಗಾರ್ಜುನ, ಕೆಂಪನಂಜಪ್ಪ, ವಿನಾಮತ್, ಹನುಮಂತ್ ಸೇರಿದಂತೆ ಇನ್ನಿತರ ಅತಿಥಿ ಉಪನ್ಯಾಸಕರು ಪಾಲ್ಗೊಂಡಿದ್ದರು.

ನಿಧನ

ಗ್ರೇಸಿ ಡಿ ಆಲ್ಮೇದಾ



ಮೈಸೂರು, ಡಿ. 13–ಸೇಂಟ್ ಫಿಲೋಮಿನಾ ಚರ್ಚ್ ಪ್ಯಾರೀಸ್ ಪ್ರೀಸ್ಟ್ ಮತ್ತು ಹೆಚ್.ಡಿ.ಕೋಟೆ ನಿವಾಸಿ ಸ್ಟ್ಯಾನಿ ಡಿ ಆಲ್ಮೇದಾ (76) ನಗರದ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಮೃತರು ಆರು ಮಂದಿ ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಹಾಗೂ ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಗನಹಳ್ಳಿಯಲ್ಲಿರುವ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ನಾಳೆ (ಡಿ.14) ಮಧ್ಯಾಹ್ನ 3.30ಕ್ಕೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ. ಮಾಲಾ ಸಿ.ಉಂಡಾಳೆ



ಮೈಸೂರಿನ ಮಂಡಿ ಮೊಹಲ್ಲಾ, ಕಾಮಾಟಗೇರಿ ಎರಡನೇ ಕ್ರಾಸ್ ನಿವಾಸಿ ಹಾಗೂ ನಿವೃತ್ತ ಪ್ರಾಂಶುಪಾಲರಾದ ಡಾ.ಲಕ್ಷ್ಮೀನಾರಾಯಣರಾವ್ ಅವರ ಪತ್ನಿ ಡಾ. ಮಾಲಾ ಸಿ. ಉಂಡಾಳೆ (48) ಡಿಸೆಂಬರ್ 8ರಂದು ನಿಧನರಾದರು. ಮೃತರು ಪತಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಡಿಸೆಂಬರ್ 9ರಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೀಕ್ಷಕರಿಗೆ ಅನುಕೂಲವಾಗುವಂತೆ ಅಂಬಾರಿ ಮರು ವಿನ್ಯಾಸ

ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಜಿ.ಜಗದೀಶ್ ಭರವಸೆ



ಜಿ.ಜಗದೀಶ್

ಮೈಸೂರು, ಡಿ.13(ಆರ್‌ಕೆ)– ವೀಕ್ಷಕರಿಗೆ ಅಡ್ಡಿಯಾಗದಂತೆ ಅಂಬಾರಿ ಬಸ್ ಮರು ವಿನ್ಯಾಸ ಮಾಡಲು ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ)ವು ನಿರ್ಧರಿಸಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಿ.ಜಗದೀಶ್, ಮೈಸೂರಿನ ಪಾರಂಪರಿಕ ಕಟ್ಟಡಗಳು, ಸ್ಮಾರಕಗಳ ಸೌಂದರ್ಯ ವೀಕ್ಷಿಸಲೆಂದು ಅಂಬಾರಿ ಬಸ್ ವ್ಯವಸ್ಥೆ ಮಾಡಲಾಗಿದೆ. ಆದರೆ ಈ ಬಸ್ಸಿನ ಮುಂಭಾಗ ಎತ್ತರವಾಗಿ ರೂಪಿಸಿರುವುದರಿಂದ ಮುಂದೆ ಏನೂ ಕಾಣಿಸುವುದಿಲ್ಲ ಎಂದು ವೀಕ್ಷಕರು ದೂರಿ, ಅದನ್ನು ತೆರವುಗೊಳಿಸಿ ಮುಕ್ತ ವೀಕ್ಷಣೆಗೆ ಅವಕಾಶ ನೀಡಬೇಕು ಎಂದು ಸಲಹೆ ನೀಡಿದ್ದಾರೆ.

ಅಲ್ಲದೇ ಈ ಬಗ್ಗೆ ಪತ್ರಿಕೆಗಳಲ್ಲೂ ಅಭಿಪ್ರಾಯಗಳು ಪ್ರಕಟವಾಗಿರುವುದನ್ನು ಗಮನಿಸಿದ್ದೇವೆ. ಅದರ ಪೂರ್ಣ ಮಾಹಿತಿಯೊಂದಿಗೆ ನಿಗಮವು ಮೈಸೂರಿನ ಕಚೇರಿಯಿಂದ ಪ್ರಸ್ತಾವನೆ ತರಿಸಿಕೊಂಡು ಪರಿಶೀಲನೆ ನಡೆಸುತ್ತಿದೆ. ಕಂಪನಿಯಿಂದಲೇ ಬಸ್ಸಿನ ಮುಂಭಾಗವನ್ನು ಮರು ವಿನ್ಯಾಸಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಮುಂದಿನ ದಸರಾ ಮಹೋತ್ಸವದ ವೇಳೆಗೆ ಅದನ್ನು ಸರಿಪಡಿಸಿ ಎಲ್ಲಾ 6 ಅಂಬಾರಿ ಬಸ್‌ಗಳಲ್ಲೂ ಮುಕ್ತ ವೀಕ್ಷಣೆಗೆ ಅವಕಾಶ ವಿರಲಿದೆ ಎಂದು ಜಗದೀಶ್ ತಿಳಿಸಿದರು.

ದಸರಾ ಸಂದರ್ಭ ವಿದ್ಯುತ್ ದೀಪಾಲಂಕಾರ ಅಂಬಾರಿ ಬಸ್‌ನಲ್ಲಿ ವೀಕ್ಷಣೆಗೆ ಸಾರ್ವಜನಿಕರಿಂದ ಭಾರಿ ಬೇಡಿಕೆ ಬರುತ್ತದೆ. ಈಗ ಕೇವಲ 1 ಅಂಬಾರಿ ಡಬಲ್ ಡೆಕ್ಕರ್ ಬಸ್ ಮಾತ್ರ ನಗರ ಪ್ರದಕ್ಷಿಣೆ ಮಾಡುತ್ತಿದ್ದು, ಒಂದನ್ನು ಗದಗ, ಮತ್ತೊಂದನ್ನು ಸವದತ್ತಿ ನಗರಕ್ಕೆ ಕಳುಹಿಸಲಾಗಿದೆ. ಉಳಿದ 3 ವಾಹನಗಳನ್ನು ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಡಿಪೋ ಆವರಣದಲ್ಲಿ ನಿಲ್ಲಿಸಲಾಗಿದೆ. ದಸರಾ ವೇಳೆ ಮಾತ್ರ ಅವುಗಳನ್ನು ಆಪರೇಟ್ ಮಾಡಲಾಗುತ್ತದೆ. ಈ ಬಸ್‌ನ ಮುಂದಿನ ಭಾಗವನ್ನು ಮರು ವಿನ್ಯಾಸಗೊಳಿಸಿ, ಬಸ್ಸು ಮತ್ತು ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಲಾಗುವುದು. ಈಗಾಗಲೇ ಬಸ್ ವಿನ್ಯಾಸಗೊಳಿಸಿದ ಕಂಪನಿ ಜೊತೆ ಚರ್ಚಿಸಲಾಗಿದೆ ಎಂದು ತಿಳಿಸಿದರು.



ಅಂಬಾರಿ ಡಬಲ್ ಡೆಕ್ಕರ್ ಬಸ್

4 ಕೋಟಿ ರೂ. ವೆಚ್ಚದಲ್ಲಿ ಊಟಿಯ ಕರ್ನಾಟಕ ಗೆಸ್ಟ್‌ಹೌಸ್ ನವೀಕರಣ

ತಿಂಗಳೊಳಗೆ ಪಾರಂಪರಿಕ ಕಟ್ಟಡದ ದುರಸ್ತಿ ಕಾಮಗಾರಿ ಪೂರ್ಣ

ಮೈಸೂರು, ಡಿ.13(ಆರ್‌ಕೆ)– ತಮಿಳುನಾಡಿನ ಊಟಿಯಲ್ಲಿರುವ ಕೆಎಸ್‌ಟಿಡಿಸಿಗೆ ಸೇರಿದ ಕರ್ನಾಟಕ ಗೆಸ್ಟ್‌ಹೌಸ್ 'ಮಯೂರ ಸುದರ್ಶನ' ಪಾರಂಪರಿಕ ಕಟ್ಟಡದ ನವೀಕರಣ ಕಾಮಗಾರಿ ಪ್ರಗತಿಯಲ್ಲಿದ್ದು, ಒಂದು ತಿಂಗಳೊಳಗೆ ಪೂರ್ಣಗೊಳ್ಳಲಿದೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಸ್ವಾಧೀನದಲ್ಲಿರುವ ಊಟಿಯ ಮಯೂರ ಸುದರ್ಶನ ಕರ್ನಾಟಕ ಅತಿಥಿಗೃಹ ಪಾರಂಪರಿಕ ಕಟ್ಟಡವು ನಿರ್ವಹಣೆ ಕೊರತೆಯಿಂದಾಗಿ ಶಿಥಿಲಗೊಂಡಿದ್ದು, ಪ್ರವಾಸಿಗರ ವಾಸ್ತವ್ಯಕ್ಕೆ ಅಗತ್ಯ ಮೂಲ ಸೌಕರ್ಯ ಇಲ್ಲದಿರುವುದರಿಂದ ನಿಗಮವು ದುರಸ್ತಿ ಕಾರ್ಯ ಕೈಗೊಂಡಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಕೆಎಸ್‌ಟಿಡಿಸಿ ವ್ಯವಸ್ಥಾಪಕ ನಿರ್ದೇಶಕ ಜಿ.ಜಗದೀಶ್, ಕರ್ನಾಟಕದಿಂದ ಊಟಿಗೆ ತೆರಳುವ ಪ್ರವಾಸಿಗರು ಉಳಿದುಕೊಳ್ಳಲೆಂದು ಮಹಾರಾಜರ ಆಳ್ವಿಕೆಯಲ್ಲಿ ಅಂದಿನ ದಿವಾನರು ಊಟಿಯ ಕರ್ನಾಟಕ ಅತಿಥಿಗೃಹವನ್ನು ನಿರ್ಮಿಸಿದ್ದರು. ಅದು ಪಾರಂಪರಿಕ ಕಟ್ಟಡವಾದ್ದರಿಂದ ಆಗಿಂದಾಗ್ಗೆ ರಿಪೇರಿ ಮಾಡಿರಲಿಲ್ಲ. ಶಿಥಿಲಾವಸ್ಥೆಯಲ್ಲಿದ್ದ ಕಟ್ಟಡವನ್ನು ಸಂರಕ್ಷಿಸಲು ಕರ್ನಾಟಕ ಸರ್ಕಾರವು 4 ಕೋಟಿ ರೂ. ವೆಚ್ಚದಲ್ಲಿ ನವೀಕರಣ ಕಾಮಗಾರಿಯನ್ನು ಕೈಗೊಂಡಿದ್ದು, ಪಾರಂಪರಿಕ ವಿನ್ಯಾಸಕ್ಕೆ ಧಕ್ಕೆ ಬಾರದಂತೆ ನುರಿತ ಕೆಲಸಗಾರರಿಂದ ಆಧುನೀಕರಿಸಲಾಗುತ್ತಿದೆ ಎಂದರು. ಕಾಮಗಾರಿ ಶೇ.80ರಷ್ಟು ಮುಗಿದಿದ್ದು, ಒಂದು ತಿಂಗಳೊಳಗಾಗಿ ಪೂರ್ಣಗೊಳ್ಳಲಿದೆ. ಕೊಠಡಿಗಳು, ವರಾಂಡಗಳೆಲ್ಲವೂ ಮರದಿಂದ ಕೂಡಿದ್ದು, ಪೀಠೋಪಕರಣಗಳು ಪಾರಂಪರಿಕ ಶೈಲಿಯಲ್ಲಿವೆ. ಹಾಗಾಗಿ ರಿಪೇರಿ ಕೆಲಸ ನಿಧಾನಗತಿಯಿಂದ ನಡೆಯುತ್ತಿದೆ. ಊಟಿಯ ಬಟಾನಿಕಲ್ ಗಾರ್ಡನ್‌ಗೆ ಕೇವಲ 200 ಮೀಟರ್ ದೂರದ ನಿಸರ್ಗ ತಾಣದಲ್ಲಿರುವ 'ಮಯೂರ ಸುದರ್ಶನ' ಕರ್ನಾಟಕ ಗೆಸ್ಟ್‌ಹೌಸ್ ಇನ್ನು ಮತ್ತಷ್ಟು ಸದೃಢ ಮತ್ತು ಸುಂದರವಾಗಲಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕದ ಪ್ರವಾಸಿಗರಿಗೆ ಹಾಗೂ ಗಣ್ಯರಿಗೆ ಊಟಿಯಲ್ಲಿ ವಾಸ್ತವ್ಯ ಹೂಡಲು ಮಯೂರ ಸುದರ್ಶನ ಅತಿಥಿ ಗೃಹದಲ್ಲಿ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಒದಗಿಸಿ ಸುಸಜ್ಜಿತಗೊಳಿಸಲಾಗುತ್ತಿದೆ ಎಂದು ಜಿ.ಜಗದೀಶ್ ತಿಳಿಸಿದರು.

ಕೆಲಸದ ಸ್ಥಳದಲ್ಲಿ ಸುರಕ್ಷತೆ, ಜಾಗೃತಿ ಕುರಿತು ಪೌರಕಾರ್ಮಿಕರಿಗೆ ತರಬೇತಿ

8 ಮಂದಿ ಪೌರಕಾರ್ಮಿಕರಿಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಪತ್ರ ವಿತರಣೆ



ಮೈಸೂರು,ಡಿ.13(ಆರ್‌ಕೆ)–ಕೆಲಸ ಮಾಡುವ ಸ್ಥಳದಲ್ಲಿ ಸುರಕ್ಷತೆ, ಜಾಗೃತಿ, ಕೌಶಲ್ಯ ಮತ್ತು ನಡವಳಿಕೆ ಕುರಿತಂತೆ ಮೈಸೂರು ಮಹಾನಗರ ಪಾಲಿಕೆ ಪೌರಕಾರ್ಮಿಕರಿಗೆ ತರಬೇತಿ ನೀಡಲಾಯಿತು. ಹಾರ್ಪಿಕ್ ವರ್ಲ್ಡ್ ಟಾಯ್ಲೆಟ್ ಕಾಲೇಜಿನ ಸಹಯೋಗದಲ್ಲಿ ಪಾಲಿಕೆ ವತಿಯಿಂದ ಪುರಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಆಯುಕ್ತ ಅಶಾದ್ ಉರ್ ರಹಮಾನ್ ಷರೀಫ್, ಸ್ವಚ್ಛತಾ ಕಾರ್ಯದಲ್ಲಿ ನಿರತರಾಗಿದ್ದಾಗ ಸುರಕ್ಷತಾ ಸಲಕರಣೆಗಳನ್ನು ಧರಿಸುವುದು, ಸಹಪಾಠಿಗಳು ಹಾಗೂ ನಾಗರಿಕರೊಂದಿಗೆ ಉತ್ತಮ ಬಾಂಧವ್ಯ ಹೊಂದುವ ಮೂಲಕ ಸೌಹಾರ್ದ ಬೆಸೆಯಬೇಕು ಎಂದರು.

ಅನುಕಂಪದ ಆಧಾರದಲ್ಲಿ 7 ಮಂದಿ ಪೌರಕಾರ್ಮಿಕರು ಹಾಗೂ ಓರ್ವ ಲೋಡರ್‌ಗೆ ಆಯುಕ್ತರ ನೇಮಕಾತಿ ಪತ್ರ ನೀಡಿದರು. ಹಾರ್ಪಿಕ್ ವರ್ಲ್ಡ್ ಟಾಯ್ಲೆಟ್ ಕಾಲೇಜಿನ ರಾಜ್ಯ ವ್ಯವಸ್ಥಾಪಕ ಎಂ. ಜಗದೀಶ್ (ರಿಲ್ವೆನ್), ರಾಜ್ಯ ಸಂಚಾಲಕಿ ಎಂ.ಬಿಂದು (ರಕ್ಷಾ) ತರಬೇತಿ ನೀಡಿದರು.

ಪಾಲಿಕೆ ಉಪ ಆಯುಕ್ತ (ಆಡಳಿತ) ಜಿ.ಎಸ್. ಸೋಮಶೇಖರ್, ವಲಯ ಕಚೇರಿ–6ರ ವಲಯಾಧಿಕಾರಿ ಪ್ರತಿಭಾ, ಪರಿಸರ ಇಂಜಿನಿಯರ್ ಮೈತ್ರಿ, ಬಸವರಾಜು, ಆರೋಗ್ಯ ನಿರೀಕ್ಷಕರು, ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇದು ಪಾಲಿಕೆಯಿಂದ ಪೌರಕಾರ್ಮಿಕರಿಗೆ ನೀಡಿದ 4ನೇ ತರಬೇತಿಯಾಗಿದ್ದು, ಈವರೆಗೆ 1000 ಮಂದಿ ಸುರಕ್ಷತೆ ಬಗ್ಗೆ ತರಬೇತಿ ಪಡೆದಂತಾಗಿದೆ.

ಸಂಸತ್ ಮೇಲಿನ ದಾಳಿಗೆ ಎಂ.ಕೆ.ಸೋಮಶೇಖರ್ ಖಂಡನೆ

ಮೈಸೂರು,ಡಿ.13(ಬಿಎಲ್‌ಯು)–ಸಂಸತ್‌ನ ಭದ್ರತಾ ವೈಫಲ್ಯವನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಖಂಡಿಸಿದ್ದಾರೆ.



ಸಂಸತ್ ಭವನದ ಮೇಲೆ ಈ ಹಿಂದೆ ದಾಳಿ ನಡೆದಿತ್ತು. ಈಗ ಭದ್ರತಾ ಲೋಪವಾಗಿದೆ. ಈ ದಿನದ ದಾಳಿ ಕೂಡ ಪೂರ್ವ ನಿಯೋಜಿತ ಕೃತ್ಯವಾಗಿದೆ. ಇದು ದೇಶದ ಜನರಲ್ಲಿ ಭಯದ ವಾತಾವರಣ ನಿರ್ಮಾಣ ಮಾಡಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಪ್ರಧಾನಮಂತ್ರಿ, ಸಚಿವರು ಹಾಗೂ ಸಂಸದರು ಇರುವ ಸಂಸತ್ತಿನೊಳಗಿನ ಸ್ಥಳವೇ ಸುರಕ್ಷಿತ ತಾಣವಾಗದಿದ್ದರೆ, ದೇಶದ ನಾಗರಿಕರ ರಕ್ಷಣೆ ಹೇಗೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪ್ರಶ್ನಿಸಿದ್ದಾರೆ.

ಈ ತನಕ ಎಷ್ಟು ಗಲಭೆ ಸೃಷ್ಟಿಸಿದ್ದೀರಾ, ಎಷ್ಟು ಟೀಯರ್ ಗ್ಯಾಸ್ ಸಿಡಿಸುವಂತಹ ಹೋರಾಟ ಮಾಡಿದ್ದೀರಾ ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ಯುವ ಮೋರ್ಚಾ ಸಭೆಯಲ್ಲಿ ಪ್ರಶ್ನಿಸಿದ್ದರು. ಈ ಕೃತ್ಯದ ಸೂಕ್ಷ್ಮತೆ ಗಮನಿಸಿದರೆ ಬಿಜೆಪಿ ಹಿರಿಯ ನಾಯಕನ ಆ ದಿನದ ಮಾತು ಈ ಕೃತ್ಯಕ್ಕೆ ಸ್ಫೂರ್ತಿ ನೀಡಿರಬಹುದೇ ಎಂಬ ಅನುಮಾನ ಬರುತ್ತದೆ. ಈ ಬಗ್ಗೆ ಸಂಪೂರ್ಣ ತನಿಖೆಯಾದರೆ ಸತ್ಯಾಂಶ ಹೊರಗೆ ಬರಲಿದೆ ಎಂದು ಸೋಮಶೇಖರ್ ಹೇಳಿದ್ದಾರೆ.

ಕಾವೇರಿ ಕ್ರಿಯಾ ಸಮಿತಿ ಧರಣಿಗೆ ಕಸಾಪ ಸಾಥ್



ಮೈಸೂರು, ಡಿ.13(ಜಿಎ)–ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಪುರಭವನದ ಮುಂಭಾಗ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಧರಣಿಗೆ ಬುಧವಾರ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಸಾಥ್ ನೀಡಿದರು.

ಈ ವೇಳೆ ಮಾತನಾಡಿದ ಅವರು, 150 ವರ್ಷಗಳ ಹಿಂದೆ 650 ಎಂಎಂ ಮಳೆ ಆಗುತ್ತಿತ್ತು. ಈಗ ಬರೀ 70 ಎಂಎಂ ಮಳೆ ಆಗುತ್ತಿದೆ. ಕರ್ನಾಟಕದ ಜನಸಂಖ್ಯೆಯೂ ಏರುತ್ತಿದೆ. ನಮ್ಮ ಕಾವೇರಿ ಕೊಳ್ಳದ ಎಲ್ಲಾ ಜಲಾಶಯಗಳ ನೀರನ್ನು ಸೇರಿಸಿದರೆ ಮೆಟ್ಟೂರು ಜಲಾಶಯದ ನೀರಿನಷ್ಟು ಆಗುವುದಿಲ್ಲ. ಅಷ್ಟು ದೊಡ್ಡ ಜಲಾಶಯ ಮೆಟ್ಟೂರು. ಈ ಕೂಡಲೇ ಸುಪ್ರೀಂ ಕೋರ್ಟ್ ತೀರ್ಪನ್ನು ಪುನರ್ ಪರಿಶೀಲಿಸಿ ಕರ್ನಾಟಕಕ್ಕೆ ಕುಡಿಯಲು ನೀರು ಉಳಿಸಬೇಕು ಎಂದರು. ಮುಂದಿನ ದಿನಗಳಲ್ಲಿ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ನಿವೃತ್ತ ನ್ಯಾಯಾಧೀಶರು, ಕಳೆದ ಹಲವಾರು ವರ್ಷಗಳಿಂದ ಕಾವೇರಿ ಗಲಭೆಯನ್ನು ಕಂಡಿರುವ ಪೊಲೀಸ್ ಅಧಿಕಾರಿಗಳು ಮತ್ತು ನೀರಾವರಿ ತಜ್ಞರ ಸಭೆ ಕರೆದು ಸಂಪೂರ್ಣ ಸಾಧಕ–ಬಾಧಕಗಳನ್ನು ಚರ್ಚೆ ಮಾಡಿ. ಒಂದು ವರದಿ ಸಿದ್ಧಪಡಿಸಿ, ರಾಜ್ಯದ ಪರವಾಗಿ ವಾದ ಮಂಡಿಸುತ್ತಿರುವವರಿಗೆ ನೀಡಬೇಕಿದೆ ಎಂದು ಸಲಹೆ ನೀಡಿದರು.

ಪ್ರತಿಭಟನೆಯಲ್ಲಿ ಅಧ್ಯಕ್ಷ ಜಯಪ್ರಕಾಶ್, ಉಪಾಧ್ಯಕ್ಷ ಎಂ.ಜೆ.ಸುರೇಶ್‌ಗೌಡ, ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್‌ಗೌಡ, ಶ್ರೀನಿವಾಸ, ಶುಭಶ್ರೀ, ಮಹಾದೇವಸ್ವಾಮಿ, ಪುಷ್ಪವತಿ, ಕೃಷ್ಣಯ್ಯ, ಮಂಜುಳಾ, ಬಾಲಕೃಷ್ಣ, ಪೈ. ಬಲರಾಂ, ರವೀಶ್, ನೇಹಾ, ಹನುಮಂತಯ್ಯ ಪ್ರದೀಪ್ ಕುಮಾರ್, ವೇದ, ಮಹೇಶ್, ಮಹಾದೇವ, ವಿಷ್ಣು ಅಶೋಕ್ ಪಾಲ್ಗೊಂಡಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಡಿ. 13– ಮೈಸೂರಿನ ಎನ್‌ಆರ್ ಮೊಹಲ್ಲಾ ಗಾಂಧಿನಗರ ಕ್ರೈಸ್ತರ ಪ್ರಗತಿಪರ ಸಂಸ್ಥೆ ವತಿಯಿಂದ ನಾಳೆ (ಗುರುವಾರ) ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ಬೆಲವತ್ತ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ವಿಶೇಷವಾಗಿ ಕಣ್ಣು, ಆರೋಗ್ಯ ಮತ್ತು ರಕ್ತದಾನಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.12.2023 ಗುರುವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023ರಿಂದ 15.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಮಾರ್ಗಶಿರ ಮಾಸ,
ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 1.30ರಿಂದ 3ಡಿವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಕ್ರೈಸ್ತರ ಪ್ರಗತಿಪರ ಸಂಸ್ಥೆ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ ಬೆಲವತ್ತ ಗ್ರಾಮ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ಗಂಟೆವರೆಗೆ.

■ **ಅದಮ್ಯ ರಂಗಶಾಲೆ :** ಪಿಯುಸಿ ಪಠ್ಯಾಧಾರಿತ ರಂಗ ಪ್ರದರ್ಶನ ಹಾಗೂ ಅದಮ್ಯ ರಂಗಚೇತನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಪೊಲೀಸ್ ಸಹಾಯಕ ಆಯುಕ್ತ ಶಾಂತಮಲ್ಲಪ್ಪ, ಅಧ್ಯಕ್ಷತೆ : ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಎನ್. ಉದಯಶಂಕರ್, ಆಶಯ ನುಡಿ: ಸಾಹಿತಿ ಟಿ.ಸತೀಶ್ ಜವರೇಗೌಡ, ಪ್ರಶಸ್ತಿ ಸ್ವೀಕಾರ: ರಂಗಕರ್ಮಿ ಜಯಶ್ರೀ ಇಡ್ಕಿದು, ಮುಖ್ಯ ಅತಿಥಿಗಳು: ನಗರಪಾಲಿಕೆ ಮಾಜಿ ಸದಸ್ಯ ಪಿ.ಪ್ರಶಾಂತ್‌ಗೌಡ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಗೌರವಾಧ್ಯಕ್ಷ ಎ.ಎಲ್.ಉಮೇಶ್, ಸ್ಥಳ: ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ :** ಸಮುದಾಯ ಆಧಾರಿತ ಪುನರ್ವಸತಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಎಎನ್‌ಎಸ್‌ಎಸ್‌ಐಆರ್‌ಡಿಪಿಆರ್ ನಿರ್ದೇಶಕರಾದ ಶ್ರೀಮತಿ ಕೆ. ಲಕ್ಷ್ಮಿಪ್ರಿಯಾ, ಗೌರವ ಅತಿಥಿಗಳು: ಪ್ರೊ.ರಂಗಸಾಯಿ, ಪ್ರೊ. ರೂಪಾ ನಾಗರಾಜನ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಭವನ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 10ಕ್ಕೆ.

■ **ಅಸೆಂಡೆನ್ಸ್:** ಆರ್. ಚೇತನ್ ಅವರಿಂದ ವಾಟರ್‌ಕಲರ್ ಸೋಲೋ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್.ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 8.30 ಆರೋಗ್ಯಾಮೃತ–ಪ್ರಾಯೋಜಿತ ಕಾರ್ಯಕ್ರಮ, 9.00 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 10.00 ಈ ಗಾಯಿತ್ರಿ –ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ–ರಶ್ಮಿ ಬಿನು, 4.00 ಜನಪದ ಸಂಗೀತ, 4.30 ರಸಮಂಜರಿ, 6.50 ಕೃಷಿರಂಗ–ಕಾಮಗೆರೆಯ ಕೊಳ್ಳೇಗಾಲ ರೈತ ಉತ್ಪಾದಕ ಕಂಪನಿ ಕಾರ್ಯ ಚಟುವಟಿಕೆ ಕುರಿತು ಪಿ.ಮಹದೇವಪ್ಪ ಹಾಗೂ ಎನ್.ಲಲಿತಾ ಅವರೊಂದಿಗೆ ಸಂವಾದ, 10.30 ಸವಿನೆನಪು

■ **ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಮಾನಸ ಗಂಗೋತ್ರಿ, ಮೈಸೂರು:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ ಪ್ರೊ. ಲಕ್ಷ್ಮೀನಾರಾಯಣ ಅರೋರ ಅವರಿಂದ ಭಾರತದ ಸಂವಿಧಾನ : ಭಾಷೆ ಮತ್ತು ಸಾಹಿತ್ಯ ಕುರಿತು ಉಪನ್ಯಾಸ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ವಿಜಯಲಕ್ಷ್ಮೀ ಎಸ್. ಕರಿಕಲ್, ಸ್ಥಳ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ದೇಸಿರಂಗ ಸಾಂಸ್ಕೃತಿಕ ಸಂಸ್ಥೆ :** ವಿಚಾರ ಸಂಕಿರಣ ಮತ್ತು ಸಂವಾದ ಕಾರ್ಯಕ್ರಮ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ರಂಗಕರ್ಮಿ ರಾಜಶೇಖರ ಕದಂಬ, ಹಿರಿಯ ಕಲಾವಿದ ರಾಮನಾಥ್ ಅವರಿಂದ ಯುವಕರಿಗೆ ರಂಗಭೂಮಿಯ ಅವಶ್ಯಕತೆ ಕುರಿತು ಉಪನ್ಯಾಸ, ರಂಗಾಯಣ ಹಿರಿಯ ಕಲಾವಿದ ಕೃಷ್ಣಕುಮಾರ್ ನಾರ್ಣಕಜೆ ಅವರಿಂದ ಬೆಪ್ಪುತಕ್ಕಡಿ ಬೋಳೇಶಂಕರ ನಾಟಕದ ಹೂರಣ ಕುರಿತು ಭಾಷಣ, ಸ್ಥಳ: ಕಲಾಮಂದಿರದ ರಂಗ ತಾಲೀಮು ಕೊಠಡಿ, ಸಂಜೆ 4.30ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಇಸ್ರೇ, ಮೈಸೂರು:** ಇಂಜಿನಿಯರ್ ಆರ್.ಗೋಪಾಲಕೃಷ್ಣನ್ ಅವರಿಂದ ರಾಷ್ಟ್ರೀಯ ಶಕ್ತಿ ಸಂರಕ್ಷಣಾ ದಿನದ ಅಂಗವಾಗಿ ಎನರ್ಜಿ ಕನ್ಸರ್‌ವೇಷನ್ ಆಫ್ ಏರ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಕುರಿತು ಉಪನ್ಯಾಸ, ಅಧ್ಯಕ್ಷತೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ದೀಪು, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ

■ **ಪಿಜಿಎಲ್ ಸಂಸ್ಮರಣಾ ವೇದಿಕೆ :** ಗಾನಕಲಾ ಭೂಷಣ ಪಿಜಿ. ಲಕ್ಷ್ಮೀನಾರಾಯಣ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ಸಂಜೆ 6ಕ್ಕೆ ವಿದ್ವಾನ್ ಸಿ. ಚೆಲುವರಾಜು ಅವರಿಗೆ ಗೌರವ ಸಮರ್ಪಣೆ, ಅಧ್ಯಕ್ಷತೆ: ನಾದಬ್ರಹ್ಮ ಸಂಗೀತ ಸಭಾ ಕಾರ್ಯದರ್ಶಿ ಕೆಎಸ್.ಎನ್. ಪ್ರಸಾದ್, ಮುಖ್ಯ ಅತಿಥಿಗಳು : ವಿದ್ವಾನ್ ಹೆಚ್.ಕೆ. ನರಸಿಂಹಮೂರ್ತಿ, ಸಂಜೆ 6.30ಕ್ಕೆ ವಿದ್ವಾನ್ ಸಂಪಗೋಡು ವಿಘ್ನರಾಜ ಅವರಿಂದ ಗಾಯನ, ವಿದ್ವಾನ್ ಸಿಂಧೂ ಸುಚೇತನ್–ಪಿಟೀಲು, ವಿದ್ವಾನ್ ಸಿ. ಚೆಲುವರಾಜು–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಸಂಗೀತ ಕಲಾನಿಧಿ ಶ್ರೀ ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ.

ಶಾಪಿಂಗ್ ಮಾಲ್‌ಗಿರುವಷ್ಟು ಭದ್ರತೆಯೂ ಸಂಸತ್ತಿಗಿಲ್ಲದಿರುವುದು ದುರಂತ: ಕಾಂಗ್ರೆಸ್

ಬೆಂಗಳೂರು, ಡಿ.13– ಲೋಕಸಭೆಯಲ್ಲಿ ಭದ್ರತಾಲೋಪ ಸಂಭವಿಸಿರುವುದನ್ನು ಖಂಡಿಸಿರುವ ರಾಜ್ಯ ಕಾಂಗ್ರೆಸ್, ದೇಶ ರಕ್ಷಣೆಯಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿರುವುದಕ್ಕೆ ಇದು ಸ್ಪಷ್ಟ ಉದಾಹರಣೆ ಎಂದಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ತನ್ನ ಎಕ್ಸ್ ಖಾತೆಯಲ್ಲಿ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, 'ಹಿಂದೆ 2001ರಲ್ಲಿ ಇದೇ ದಿನ ಸಂಸತ್ ಭವನದ ಮೇಲೆ ಉಗ್ರರ ದಾಳಿಯಾಗಿತ್ತು. ಆಗಲೂ ಬಿಜೆಪಿ ಆಡಳಿತವಿತ್ತು. ಈಗ ಸಂಸತ್ ಭವನದ ಒಳಗೆಯೇ ಭದ್ರತಾ ಲೋಪವಾಗಿದೆ. ಸಂಸತ್ತಿನಲ್ಲಿ ಸಂಸದರನ್ನು ರಕ್ಷಿಸಲು ಕೇಂದ್ರ ಸರ್ಕಾರ ವಿಫಲವಾಗಿದೆ' ಎಂದು ಕಿಡಿಕಾರಿದೆ.

ಡಿಸೆಂಬರ್ 13ರ ಒಳಗೆ ಸಂಸತ್ತನ್ನು ಸ್ಫೋಟಿಸುತ್ತೇವೆ ಎಂದು ಖಲಿಸ್ತಾನಿ ಉಗ್ರರು ಬೆದರಿಕೆ ಹಾಕಿದ ನಂತರವೂ ಸಂಸತ್ತಿನ ಭದ್ರತೆಯನ್ನು ನಿರ್ಲಕ್ಷಿಸಿದ್ದೇಕೆ? 20 ಲಕ್ಷ ಕೋಟಿ ರೂ. ಖರ್ಚು ಮಾಡಿ ಕಟ್ಟಿದ ಸಂಸತ್ತಿಗೆ ಯಾರು ಬೇಕಿದ್ದರೂ ನುಗ್ಗಬಹುದೇ? ಒಂದು ಶಾಪಿಂಗ್ ಮಾಲ್‌ನಲ್ಲಿರುವಷ್ಟು ಭದ್ರತೆಯೂ ಸಂಸತ್ತಿನಲ್ಲಿಲ್ಲದಿರುವುದು ಬಹುದೊಡ್ಡ ದುರಂತ ಎಂದಿದೆ.

ಸಂಸತ್ ಭವನದೊಳಗೆ ಬಣ್ಣದ ಹೊಗೆ ಸಿಂಪಡಿಸಿದ ಆಗಂತುಕರಿಗೆ ಅಕಸ್ಮಾತ್ ಕಾಂಗ್ರೆಸ್ ಸಂಸದರಿಂದ ಪಾಸ್ ಸಿಕ್ಕಿದಿದ್ದರೆ ಬಿಜೆಪಿಗರು ಹೇಗೆ ವರ್ತಿಸುತ್ತಿದ್ದರು? ಈಗೇಕೆ ಬಿಜೆಪಿ ನಾಯಕರು ಏನೂ ಆಗಿಯೇ ಇಲ್ಲ ಎಂಬಂತೆ ಸುಮ್ಮನಾಗಿದ್ದಾರೆ? ಭದ್ರತಾ ಲೋಪದ ಬಗ್ಗೆ ಬಿಜೆಪಿ ನಾಯಕರು ತುಟಿ ಬಿಚ್ಚದಿರುವುದೇಕೆ? ಎಂದು ಕೇಳಿದೆ.

ಸಂಸತ್ತಿಗೆ ನುಗ್ಗಿದ ಘಾತುಕರು ಪಾಸ್ ಪಡೆದಿದ್ದು ಪ್ರತಾಪ್ ಸಿಂಹರಿಂದ. ಈ ದಾಳಿಕೋರರು ಅವರ ಆಪ್ತ ವಲಯದವರೇ? ಪ್ರತಾಪ್ ಸಿಂಹರಿಂದಲೂ ಈ ದಾಳಿಯ ಷಡ್ಯಂತ್ರ ನಡೆದಿತ್ತೇ? ಈ ಎಲ್ಲಾ ಸಂಗತಿಗಳ ತನಿಖೆ ನಡೆಸಲು ಇದುವರೆಗೂ ಪ್ರತಾಪ್ ಸಿಂಹರನ್ನು ವಶಕ್ಕೆ ಪಡೆದಿಲ್ಲವೇಕೆ? ಎಂದು ಪ್ರಶ್ನಿಸಿದೆ. ಈ ಕೃತ್ಯದಲ್ಲಿ ಕೂಗುಮಾರಿ ಪ್ರತಾಪ್ ಸಿಂಹರ ಸಹಕಾರ ಇರುವುದು ಇನ್ನೊಂದು ದುರಂತ. ಪ್ರತಾಪ್ ಸಿಂಹ ಅವರನ್ನು ಸಂಸತ್ ಸದಸ್ಯ ಸ್ಥಾನದಿಂದ ವಜಾಗೊಳಿಸಿ ಸ್ಪೀಕರ್ ತನಿಖೆಗೆ ಆದೇಶಿಸಬೇಕು ಎಂದು ಒತ್ತಾಯಿಸಿದೆ.

ಸಾಗರ್ ಶರ್ಮಾ ಆಟೋ ಚಾಲಕ; ಮನೋರಂಜನ್, ನೀಲಂ, ಅಮೋಲ್ ಶಿಂಧೆ ನಿರುದ್ಯೋಗಿಗಳು...


ಸಾಗರ್


ಮನೋರಂಜನ್


ನೀಲಂ


ಅಮೋಲ್

ನವದೆಹಲಿ: ಸಂಸತ್‌ಗೆ ನುಗ್ಗಿ ಆತಂಕ ಸೃಷ್ಟಿಸಿದ ಇಬ್ಬರು ಹಾಗೂ ಸಂಸತ್‌ನ ಹೊರಗೆ ಟ್ರಾನ್ಸ್‌ಪೋರ್ಟ್ ಭವನದ ಮುಂದೆ ಬಣ್ಣದ ಹೊಗೆ ಸಿಡಿಸಿ ಘೋಷಣೆ ಕೂಗಿದ ಇಬ್ಬರು ಸೇರಿದಂತೆ ನಾಲ್ವರ ಹಿನ್ನೆಲೆಯನ್ನು ಪ್ರಾಥಮಿಕ ಹಂತದಲ್ಲಿ ದೆಹಲಿ ಪೊಲೀಸರು ಕಲೆ ಹಾಕಿದ್ದಾರೆ.

ಬಂಧಿಸಲ್ಪಟ್ಟಿರುವ ನಾಲ್ವರ ಪೈಕಿ ಸಾಗರ್ ಶರ್ಮಾ ಆಟೋ ಚಾಲಕನಾಗಿದ್ದರೆ, ಮಹಿಳೆ ನೀಲಂ ಸೇರಿದಂತೆ ಉಳಿದ ಮೂವರೂ ನಿರುದ್ಯೋಗಿಗಳು ಎಂಬುದು ತಿಳಿದು ಬಂದಿದೆ. ಹರಿಯಾಣ ಮಹಿಳೆ ನೀಲಂ ಯುಪಿಎಸ್‌ಸಿ ಪರೀಕ್ಷೆ ಬರೆಯಲು ತಯಾರಿ ನಡೆಸುತ್ತಿರುವುದಾಗಿ ಮನೆಯಲ್ಲಿ ಹೇಳಿಕೊಳ್ಳುತ್ತಿದ್ದಳು. ಆದರೆ ಆಕೆ ಅಂತಹ ತಯಾರಿ ನಡೆಸಿದಂತೆ ಕಂಡುಬಂದಿಲ್ಲ. ಅದಕ್ಕೆ ಕಾರಣ ಆಕೆ ವಯಸ್ಸು 42. ಯುಪಿಎಸ್‌ಸಿ ಪರೀಕ್ಷೆ ಬರೆದು ಕೇಂದ್ರೀಯ ಸೇವೆಯಲ್ಲಿ ಸೇರಲು ಆಕೆಗೆ ವಯಸ್ಸು ಮೀರಿದೆ. ಅಲ್ಲದೆ ಹಲವಾರು ಹೋರಾಟಗಳಲ್ಲಿ ಭಾಗವಹಿಸಿದ್ದಾಳೆ ಎಂಬುದು ಗೊತ್ತಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ ವಿರುದ್ಧದ ಹೋರಾಟಗಳಲ್ಲಿ ಈಕೆ ಹೆಚ್ಚಾಗಿ ಭಾಗವಹಿಸಿದ್ದಾಳೆ. ದೆಹಲಿಯಲ್ಲಿ ರೈತರು ನಡೆಸಿದ ಹೋರಾಟದಲ್ಲೂ ನೀಲಂ ಭಾಗಿಯಾಗಿದ್ದಾಳೆ ಎಂದು ತಿಳಿದುಬಂದಿದೆ. ತಮ್ಮ ಮನೆಯಲ್ಲಿ ಪರೀಕ್ಷೆ ಬರೆಯಲು ಹೋಗುತ್ತಿದ್ದೇನೆ ಎಂದು ತಿಳಿಸಿದ್ದಳು ಎಂದಿರುವ ಈಕೆಯ ಸಹೋದರ, ನೀಲಂ ದೆಹಲಿಗೆ ಹೋಗಿರುವ ಬಗ್ಗೆ ತಮಗೆ ಮಾಹಿತಿ ಇರಲಿಲ್ಲ ಎಂದಿದ್ದಾರೆ.

ಲಾತೂರ್ ಅಮೋಲ್: ಇನ್ನು ಮಹಾರಾಷ್ಟ್ರದ ಲಾತೂರ್ ನಿವಾಸಿಯಾಗಿರುವ ಅಮೋಲ್ ಶಿಂಧೆ 25 ವರ್ಷದ ಯುವಕ. ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿದ್ದಾನೆ. ಪೊಲೀಸ್ ಇಲಾಖೆಯಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳುವ ನಿಟ್ಟಿನಲ್ಲಿ ಹಲವಾರು ಪ್ರಯತ್ನಗಳನ್ನು ಮಾಡಿದ್ದಾನೆ ಎಂದು ಗೊತ್ತಾಗಿದೆ. ಈತ ದೆಹಲಿಯಲ್ಲಿ ಸೇನಾ ನೇಮಕಾತಿ ಶಿಬಿರ ನಡೆಯುತ್ತಿದ್ದು, ತಾನು ಸೇನೆಯಲ್ಲಿ ಸೇರುವ ಸಲುವಾಗಿ ದೆಹಲಿಗೆ ಹೋಗುತ್ತಿರುವುದಾಗಿ ಮನೆಯಲ್ಲಿ ತಿಳಿಸಿ ಬಂದಿದ್ದ ಎಂಬುದು ಗೊತ್ತಾಗಿದೆ.

ಉತ್ತರಪ್ರದೇಶದ ಸಾಗರ್: ಸಂಸತ್‌ಗೆ ಹಾರಿ ಮೇಜುಗಳ ಮೇಲೆ ಜಿಗಿದಾಡಿದ ಸಾಗರ್ ಶರ್ಮಾ ಉತ್ತರಪ್ರದೇಶದವನಾದರೂ, 2 ವರ್ಷಗಳ ಕಾಲ ಬೆಂಗಳೂರಿನಲ್ಲಿದ್ದಾಗ ಈತನಿಗೆ ಮೈಸೂರಿನ ಮನೋರಂಜನ್ ಪರಿಚಯವಾಗಿರಬಹುದು ಎನ್ನಲಾಗಿದೆ. ಈತ ವೃತ್ತಿಯಲ್ಲಿ ಆಟೋ ಚಾಲಕ.

ಮನೋರಂಜನ್: ಮೈಸೂರಿನ ವಿಜಯನಗರ ನಿವಾಸಿ ಮನೋರಂಜನ್ ಬಂಧಿತ ನಾಲ್ವರ ಪೈಕಿ ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಸದೃಢನಾಗಿದ್ದಾನೆ. ಅಲ್ಲದೇ ಇಂಜಿನಿಯರಿಂಗ್ ವ್ಯಾಸಂಗ ಮಾಡಿದ್ದಾನೆ. ಈತ ಕ್ರಾಂತಿಕಾರ ನಾಯಕರ ಪುಸ್ತಕಗಳನ್ನು ಹೆಚ್ಚಾಗಿ ಓದುತ್ತಿದ್ದ. ಯಾವುದೇ ಕೆಲಸಕ್ಕೆ ಹೋಗುವುದರ ಬಗ್ಗೆ ನಿರಾಸಕ್ತಿ ಹೊಂದಿದ್ದ ಈತ, ಬೆಂಗಳೂರು, ಮಹಾರಾಷ್ಟ್ರ ಹಾಗೂ ದೆಹಲಿಗೆ ಪದೇ ಪದೇ ಭೇಟಿ ನೀಡುತ್ತಿದ್ದ ಎಂದು ತಿಳಿದು ಬಂದಿದೆ. ಆದರೆ ಬೇರೆ ಬೇರೆ ರಾಜ್ಯಗಳಿಗೆ ಸೇರಿದ ಈ ನಾಲ್ವರು ಒಂದುಗೂಡಿದ್ದು ಹೇಗೆ? ಈ ನಾಲ್ವರ ಹಿಂದೆ ಬೇರೆ ಯಾವುದಾದರೂ ಸಂಘಟನೆ ಇರಬಹುದೇ? ವ್ಯವಸ್ಥಿತವಾಗಿ ಸಂಘಟಿತರಾಗಿ ಕೃತ್ಯ ಎಸಗಲು ಯಾವ ಸಿದ್ಧಾಂತ ಇವರಿಗೆ ಪ್ರೇರೇಪಣೆ ನೀಡಿದೆ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ. ಈ ನಾಲ್ವರೂ ಸೇರಿದಂತೆ 6 ಮಂದಿ ಕೆಲ ದಿನಗಳಿಂದ ಒಂದೇ ಸ್ಥಳದಲ್ಲಿ ಇದ್ದರು ಎಂಬ ಮಾಹಿತಿ ತನಿಖಾ ಸಂಸ್ಥೆಗಳಿಗೆ ತಿಳಿದು ಬಂದಿದೆ ಹೇಳಲಾಗಿದೆ.

ಲೋಕಸಭಾ ಕಲಾಪದ ವೇಳೆ ಸಂಸತ್ ಭವನದೊಳಗೆ ನುಗ್ಗಿದ ದುಷ್ಕರ್ಮಿಗಳಿಗೆ ಪಾಸ್

ಸಂಸದ ಪ್ರತಾಪ್ ಸಿಂಹ ವಿರುದ್ಧ ಕಾಂಗ್ರೆಸ್ ಭಾರಿ ಪ್ರತಿಭಟನೆ







● ಸಂಸದರ ಕಚೇರಿ ಮುತ್ತಿಗೆ ಯತ್ನ ● ಧಿಕ್ಕಾರ ಕೂಗಿ ಆಕ್ರೋಶ

ಮೈಸೂರು, ಡಿ.13(ಎಂಕೆ)– ಲೋಕಸಭಾ ಕಲಾಪದ ವೇಳೆ ಒಳನುಗ್ಗಿದ ವ್ಯಕ್ತಿಗಳಿಗೆ ತಮ್ಮ ಕಚೇರಿಯಲ್ಲೇ ಪಾಸ್ ನೀಡಿರುವ ಸಂಸದ ಪ್ರತಾಪ್ ಸಿಂಹ ಅವರನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ವತಿಯಿಂದ ಬುಧವಾರ ಭಾರಿ ಪ್ರತಿಭಟನೆ ನಡೆಸಲಾಯಿತು.

ಹುಣಸೂರು ರಸ್ತೆಯಲ್ಲಿರುವ ಜಲದರ್ಶಿನಿ ಅತಿಥಿ ಗೃಹದ ಗೇಟ್ ಬಳಿ ಜಮಾವಣೆಗೊಂಡ ಕಾಂಗ್ರೆಸ್ ಕಾರ್ಯಕರ್ತರು, ಸಂಸದ ಪ್ರತಾಪ್ ಸಿಂಹ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸಂಸತ್ ಕಲಾಪದ ವೇಳೆ ಒಳನುಗ್ಗಿ ದಾಂಧಲೆ ನಡೆಸಿದವರಿಗೆ ಪಾಸ್ ನೀಡಿದ ಸಂಸದರನ್ನು ಕೂಡಲೇ ಬಂಧಿಸಬೇಕು. ಅಲ್ಲದೆ ಅವರ ಕಚೇರಿಗೆ ಬೀಗಹಾಕಿ, ಸ್ಥಳ ಮಹಜರು ನಡೆಸಬೇಕು ಎಂದು ಪಟ್ಟು ಹಿಡಿದರಲ್ಲದೆ ಪ್ರತಾಪ್ ಸಿಂಹರನ್ನು ಲೋಕಸಭಾ ಸದಸ್ಯತ್ವದಿಂದ ಅವಮಾನತು ಮಾಡುವಂತೆ ಘೋಷಣೆಗಳನ್ನು ಕೂಗಿದರು.

ಕಚೇರಿ ಮುತ್ತಿಗೆ ಯತ್ನ: ಸಂಸದರ ಕಚೇರಿಯನ್ನು ಪೊಲೀಸರು ಕೂಡಲೇ ಬಂದ್ ಮಾಡಬೇಕು. ಇಲ್ಲವೇ ನಮಗೆ ಬೀಗಹಾಕಲು ಅವಕಾಶ ಕೊಡಿ ಎಂದ ಪ್ರತಿಭಟನಾಕಾರರು, ಗೇಟ್‌ಗೆ ಅಡ್ಡ ಹಾಕಿದ್ದ ಬ್ಯಾರಿಕೇಡ್ ತಡೆಗೋಡೆ ಏರಿ ಸಂಸದರ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಗೇಟ್ ಬಳಿ ಸಾಧ್ಯವಾಗದಿದ್ದಾಗ ಕಾಂಪೌಂಡ್ ಮೇಲೆ ಜಿಗಿದು ಜಲದರ್ಶಿನಿ ಒಳನುಗ್ಗಲು ಪ್ರಯತ್ನಿಸಿದರಾದರೂ ಸಾಧ್ಯವಾಗಲಿಲ್ಲ. ಇದರಿಂದ ಸಿಟ್ಟಿಗೆದ್ದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್. ಮೂರ್ತಿ, ಮಾಜಿ ಮೇಯರ್ ಅಯೂಬ್ ಖಾನ್, ಮುಖಂಡ ಪ್ರದೀಪ್‌ಕುಮಾರ್ ಇತರರು ಪೊಲೀಸರೊಂದಿಗೆ ವಾಗ್ವಾದಕ್ಕಿಳಿದರು. ಇದರಿಂದ ಗಂಟೆಗೂ ಹೆಚ್ಚುಕಾಲ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು.

ರಸ್ತೆ ತಡೆದು ಪ್ರತಿಭಟನೆ: ಕಚೇರಿ ಮುತ್ತಿಗೆ ಯತ್ನ ವಿಫಲವಾದ ಬಳಿಕ ಹುಣಸೂರು ಮುಖ್ಯರಸ್ತೆಯಲ್ಲೇ ಮಲಗಿದ ಕಾಂಗ್ರೆಸ್ ಕಾರ್ಯಕರ್ತರು, ರಸ್ತೆ ತಡೆದು ಆಕ್ರೋಶ ಹೊರಹಾಕಿದರು. ರಸ್ತೆ ತಡೆ ನಡೆಸಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿ ವಾಹನ ಸವಾರರು, ಪ್ರಯಾಣಿಕರು ಪರದಾಡುವಂತಾಯಿತು.

ಮಹಜರು ನಡೆಸಬೇಕು: ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಮಾತನಾಡಿ, ಲೋಕಸಭೆ ಕಲಾಪದ ವೇಳೆ ಒಳನುಗ್ಗಿದ್ದ ಮನೋರಂಜನ್, ಬಿಜೆಪಿ ಐಟಿ ಸೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಡಿ.7ರಂದು ಸಂಸದರ ಕಚೇರಿಯಲ್ಲಿ ಸಭೆ ಮಾಡಿ ಘಟನೆಯ ರೂಪುರೇಷೆ ಹಾಕಿದ್ದರು. ಆದ್ದರಿಂದ ಸಂಸದರ ಕಚೇರಿಯಲ್ಲಿ ಮಹಜರು ನಡೆಸಬೇಕು. ಸಿಸಿಟಿವಿ ದೃಶ್ಯಗಳನ್ನು ಹಾಗೂ ಕಡತಗಳನ್ನು ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದರು.

ಚುನಾವಣೆಯ ಹುನ್ನಾರ: ಇದೊಂದು ಮುಂಬರುವ ಲೋಕಸಭಾ ಚುನಾವಣೆಯ ಹುನ್ನಾರವಾಗಿದೆ. ಈ ಘಟನೆಯಲ್ಲಿ ಒಬ್ಬ ಮುಸ್ಲಿಂ ಯುವಕ ಇದ್ದಿದ್ದರೆ ದೇಶಾದ್ಯಂತ ಬೆಂಕಿ ಹಚ್ಚುತ್ತಿದ್ದರು. ಅಲ್ಲದೆ ಒಳನುಗ್ಗಿದವರಲ್ಲಿ ಯಾರು ಕೂಡ ದಲಿತ ಸಮುದಾಯದವರಲ್ಲ. ಆದರೆ ಅವರು ಜೈ ಭೀಮ್ ಎಂದು ಘೋಷಣೆ ಕೂಗಿರುವುದರಲ್ಲಿ ಸಂಚಿದೆ. ಇದೆಲ್ಲದರ ಬಗ್ಗೆ ಸಿಬಿಐ ತನಿಖೆಯಾಗಬೇಕು. ಸಂಸದ ಸ್ಥಾನದಿಂದ ಪ್ರತಾಪ್ ಸಿಂಹ ಅವರನ್ನು ವಜಾಗೊಳಿಸಬೇಕು ಎಂದು ಕಿಡಿಕಾರಿದರು.

ಮತ್ತೊಂದು ಸುಳ್ಳು: ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಪೊಲೀಸರು ಕೂಡಲೇ ಸಂಸದರ ಕಚೇರಿಯನ್ನು ಲಾಕ್ ಮಾಡಬೇಕು. ಅವರು ಮಾಡದಿದ್ದರೆ, ದೇಶದ ಪ್ರಜೆಗಳಾಗಿ ನಾವೇ ಸಂಸದರ ಕಚೇರಿಗೆ ಬೀಗ ಹಾಕುತ್ತೇವೆ. ಲೋಕಸಭೆಗೆ ಯಾವುದೇ ಕಾರಣಕ್ಕೂ ಸಣ್ಣ ಇರುವೆಯೂ ನುಗ್ಗಲು ಸಾಧ್ಯವಿಲ್ಲ ಎಂಬ ಪ್ರಧಾನಿಗಳ ಮಾತು ಸುಳ್ಳಾಗಿದ್ದು, ಅವರ ಸುಳ್ಳುಗಳ ಸಾಲಿಗೆ ಮತ್ತೊಂದು ಸುಳ್ಳು ಸೇರಿದಂತಾಗಿದೆ ಎಂದು ಟೀಕಿಸಿದರು.

ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಭಾಸ್ಕರ್, ಬಸವಣ್ಣ, ಗಿರೀಶ್, ಈಶ್ವರ ಚಕ್ಕಡಿ, ಡೈರಿ ವೆಂಕಟೇಶ್, ಮಹೇಶ್, ಯುವ ಕಾಂಗ್ರೆಸ್ ಪದಾಧಿಕಾರಿಗಳು, ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಂಸತ್ ಭವನವೇ ಸುರಕ್ಷಿತವಿಲ್ಲ, ಇನ್ನು ದೇಶದ ಗಡಿಗಳ ಸ್ಥಿತಿಯೇನು?

ಪ್ರಧಾನಿ ನರೇಂದ್ರ ಮೋದಿ ಉತ್ತರಿಸಲೇಬೇಕು: ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಡಿ.13–ಸಂಸತ್ ಭವನದ ಮೇಲಿನ ಆಗಂತುಕರ ಪ್ರವೇಶದ ವಿಚಾರವಾಗಿ ಕೇಂದ್ರ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ದೇಶದ ಸಂಸತ್ ಭವನವೇ ಸುರಕ್ಷಿತವಿಲ್ಲ, ಇನ್ನು ದೇಶದ ಗಡಿಗಳ ಸ್ಥಿತಿಯೇನು? ಪ್ರಧಾನ ಮಂತ್ರಿ ನರೇಂದ್ರ ಮೋದಿ ಉತ್ತರಿಸಲೇಬೇಕು ಎಂದು ಹೇಳಿದ್ದಾರೆ.

ಈ ಕುರಿತು ಟ್ವಿಟರ್ ಮೂಲಕ ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, 'ರಾಷ್ಟ್ರದ ಸಂಸತ್ತಿನ ಭದ್ರತೆಯನ್ನು ಖಾತರಿಪಡಿಸದಿದ್ದಾಗ, ರಾಷ್ಟ್ರದ ಗಡಿಗಳ ಭದ್ರತೆಯ ಬಗ್ಗೆ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವ ಜವಾಬ್ದಾರಿ ಪ್ರಧಾನಿ ನರೇಂದ್ರ ಮೋದಿ ಮೇಲಿದೆ ಎಂದು ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

ಇಡೀ ದೇಶವನ್ನೇ ಬೆಚ್ಚಿ ಬೀಳಿಸಿರುವ ಸಂಸತ್ ಭವನದ ಮೇಲೆ ಇಂದು ನಡೆದಿರುವ ದಾಳಿ ಖಂಡನೀಯವಾದುದು ಮಾತ್ರವಲ್ಲ ಅತ್ಯಂತ ಆಘಾತಕಾರಿಯಾದುದು. ಸಂಸದರೆಲ್ಲರೂ ಸುರಕ್ಷಿತವಾಗಿದ್ದಾರೆ ಎನ್ನುವುದು ಸಮಾಧಾನದ ಸಂಗತಿ. ಅತ್ಯಂತ ಬಿಗಿ ಭದ್ರತೆಯ ಹೊರತಾಗಿಯೂ ಇಂತಹದ್ದೊಂದು ಘಟನೆ ನಡೆದಿರುವುದು ಆಘಾತಕಾರಿ ಬೆಳವಣಿಗೆ.



ಇದು ಸಂಪೂರ್ಣವಾಗಿ ಭದ್ರತಾ ವ್ಯವಸ್ಥೆಯ ಲೋಪ ಎನ್ನುವುದು ಸ್ಪಷ್ಟವಾಗಿದೆ. ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ಘಟನೆ ಹಿಂದಿನ ಸಂಪೂರ್ಣ ಸತ್ಯವನ್ನು ದೇಶದ ಮುಂದಿಡುವುದು ಕೇಂದ್ರ ಸರ್ಕಾರ, ಬಹಳ ಪ್ರಮುಖವಾಗಿ ದೇಶದ ಗೃಹ ಸಚಿವ ಅಮಿತ್ ಶಾ ಅವರ ಕರ್ತವ್ಯವಾಗಿದೆ. 22 ವರ್ಷಗಳ ಹಿಂದೆ (13–12–2001) ಸಂಸತ್ ಮೇಲೆ ಭಯೋತ್ಪಾದಕರು ನಡೆಸಿದ್ದ ದಾಳಿಯ ದಿನವನ್ನೇ ಆರಿಸಿಕೊಂಡು ಈ ದಾಳಿ ನಡೆದಿರುವುದನ್ನು ಗಮನಿಸಿದರೆ ಇದರ ಹಿಂದೆ ಬೇರೆ ಹುನ್ನಾರಗಳಿರಬಹುದೆಂಬ ಸಂಶಯವೂ ಮೂಡುತ್ತಿದೆ. 2001ರ ದಾಳಿಯ ಸಮಯದಲ್ಲಿಯೂ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರವೇ ಇತ್ತು ಎನ್ನುವುದನ್ನು ಗಮನಿಸಬೇಕಾಗುತ್ತದೆ. ಇದು ದೇಶದ ಸುರಕ್ಷತೆಯ ಬಗ್ಗೆ ಹಲವಾರು ಪ್ರಶ್ನೆಗಳಿಗೆ ಕಾರಣವಾಗಿದೆ. ಸಂಸತ್ ಭವನದ ಮೇಲೆ ದಾಳಿ ನಡೆಸಿದ ಯುವಕರಿಗೆ ಮೈಸೂರಿನ ಲೋಕಸಭಾ ಸದಸ್ಯ ಪ್ರತಾಪ್ ಸಿಂಹ ಅವರೇ ಪಾಸ್ ನೀಡಿರುವ ವರದಿಗಳು ಬರುತ್ತಿವೆ. ಈ ಸುದ್ದಿ ನಿಜವಾಗಿದ್ದಲ್ಲಿ ಈ ಸಂಸದರನ್ನು ಕೂಡಾ ವಿಚಾರಣೆಗೆ ಒಳಪಡಿಸಬೇಕಾಗುತ್ತದೆ. ಪಾಸ್ ನೀಡಿರಬೇಕಾಗಿದ್ದರೆ ಯುವಕರು ಸಂಸದರ ಪರಿಚಯಸ್ಥರಾಗಿರಬಹುದು. ಪರಿಚಯಸ್ಥರಲ್ಲದೆ ಇದ್ದರೆ ಅಪರಿಚಿತರಿಗೆ ಪಾಸುಗಳನ್ನು ಹೇಗೆ ನೀಡಲಾಯಿತು ಎನ್ನುವ ಪ್ರಶ್ನೆ ಕೂಡಾ ಹುಟ್ಟುತ್ತದೆ. ಕಾನೂನಿನಲ್ಲಿ ಬೇಜವಾಬ್ದಾರಿಯಿಂದ ನಡೆಯುವ ಅನಾಹುತ ಕೂಡಾ ಶಿಕ್ಷಾರ್ಹ ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ದೇಶದ ಹೃದಯದಂತಿರುವ ಸಂಸತ್ ಭವನಕ್ಕೆ ಬೇರೆ ಯಾವುದೇ ಪ್ರದೇಶ ಇಲ್ಲವೆ ಕಟ್ಟಡವನ್ನು ಮೀರಿದ ಬಿಗಿ ಭದ್ರತೆಯನ್ನು ನೀಡಲಾಗಿದೆ. ಹೀಗಿದ್ದರೂ ಈ ಯುವಕರು ಸ್ಮೋಕ್ ಬಾಂಬು ಹಿಡಿದುಕೊಂಡು ಸಂಸತ್ ಒಳಗೆ ಹೇಗೆ ಪ್ರವೇಶಿಸಿದರು? ಈ ಕೃತ್ಯದಲ್ಲಿ ಒಳಗಿನವರೇ ಯಾರಾದರೂ ಭಾಗಿಯಾಗಿದ್ದಾರೆಯೇ? ಈ ಯುವಕರ ಕೃತ್ಯದ ಹಿಂದೆ ಬೇರೆ ಯಾವುದಾದರೂ ಬಾಹ್ಯ ಶಕ್ತಿಗಳ ಕೈವಾಡ ಇದೆಯೇ? ದೇಶದ ಸಂಸತ್ ಭವನವೇ ಸುರಕ್ಷಿತವಾಗಿಲ್ಲದಿರುವಾಗ ದೇಶದ ಗಡಿ ಸುರಕ್ಷಿತವಾಗಿರುತ್ತದೆಯಾ? ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿಯೇ ಹುಟ್ಟಿಕೊಳ್ಳುತ್ತದೆ. ಈ ಪ್ರಶ್ನೆಗಳಿಗೆಲ್ಲ ಉತ್ತರಿಸಬೇಕಾಗಿರುವ ಹೊಣೆ ದೇಶದ ಪ್ರಧಾನಿ ನರೇಂದ್ರ ಮೋದಿ ಅವರದ್ದಾಗಿದೆ ಎಂದು ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

ಸಂಸದ ಪ್ರತಾಪ್ ಸಿಂಹ ಬಹಳ ಬುದ್ಧಿವಂತ, ಯಾಕೆ ಇಂಥವರಿಗೆ ಪಾಸ್ ಕೊಟ್ರೋ?



ಬೆಂಗಳೂರು, ಡಿ.13– ಸಂಸದ ಪ್ರತಾಪ್ ಸಿಂಹ ಬಹಳ ಬುದ್ಧಿವಂತ. ಅವರು ಯಾಕೆ ಇಂಥವರಿಗೆ ಪಾಸ್ ಕೊಟ್ಟರೋ? ಅವರ ಹೆಸರು ಹೇಳಲು ಇಲ್ಲಿ ನನಗೆ ಇಷ್ಟವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಾಪ್ ಸಿಂಹ ವಿರುದ್ಧ ಕಿಡಿಕಾರಿದ್ದಾರೆ.

ಪಾರ್ಲಿಮೆಂಟ್ ಒಳಗೆ ಕಲರ್ ಸ್ಮೋಕ್ ಸಿಡಿಸಿದ ಯುವಕರಿಗೆ ಪ್ರತಾಪ್ ಸಿಂಹ ಕಚೇರಿಯಿಂದಲೇ ಪಾಸ್ ವಿತರಣೆಯಾಗಿದೆ ಎಂದು ಆರೋಪಿಸಲಾಗಿದೆ. ಈ ಕುರಿತು ಡಿಸಿಎಂ ಡಿಕೆ ಶಿವಕುಮಾರ್ ಮಾಧ್ಯಮದವರೊಂದಿಗೆ ಮಾತನಾಡಿ, ಎಲ್ಲರೂ ಫೋನ್ ಮಾಡುತ್ತಿದ್ದಾರೆ. ಏನು? ಯಾಕೆ? ಅಂತ ಕೇಳುತ್ತಿದ್ದಾರೆ. ನಾನು ಟಿವಿಯಲ್ಲಿ ನೋಡಿದೆ. ಮೇಲಿಂದಲೇ ಅವರು ಹಾರಿದ್ದಾರೆ. ಸಂಸದರೆಲ್ಲ ಇಲಿಗಳಂತೆ ಬಚ್ಚಿಕೊಳ್ಳುತ್ತಿದ್ದಾರೆ. ನಮ್ಮ ಪ್ರತಿ ಪಕ್ಷದವರೇ ಇದರ ಹೊಣೆ ತೆಗೆದುಕೊಳ್ಳಬೇಕು. ಅವರು ಏನು ಬುದ್ಧಿವಾದ ಹೇಳುತ್ತಾರೋ ಹೇಳಲಿ ಎಂದು ಹರಿಹಾಯ್ದರು.


ಬುಧವಾರಕ್ಕೆ ಸರಿಯಾಗಿ 22 ವರ್ಷದ ಹಿಂದೆ ಸಂಸತ್ ಭವನದ ಮೇಲೆ ನಡೆದಿತ್ತು ಘೋರ ಭಯೋತ್ಪಾದಕರ ದಾಳಿ

ಒಂಭತ್ತು ಭದ್ರತಾ ಸಿಬ್ಬಂದಿ ಹುತಾತ್ಮರಾದರೆ; ಐವರು ಭಯೋತ್ಪಾದಕರು ಬಲಿಯಾಗಿದ್ದರು

ನವದೆಹಲಿ,ಡಿ.13–ಕಳೆದ 22 ವರ್ಷದ ಹಿಂದೆ 2001ರ ಡಿಸೆಂಬರ್ 13ರಂದು ಭಾರತದ ಸಂಸತ್ ಭವನದ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ್ದರು. ಈ ದಾಳಿಯಲ್ಲಿ 6 ಮಂದಿ ದೆಹಲಿ ಪೊಲೀಸ್ ಸಿಬ್ಬಂದಿ, ಇಬ್ಬರು ಸಂಸತ್ ಭದ್ರತಾ ಸೇವಾ ಸಿಬ್ಬಂದಿ ಹಾಗೂ ಒಬ್ಬ ತೋಟಗಾರ ಸೇರಿ ಒಂಭತ್ತು ಮಂದಿ ಹುತಾತ್ಮರಾಗಿದ್ದರು, ಭದ್ರತಾ ಸಿಬ್ಬಂದಿಯಿಂದ ನಾಲ್ವರು ಭಯೋತ್ಪಾದಕರು ಕೊಲ್ಲಲ್ಪಟ್ಟಿದ್ದರು. ಮತ್ತೋರ್ವ ಆತ್ಮಹತ್ಯಾ ಬಾಂಬ್‌ಗೆ ಬಲಿಯಾಗಿದ್ದ. ಇಂದು ಪ್ರಧಾನಿ ಮೋದಿ ಸೇರಿದಂತೆ ಸಂಪುಟ ಸದಸ್ಯರು, ಸ್ಪೀಕರ್, ಸಭಾಪತಿ, ಅಂದಿನ ದಾಳಿಯಲ್ಲಿ ಪ್ರಾಣತ್ಯಾಗ ಮಾಡಿದವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿದ ಕೆಲ ಹೊತ್ತಿನ ನಂತರ ಹೊಸ ಸಂಸತ್ ಭವನದಲ್ಲಿ ಭಾರಿ ಭದ್ರತಾ ವೈಫಲ್ಯ ನಡೆದು ಹೋಯಿತು. ಇಬ್ಬರು ಸಂಸತ್ ಕಲಾಪದ ವೇಳೆ ಪ್ರೇಕ್ಷಕರ ಗ್ಯಾಲರಿಯಿಂದ ಧುಮುಕಿ ರಂಪಾಟ ನಡೆಸಿದರೆ, ಉಳಿದ ನಾಲ್ವರು ಸಂಸತ್ ಭವನದ ಹೊರಗಡೆ ಫಜೀತಿ ಉಂಟು ಮಾಡಿದರು.

ಅಂದು ಐವರು ಭಯೋತ್ಪಾದಕರು ಕೇಂದ್ರ ಗೃಹ ಸಚಿವಾಲಯ ಹಾಗೂ ಸಂಸತ್ತಿನ ಲೇಬಲ್‌ಗಳನ್ನು ಹೊಂದಿದ್ದ ಕಾರಿನಲ್ಲಿ ಸಂಸತ್ ಭವನಕ್ಕೆ ನುಸುಳಿದ್ದರು. ಈ ಘಟನೆಗೆ 40 ನಿಮಿಷ ಮುನ್ನ ಲೋಕಸಭೆ ಮತ್ತು ರಾಜ್ಯಸಭೆ ಎರಡನ್ನೂ ಮುಂದೂಡಲಾಗಿತ್ತಾದರೂ, ಅಂದಿನ ಕೇಂದ್ರ ಗೃಹ ಸಚಿವ ಎಲ್.ಕೆ.ಅಡ್ವಾನಿ ಮತ್ತು ರಕ್ಷಣಾ ಖಾತೆ ರಾಜ್ಯ ಸಚಿವ ಹರೀನ್ ಪಾಠಕ್ ಸೇರಿದಂತೆ 100ಕ್ಕೂ ಹೆಚ್ಚು ಸಂಸದರು ಸಂಸತ್ ಭವನದ ಒಳಗೇ ಇದ್ದರು.

ಭಯೋತ್ಪಾದಕರು ತಮ್ಮ ಕಾರಿನ ಮೇಲೆ ನಕಲಿ ಗುರುತಿನ ಸ್ಟಿಕ್ಕರ್‌ಗಳನ್ನು ಅಂಟಿಸುವ ಮೂಲಕ ಸಂಸತ್ ಭವನದ ಸುತ್ತಲೂ ನಿಯೋಜಿಸಲಾಗಿದ್ದ ಭದ್ರತೆಯನ್ನು ಸುಲಭವಾಗಿ ದಾಟಿದ್ದರು. ಭಯೋತ್ಪಾದಕರು ತಮ್ಮ ವಾಹನವನ್ನು ಆ ಸಮಯದಲ್ಲಿ ಸಂಸತ್ ಭವನದಲ್ಲೇ ಇದ್ದ ಅಂದಿನ ಉಪ ರಾಷ್ಟ್ರಪತಿ ಕಿಶನ್ ಶ್ರೀಕಾಂತ್ ಅವರ ಕಾರಿಗೆ ಡಿಕ್ಕಿ ಹೊಡೆಸಲು ಹೋಗುವ ಸಂದರ್ಭದಲ್ಲಿ ಕೇಂದ್ರೀಯ ಮೀಸಲು ಪಡೆಯ ಕಾನ್ಸ್‌ಟೇಬಲ್ ಕಮಲೇಶ್ ಕುಮಾರಿ ಅವರು ಪ್ರಪ್ರಥಮವಾಗಿ ಭಯೋತ್ಪಾದಕರನ್ನು ಗುರುತಿಸಿ ಎಚ್ಚರಿಕೆ ನೀಡುತ್ತಿದ್ದಂತೆಯೇ ಭಯೋತ್ಪಾದಕರು ಅವರ ಮೇಲೆ ಗುಂಡಿನ ಸುರಿಮಳೆಗೈದ ಪರಿಣಾಮ ಆಕೆ ಸ್ಥಳದಲ್ಲೇ ಸಾವನ್ನಪ್ಪಿದರು. ಈ ಸಂದರ್ಭದಲ್ಲಿ ಓರ್ವ ಭಯೋತ್ಪಾಕನ ಆತ್ಮಹತ್ಯಾ ಉಡುಪು ಸ್ಫೋಟಿಸಿ, ಆತ ಮೃತಪಟ್ಟರೆ, ಉಪರಾಷ್ಟ್ರಪತಿಗಳ ಗಾರ್ಡ್ ಮತ್ತು ಭದ್ರತಾ ಸಿಬ್ಬಂದಿ ಭಯೋತ್ಪಾದಕರ ಮೇಲೆ ಗುಂಡು ಹಾರಿಸಲು ಮುಂದಾದರು. ಈ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಒಟ್ಟು ನಾಲ್ವರು ಭಯೋತ್ಪಾದಕರು ಸಾವನ್ನಪ್ಪಿದರೆ, ಓರ್ವ ತೋಟಗಾರ ಸೇರಿ ಒಂಭತ್ತು ಭದ್ರತಾ ಸಿಬ್ಬಂದಿ ಹುತಾತ್ಮರಾದರು.



ಅಂದು ಸಂಸತ್ ಭವನದ ಮೇಲೆ ದಾಳಿ ನಡೆಸಿದ್ದ ಭಯೋತ್ಪಾದಕರು ಎಕೆ–47 ರೈಫಲ್‌ಗಳು, ಗ್ರೆನೇಡ್ ಲಾಂಚರ್‌ಗಳು, ಪಿಸ್ತೂಲುಗಳು ಹಾಗೂ ಗ್ರೆನೇಡ್‌ಗಳನ್ನು ಹೊಂದಿದ್ದರು. ಈ ದಾಳಿಯನ್ನು ಪಾಕಿಸ್ತಾನ ಮೂಲದ ಜೈಷ್–ಎ–ಮೊಹಮದ್ (ಜೆಇಎಂ) ಭಯೋತ್ಪಾದಕ ತಂಡ ನಡೆಸಿದ್ದು, ಭದ್ರತಾ ಸಿಬ್ಬಂದಿ ನಡೆಸಿದ ಪ್ರತಿ ದಾಳಿಯಲ್ಲಿ ಜೆಇಎಂ ಸಂಘಟನೆಯ ಹಮ್ಜಾ, ಹೈದರ್ ಅಲಿಯಾಸ್ ತುಫೈಲ್, ರಾಣಾ, ರಣವಿಜಯ್ ಮತ್ತು ಮೊಹಮದ್ ಬಲಿಯಾಗಿದ್ದರು.

ಈ ಸಂಬಂಧ ನಡೆದ ತನಿಖೆಯಲ್ಲಿ ತನಿಖಾ ಸಂಸ್ಥೆಯು ಜೆಇಎಂ ಸಂಘಟನೆಗೆ ಸೇರಿದ ಮೊಹಮದ್ ಅಫ್ಜಲ್‌ಗುರು, ಈತನ ಸೋದರ ಸಂಬಂಧಿ ಶೌಕತ್ ಅಲಿ ಹುಸೇನ್, ಸೈಯ್ಯದ್ ಅಬ್ದುಲ್ ರೆಹಮಾನ್ ಗಿಲಾನಿ (ಎಸ್.ಎ.ಆರ್. ಗಿಲಾನಿ) ಮತ್ತು ಶೌಕತ್ ಹುಸೇನ್ ಗುರು ಪತ್ನಿ ನವಜೋತ್ ಸಂಧು ಅಲಿಯಾಸ್ ಅಫ್ಸಾನ್ ಅವರನ್ನು ಬಂಧಿಸಿ ಅವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿತ್ತು. ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಎಸ್.ಎನ್. ದಿಂಗ್ರಾ ಅವರು ಅಫ್ಸಾನಾಗೆ 5 ವರ್ಷ ಕಠಿಣ ಶಿಕ್ಷೆ ಹಾಗೂ ದಂಡ ವಿಧಿಸಿದರೆ, ಉಳಿದ ಮೂವರಿಗೂ ಮರಣ ದಂಡನೆ ವಿಧಿಸಿ ತೀರ್ಪು ನೀಡಿದ್ದರು. ಮೇಲ್ಮನವಿ ಸಲ್ಲಿಸಿದ ವೇಳೆ ಸುಪ್ರೀಂಕೋರ್ಟ್ ಗಿಲಾನಿ ಮತ್ತು ಅಫ್ಸಾನ್ ಅವರುಗಳನ್ನು ದೋಷಮುಕ್ತರನ್ನಾಗಿ ಮಾಡಿ, ಅಫ್ಜಲ್‌ಗುರುವಿನ ಮರಣ ದಂಡನೆಯನ್ನು ಎತ್ತಿ ಹಿಡಿಯಿತು. ಶೌಕತ್ ಹುಸೇನ್‌ಗೆ ಜೈಲು ಶಿಕ್ಷೆ ವಿಧಿಸಲಾಗಿತ್ತಾದರೂ ಉತ್ತಮ ನಡತೆ ಕಾರಣದಿಂದ ಆತ ಅವಧಿಗಿಂತ 9 ತಿಂಗಳ ಮುನ್ನವೇ ಜೈಲಿನಿಂದ ಬಿಡುಗಡೆ ಹೊಂದಿದ್ದ.

ಅಫ್ಜಲ್‌ಗುರುವಿಗೆ 2006ರ ಅಕ್ಟೋಬರ್ 20ರಂದು ಗಲ್ಲು ಶಿಕ್ಷೆ ವಿಧಿಸಲು ದಿನಾಂಕ ನಿಗದಿಪಡಿಸಲಾಗಿತ್ತಾದರೂ, ಆತ ಅಂದಿನ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರಿಗೆ ಕ್ಷಮಾಪಣಾ ಅರ್ಜಿ ಸಲ್ಲಿಸಿದ ಕಾರಣ ಆತನ ಗಲ್ಲು ಶಿಕ್ಷೆಗೆ ಅಂದು ತಡೆಯಾಜ್ಞೆ ನೀಡಲಾಗಿತ್ತು. ಅಬ್ದುಲ್ ಕಲಾಂ ಅವರು ನ್ಯಾಯಾಂಗ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಲು ನಿರಾಕರಿಸಿದರಾದರೂ, ಅಫ್ಜಲ್‌ಗುರುವಿನ ಕ್ಷಮಾದಾನ ಅರ್ಜಿ ವಿಲೇವಾರಿ ಮಾಡಿರಲಿಲ್ಲ. ನಂತರ ರಾಷ್ಟ್ರಪತಿಗಳಾದ ಪ್ರಣಬ್ ಮುಖರ್ಜಿ ಅವರು 2013ರ ಫೆಬ್ರವರಿ 3ರಂದು ಅಫ್ಜಲ್ ಗುರುವಿನ ಕ್ಷಮಾದಾನ ಅರ್ಜಿಯನ್ನು ತಿರಸ್ಕರಿಸಿದ ಹಿನ್ನೆಲೆಯಲ್ಲಿ 2013ರ ಫೆಬ್ರವರಿ 9ರಂದು ಆತನನ್ನು ದೆಹಲಿಯ ತಿಹಾರ್ ಜೈಲಿನಲ್ಲಿ ಗಲ್ಲಿಗೇರಿಸಿ, ಆತನ ಧಾರ್ಮಿಕ ವಿಧಿವಿಧಾನದೊಂದಿಗೆ ಜೈಲಿನಲ್ಲೇ ಅಂತ್ಯಕ್ರಿಯೆ ನೆರವೇರಿಸಲಾಯಿತು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಕೆಲಸದವಳ ಹತ್ತಿರ ಏನಾದ್ರೂ ತರ್ಲೆ ಮಾಡಿದ್ರಾ...?
ಗಂಡ : ಯಾಕೆ ಏನಾಯ್ತು?
ಹೆಂಡತಿ : ಇಷ್ಟು ದಿನ 'ಅಮ್ಮ' ಎಂದು ಕರೆಯುತ್ತಿದ್ದವಳು... ಈಗ 'ಅಕ್ಕ' ಎಂದು ಕರೆಯುತ್ತಿದ್ದಾಳೆ...!!

ಮೈಸೂರು ಮಿತ್ರ

ಗುರುವಾರ, 14 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ತಿಳಿದಿರುವುದಕ್ಕಿಂತ ಕಡಿಮೆ ಮಾತಾಡುವುದೇ ಬುದ್ಧಿವಂತಿಕೆಯ ಲಕ್ಷಣ.

– ವಿಲಿಯಂ ಶೇಕ್ಸ್‌ಪಿಯರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆ ಚಿಕ್ಕದಾದ್ರೆ ಮನಸ್ಸು ಚಿಕ್ಕದೆ?

ನಿಮ್ಮ ಪತ್ರಗಳು

370ನೇ ವಿಧಿ ರದ್ದತಿ ಸುಪ್ರೀಂ ಕೋರ್ಟ್ ಆದೇಶ ಸ್ವಾಗತಾರ್ಹ

ಮಾನ್ಯರೆ,

ಕೇಂದ್ರ ಸರ್ಕಾರ ಆಗಸ್ಟ್ 5, 2019 ರಂದು ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿ ಅಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿತು. ಈ ವಿಚಾರವಾಗಿ ಸುಪ್ರೀಂಕೋರ್ಟ್ ಡಿಸೆಂಬರ್ 11ರಂದು ತನ್ನ ಮಹತ್ವದ ಆದೇಶವನ್ನು ಹೊರಡಿಸಿದೆ. ಸಂವಿಧಾನದ 370ನೇ ವಿಧಿಯ ಅಡಿ ಇದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಲು ರಾಷ್ಟ್ರಪತಿಯವರು ಸಾಂವಿಧಾನಿಕ ಅಧಿಕಾರ ಹೊಂದಿದ್ದಾರೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಸಾಂವಿಧಾನಿಕ ಪೀಠ ತಿಳಿಸಿ, ಜಮ್ಮು ಮತ್ತು ಕಾಶ್ಮೀರದ ರಾಜ್ಯ ಸ್ಥಾನಮಾನವನ್ನು ಶೀಘ್ರವೇ ಮರು ಸ್ಥಾಪಿಸುವಂತೆ ಕೇಂದ್ರಕ್ಕೆ ನಿರ್ದೇಶನ ನೀಡಿ ಅಲ್ಲಿನ ವಿಧಾನಸಭೆಗೆ 2024ರ ಸೆಪ್ಟೆಂಬರ್ 30ರೊಳಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗಕ್ಕೆ ಸೂಚಿಸಿ ತನ್ನ ತೀರ್ಪನ್ನು ಪ್ರಕಟಿಸಿದೆ.

ಸದ್ಯ ಈಗ ಈ ತೀರ್ಪನ್ನು ದೇಶ ಬಹಳ ಸಂತೋಷದಿಂದ ಸ್ವಾಗತಿಸಿದೆ. "ಒಂದು ದೇಶ, ಒಂದು ಸಂವಿಧಾನ, ಒಂದು ಕಾನೂನು"ಎಂಬುದು ನಮ್ಮ ದೇಶದ ಒಂದು ಧ್ಯೇಯವಾಗಿದೆ.ಎಲ್ಲೋ ಒಂದು ಕಡೆ ಈ ಧ್ಯೇಯ ಜಮ್ಮು ಮತ್ತು ಕಾಶ್ಮೀರಕ್ಕೆ ಸೀಮಿತವಾಗಿರಲಿಲ್ಲ ಎಂಬಂತೆ ಭಾವಿಸಿತ್ತು. ಈ ಕಾರಣದಿಂದಲೇ ಪಾಕಿಸ್ತಾನಕ್ಕೂ ಮತ್ತು ಭಾರತಕ್ಕೂ ಜಮ್ಮು ಕಾಶ್ಮೀರ ವಿಚಾರವಾಗಿ ಸಂಘರ್ಷ ನಡೆಯುತ್ತಿದ್ದದ್ದು, ಭಯೋತ್ಪಾದಕರು ತಮ್ಮ ಅಟ್ಟಹಾಸವನ್ನು ಮೆರೆಯುತ್ತಿದ್ದದ್ದು. ಪ್ರಸ್ತುತ ಈ ವಿಧಿಯ ರದ್ದತಿಯಿಂದ ಈ ಸಮಸ್ಯೆಗಳು ದೂರವಾಗಬಹುದು. ಮತ್ತು ವಿಶ್ವದ ಮುಂದೆ ಜಮ್ಮು-ಕಾಶ್ಮೀರ ವಿಚಾರವಾಗಿ ಭಾರತ ವಾದಿಸಬಹುದು ಭಯೋತ್ಪಾದಕರ ಅಟ್ಟಹಾಸ ಅಡಗಿಸಬಹುದು. ಜಮ್ಮು ಮತ್ತು ಕಾಶ್ಮೀರ ರಾಜ್ಯಗಳ ಒಕ್ಕೂಟ ಸೇರುವುದರಿಂದ ನಮ್ಮ ಒಂದು ಧ್ಯೇಯ ಮರುಕಳಿಸಬಹುದು. ಹೀಗಾಗಿ ಈ ವಿಚಾರದಲ್ಲಿ ಸುಪ್ರೀಂಕೋರ್ಟ್ ಆದೇಶ ಸ್ವಾಗತಾರ್ಹವಾಗಿದೆ.

–ಯಶವಂತ ಹೆಚ್.ಎಸ್, ಮಹಾರಾಜ ಕಾಲೇಜು,ಮೈಸೂರು

ಮರೆಯಾದ ಅಭಿನಯ ಗಂಗೋತ್ರಿ



ಮಾನ್ಯರೆ,

ಲೀಲಾವತಿ ಮೈಸೂರಿನ ರಂಗಭೂಮಿಯಿಂದ ವೃತ್ತಿ ಜೀವನ ಆರಂಭ ಜೀವನದ ನಿರ್ವಹಣೆಗಾಗಿ 11 ವರ್ಷಕ್ಕೆ ಸಿನಿಮಾ ರಂಗಕ್ಕೆ ಕಾಲಿಟ್ಟರು. ಪಂಚ ಭಾಷಾ ತಾರೆಯಾಗಿ ಮಿನುಗಿದರು. ತಮ್ಮ ಮನೋಜ್ಞ ಅಭಿನಯದಿಂದ ಉತ್ತುಂಗ ಶಿಖರ ವೇರಿದರು. ದಿಗ್ಗಜ ನಟರೊಂದಿಗೆ ಹಲವಾರು ಪಾತ್ರಗಳನ್ನು ಮಾಡಿ ಲೋಕವೇ ಮೆಚ್ಚುವಂತಹ ನಾಯಕಿಯಾದರು. 2ನೇ ತರಗತಿಯವರೆಗೆ ವಿದ್ಯಾಭ್ಯಾಸವಾದರೂ ಇವರ ನಟನೆ ಕೌಶಲ್ಯವನ್ನು ನೋಡಿ ತುಮಕೂರಿನ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿತು. ಅನೇಕ ಅತ್ಯುತ್ತಮ ಪ್ರಶಸ್ತಿಗಳನ್ನು ಪಡೆದರೂ ಎಲೆಮರೆ ಕಾಯಿಯಂತೆ ಜೀವನ ನಡೆಸಿದರು. ನಟಿ, ನಿರ್ಮಾಪಕಿ, ಲೇಖಕಿಯಾಗಿ ಚಲನಚಿತ್ರ ರಂಗಕ್ಕೆ ದುಡಿದು ಎಲ್ಲರ ಗಮನ ಸೆಳೆದರು. ಜೀವನದಲ್ಲಿ ಏಳುಬೀಳು ಕಂಡರೂ ಎದೆಗುಂದದೆ ರಾಣಿ ಹೊನ್ನಮ್ಮನಂತೆ ಜೀವನವನ್ನು ಎದುರಿಸಿದರು. ಎಲ್ಲಾ ಮಹಿಳೆಯರಿಗೂ ಆದರ್ಶ ನಾರಿಯಾದರು. ತುಂಬಿದ ಕೊಡ ತುಳುಕುವುದಿಲ್ಲ ಎಂಬಂತೆ ನಡೆದುಕೊಂಡರು. ಕಷ್ಟದಲ್ಲಿದ್ದವರಿಗೆ ಸಹಾಯಹಸ್ತ ಚಾಚಿ ಭೂಮಿಯ ಒಡತಿಯಾಗಿ ರೈತ ಮಹಿಳೆಯಾದರು. ಪ್ರಾಣಿ ಪ್ರಿಯರಾಗಿ ಪರಿಸರದ ಮಧ್ಯೆ ಜೀವನ ಸಾಗಿಸಿದರು. ಇವರ ನಿಸ್ವಾರ್ಥ ಸೇವೆಯಿಂದ ಜನ ಮನ್ನಣೆ ಪಡೆದರು. ತಾಯಿ ಮಗನ ಬಾಂಧವ್ಯ ಲೋಕಕ್ಕೆ ಮಾದರಿಯಾಯಿತು. ಇವರು ಮಾಡಿದ ಪುಣ್ಯದ ಕೆಲಸದಿಂದ ಎಲ್ಲರೊಂದಿಗೆ ಯಾವಾಗಲೂ ಜೀವಿಸುತ್ತಿರುತ್ತಾರೆ. ಅವರ ನಡೆ ನುಡಿಯಿಂದ ಎಲ್ಲರಿಗೂ ಆದರ್ಶವಾಗಿ ಬಾಳೋಣ

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಬೆಟ್ಟದಪುರದಲ್ಲಿ ಬೀದಿನಾಯಿಗಳ ಹಾವಳಿ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗಿದೆ. ಮಕ್ಕಳು, ಸಾರ್ವಜನಿಕರು ರಸ್ತೆಗಳಲ್ಲಿ ಓಡಾಡಲು ಭಯಪಡುವಂತಾಗಿದೆ. ವಾಹನಗಳಲ್ಲಿ ಓಡಾಡುವವರನ್ನು ಅಟ್ಟಿಸಿಕೊಂಡು ಹೋಗುವುದುಂಟು. ಇದರಿಂದ ವಾಹನ ಸವಾರರು ಹೆದರಿ ಅಪಘಾತಗಳು ಸಂಭವಿಸಿರುವ ಉದಾಹರಣೆಗಳಿವೆ. ಈ ನಾಯಿಗಳ ಹಾವಳಿಯಿಂದ ಮನೆ ಮುಂಭಾಗದಲ್ಲಿ ಎಳೆಯ ಮಕ್ಕಳನ್ನು ಆಟವಾಡಲು ಬಿಡುವುದು ಪೋಷಕರಿಗೆ ತಲೆ ನೋವಾಗಿದೆ. ವಯಸ್ಸಾದವರು ವಾಕಿಂಗ್ ಹೋಗಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಟ್ಟದಪುರದ ನಾಗರಿಕರು ನಾಯಿಗಳಿಗೆ ಹೆದರಿ ನಿಶ್ಚಿಂತೆಯಿಂದ ಬೀದಿಗಳಲ್ಲಿ ಓಡಾಡಲು ಭಯಪಡುತ್ತಿದ್ದಾರೆ. ಕೂಡಲೇ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ಬೀದಿನಾಯಿಗಳನ್ನು ಹಿಡಿದು ಬೇರೆಡೆಗೆ ಸ್ಥಳಾಂತರ ಮಾಡಿ ಸಾರ್ವಜನಿಕರಿಗೆ ನೆಮ್ಮದಿ ನೀಡಬೇಕೆಂದು ಮನವಿ.

–ಬೆಟ್ಟದಪುರ ಗ್ರಾಮಸ್ಥರು, ಪಿರಿಯಾಪಟ್ಟಣ ತಾ.

ತಿದ್ದುಪಡಿ ಹಾಗೂ ಸ್ಪಷ್ಟನೆ

ಇದೇ ನವೆಂಬರ್ 26ರ 'ಮೈಸೂರು ಮಿತ್ರ' ಸಂಚಿಕೆಯ ಮೂರನೇ ಪುಟದಲ್ಲಿ ಪ್ರಕಟವಾಗಿರುವ 'ಕಾವೇರಿ ನೀರಾವರಿ ನಿಗಮದ ಎಂಡಿಗೆ ಬ್ಲಾಕ್‌ಮೇಲ್ ಪ್ರಕರಣ; ಆರ್‌ಟಿಐ ಕಾರ್ಯಕರ್ತನ ನಿರೀಕ್ಷಣಾ ಜಾಮೀನು ಅರ್ಜಿ ವಜಾ' ಶೀರ್ಷಿಕೆಯಡಿಯ ವರದಿಯಲ್ಲಿ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಬ್ಲಾಕ್‌ಮೇಲ್ ಮಾಡಿದ ಆರೋಪದಲ್ಲಿ ಆರ್‌ಟಿಐ ಕಾರ್ಯಕರ್ತ ಆನಂದ್ ಮೊದಲಿಯಾರ್ ಅಲಿಯಾಸ್ ಆನಂದ್ ಎಂ. ಕಲ್ಕಿ ಬಂಧಿತರಾಗಿದ್ದರು ಎಂದು ವರದಿಯಾಗಿದ್ದು, ಆದರೆ ಅವರ ಬಂಧನವಾಗಿರುವುದಿಲ್ಲ. ಅಲ್ಲದೆ ತಾವು ಸ್ವಯಂ ವಿಚಾರಣೆಗೆ ಹಾಜರಾಗುತ್ತಿರುವುದರಿಂದ ನಿರೀಕ್ಷಣಾ ಜಾಮೀನು ಪಡೆಯುವ ಅವಶ್ಯಕತೆ ಇಲ್ಲ ಎಂದು ಅವರೇ ಸ್ಪಷ್ಟಪಡಿಸಿದ್ದಾರೆ. ನಮ್ಮಲ್ಲಿ ವರದಿಯಾಗಿರುವ ತಪ್ಪು ಮಾಹಿತಿಗೆ ವಿಷಾದಿಸುತ್ತೇವೆ. –ಸಂ.

ರೋಗ ಮುಕ್ತಿಗೆ ಯೋಗ ಚಿಕಿತ್ಸೆ



ಎನ್. ಅನಂತ
ಯೋಗ ಶಿಕ್ಷಕರು, ಮೈಸೂರು
ಮೊ.ನಂ.:9743769403


ಸ್ವಾತಂತ್ರ್ಯಪೂರ್ವದ ಕಾಲವದು. ಆಗ ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಇರ್ವಿನ್ ಮಧುಮೇಹದಿಂದ ಬಳಲುತ್ತಿದ್ದು, ಭಾರತದ ಪ್ರಾಚೀನ ವೈದ್ಯ ಪದ್ಧತಿಯಾದ ಆಯುರ್ವೇದದ ಚಿಕಿತ್ಸೆ ಪಡೆಯುತ್ತಿದ್ದರೂ ಮಧುಮೇಹ ನಿಯಂತ್ರಣಕ್ಕೆ ಬಂದಿರಲಿಲ್ಲ. ಅದಕ್ಕೆ ಮುಖ್ಯ ಕಾರಣ ಆರೋಗ್ಯಕ್ಕೆ ಪೂರಕವಲ್ಲದ ಅವರ ಅಸಮರ್ಪಕ ಜೀವನಶೈಲಿ. ಇದೇ ಸಂದರ್ಭ ಅವರ ಬಳಿ ಬಂದ ಯುವಕನೊಬ್ಬ ತಾನೊಬ್ಬ ಯೋಗಾಭ್ಯಾಸಿಯೆಂದೂ, ಹೆಚ್ಚಿನ ಅಭ್ಯಾಸಕ್ಕಾಗಿ ಭಾರತದ ಗಡಿಯಲ್ಲಿರುವ ಹಿಮಾಲಯದ ತಪ್ಪಲಿಗೆ ಹೋಗಬೇಕಾಗಿದೆಯಾದ್ದರಿಂದ ಅದಕ್ಕಾಗಿ ಅಲ್ಲಿಗೆ ಹೋಗಲು ವೈಸ್‌ರಾಯ್ ಅನುಮತಿ ಪಡೆಯುವುದು ಅಗತ್ಯವಾದುದರಿಂದ ತಮ್ಮ ಅನುಮತಿ ಬೇಕಾಗಿದೆಯೆಂದು ಕೋರಿದಾಗ ವೈಸ್‌ರಾಯ್ ಆತನನ್ನು ಆಪಾದಮಸ್ತಕ ಅಳೆಯುತ್ತ 'ಯೋಗದ ಬಗ್ಗೆ ನಿನಗೆಷ್ಟು ತಿಳಿದಿದೆ?' ಎಂದು ಕೇಳುತ್ತಾರೆ. ಅದಕ್ಕೆ ಆ ಯುವಕ ಕೊಟ್ಟ ಉತ್ತರ ಬಹುಮಾರ್ಮಿಕವಾಗಿತ್ತು. 'ಭಾರತ ಅಪೇಕ್ಷಿಸಿದಷ್ಟು ಯೋಗ ನನಗೆ ಗೊತ್ತಿಲ್ಲದಿರಬಹುದು, ಆದರೆ ವಿದೇಶೀಯರಿಗೆ ಹೇಳಿಕೊಡುವಷ್ಟು ತಿಳಿದಿದೆ'.

ಈ ಉತ್ತರದಿಂದ ಪ್ರಭಾವಿತರಾದ ಆ ವೈಸ್‌ರಾಯ್ ತಮಗೂ ಯೋಗ ಕಲಿಸುವಂತೆ ಆ ಯುವಕನಲ್ಲಿ ವಿನಂತಿಸಿಕೊಳ್ಳುತ್ತಾರೆ. ಆ ಯುವಕ ತನ್ನ ಪ್ರಯಾಣದ ನಿರ್ಧಾರವನ್ನು ಸ್ವಲ್ಪ ಸಡಿಲಿಸಿ ವೈಸ್‌ರಾಯ್‌ರ ಆರೋಗ್ಯವರ್ಧನೆಗೆ ಯೋಗ ಕಲಿಸಲು ಮುಂದಾಗುತ್ತಾನೆ. ಮುಂದೆ ಅದರಲ್ಲಿ ಯಶಸ್ವಿಯೂ ಆಗುತ್ತಾನೆ. ವೈಸ್‌ರಾಯ್‌ರ ಆರೋಗ್ಯಕ್ಕೆ ಪೂರಕವಾದ ಯೋಗಾಸನ, ಪ್ರಾಣಾಯಾಮಗಳನ್ನು ಮಾಡಿಸತೊಡಗುತ್ತಾನೆ. ಕೇವಲ 6 ತಿಂಗಳುಗಳಲ್ಲಿಯೇ ತಮ್ಮನ್ನು ಹಿಂಡಿಹಿಪ್ಪೆ ಮಾಡಿದ್ದ ಮಧುಮೇಹ ನಿಯಂತ್ರಣಕ್ಕೆ ಬರುವುದರೊಂದಿಗೆ ಆರೋಗ್ಯವೂ ಪವಾಡಸದೃಶ ರೀತಿಯಲ್ಲಿ ಸುಧಾರಣೆಯಾದ ಬಗೆಯಿಂದ ವೈಸ್‌ರಾಯ್ ಅವರಿಗಾದ ಚಕಿತತೆ ಹಾಗೂ ಸಂತೋಷ ಅಷ್ಟಿಷ್ಟಲ್ಲ.


ವೈಸ್‌ರಾಯ್ ಆ ಯುವಕನಿಗೆ ಹಿಮಾಲಯದ ತಪ್ಪಲಿಗೆ ಹೋಗಲು ಬೇಕಾದ ಖರ್ಚುವೆಚ್ಚಗಳನ್ನೆಲ್ಲ ತಾವೇ ಭರಿಸುವುದರೊಂದಿಗೆ ಇಬ್ಬರು ಸಹಾಯಕರನ್ನೂ ಕೂಡ ಅವನೊಡನೆ ಕಳುಹಿಸುತ್ತಾರೆ. ಜೊತೆಗೆ ಆಗಾಗ ಬಂದು ತಮಗೆ ಮತ್ತಷ್ಟು ಯೋಗಾಭ್ಯಾಸ ಕಲಿಸಲು ಬರಲೇಬೇಕೆಂಬ ಒತ್ತಾಯವನ್ನೂ ಹೇರುತ್ತಾರೆ. ಈ ರೀತಿ ತಾನು ಕಲಿತ ಯೋಗಾಭ್ಯಾಸದಿಂದ ವೈಸ್‌ರಾಯ್‌ರನ್ನು ಗುಣಪಡಿಸಿದ ಆ ಯುವಕ ಬೇರ್‍ಯಾರೂ ಅಲ್ಲ. ಕೆಲವೇ ಬೆರಳೆಣಿಕೆಯಷ್ಟು ಜನರ ಸಾಧನಾ ಮಾರ್ಗವಾಗಿ ಗುಪ್ತಗಾಮಿನಿಯಂತೆ ಸಾಗುತ್ತಿದ್ದ ಯೋಗಕ್ಕೆ ಸಾರ್ವತ್ರಿಕವಾಗಿ ಜನಮನ್ನಣೆ ತಂದುಕೊಟ್ಟು ವಿಶ್ವವಿಖ್ಯಾತರಾದ **ತಿರುಮಲೆ ಕೃಷ್ಣಮಾಚಾರ್ಯರು.**

ಇನ್ನೊಂದು ಘಟನೆ:

ಇಡೀ ಊರೇ ವಿಷಮ ಶೀತಜ್ವರದಿಂದ ಬಳಲುತ್ತಿತ್ತು. ಅಲ್ಲಿನ 9 ವರ್ಷದ ಬಾಲಕನೊಬ್ಬ ಕ್ಷಯರೋಗ ಹಾಗೂ ಅಪೌಷ್ಟಿಕತೆಯಿಂದ ನರಳುತ್ತಿದ್ದು, ಇದೇ ಸಂದರ್ಭದಲ್ಲಿ ಆತನ ತಂದೆ ಕೂಡ ನಿಧನರಾಗಿ ಅವನ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತ್ತು. ಮೊದಲೇ ಆರ್ಥಿಕ ಸಂಕಷ್ಟ ಬೇರೆ ಆ ಕುಟುಂಬವನ್ನು ಬಾಧಿಸುತ್ತಿತ್ತು. ಆಗ ಅವನಿಗೆ ಆಶಾಕಿರಣದಂತೆ ಮೈಸೂರಿನಿಂದ ಪತ್ರವೊಂದು ಬಂತು. ಮೈಸೂರಿಗೆ ಬಂದು ಯೋಗ ಕಲಿಯುವಂತೆ ಅವನಿಗೆ ಕರೆಬಂದ ಪತ್ರವಾಗಿತ್ತು. ಅದು ಅವನ ಭಾವ ಅರ್ಥಾತ್ ಮೈಸೂರಿನಲ್ಲಿ ಅರಮನೆ ಕುಟುಂಬಕ್ಕೆ ಯೋಗ ಹೇಳಿಕೊಡುತ್ತಿದ್ದ ಕೃಷ್ಣಮಾಚಾರ್ಯರದಾಗಿತ್ತು. ಭಾವನ ಕರೆಗೆ ಕೂಡಲೇ ಸ್ಪಂದಿಸಿದ ಆ ಬಾಲಕ ಮೈಸೂರಿನತ್ತ ಪಯಣ ಬೆಳೆಸಿಯೇ ಬಿಟ್ಟ. ಮುಂದೆ ನಡೆದಿದ್ದು ವಿಸ್ಮಯವೇ ಸರಿ.



ತಿರುಮಲೆ ಕೃಷ್ಣಮಾಚಾರ್ಯ



ಬಿಕೆಎಸ್ ಐಯ್ಯಂಗಾರ್

ಕೃಷ್ಣಮಾಚಾರ್ಯರ ಗರಡಿಯಲ್ಲಿ ಅತ್ಯಂತ ಶ್ರದ್ಧೆ ಮತ್ತು ಆಸಕ್ತಿಯಿಂದ ಯೋಗವನ್ನು ಅಭ್ಯಸಿಸಿದ ಪರಿಣಾಮ ಆರೋಗ್ಯದಲ್ಲಿ ಉತ್ತಮ ಸುಧಾರಣೆಯಾಗುವುದರೊಂದಿಗೆ ನವ ಚೈತನ್ಯದಿಂದ ಕಂಗೊಳಿಸಿದ ಆ ಬಾಲಕ ಮುಂದೆ ಯೋಗವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದು ವಿದೇಶೀಯರ ಅಚ್ಚುಮೆಚ್ಚಿನ ಯೋಗ ಗುರುವಾಗಿ ಹೊರಹೊಮ್ಮಿದ. ಅವರೇ **ವಿಶ್ವಮಾನ್ಯ ಯೋಗಗುರು ಬಿಕೆಎಸ್ ಐಯ್ಯಂಗಾರ್.**

ಮೂರನೇ ಪ್ರಕರಣ

ಇವೆರಡಕ್ಕಿಂತ ವಿಭಿನ್ನವಾದುದು. ಬಾಲ್ಯದಿಂದಲೇ ಅಪಸ್ಮಾರ, ಹೃದ್ರೋಗಗಳನ್ನು ಜೊತೆಯಾಗಿಟ್ಟುಕೊಂಡು ರೋಗದ ಮುದ್ದೆಯಾಗಿದ್ದ ಬಾಲಕನೊಬ್ಬ ಪುಣ್ಯವಶಾತ್ ಗುರುಗಳ ಮಾರ್ಗದರ್ಶನದಲ್ಲಿ ಯೋಗಾಸನ, ಪ್ರಾಣಾಯಾಮಗಳನ್ನು ನೈಷ್ಠಿಕವಾಗಿ ಅಭ್ಯಸಿಸಿ ತನ್ನ ಕಾಯಿಲೆಗಳನ್ನೆಲ್ಲ ದೂರ ಮಾಡಿಕೊಂಡುದುದೇ ಅಲ್ಲದೇ ವಜ್ರಕಾಯವನ್ನು ಸಂಪಾದಿಸಿ (ಶತೋತ್ತರ) ದೀರ್ಘಾಯುಷ್ಯವನ್ನೂ ಸಂಪಾದಿಸಿದರು. ಅಷ್ಟೇ ಅಲ್ಲದೇ ತಾನು ಕಲಿತ ಯೋಗದ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಯಪಡಿಸಲೋಸುಗ ಹಲವಾರು ಕೃತಿ ರತ್ನಗಳನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದರು. ತಾವು ನೆಲೆಸಿದ ಮಲ್ಲಾಡಿಹಳ್ಳಿ ಎಂಬ ಕುಗ್ರಾಮದಲ್ಲಿ ಜೋಳಿಗೆ ಹಿಡಿದು ಬಂದ ಭಿಕ್ಷೆಯಿಂದ ಅನಾಥಸೇವಾಶ್ರಮವೆಂಬ ಮಹಾ ಸಂಸ್ಥಾನವನ್ನೇ ಕಟ್ಟಿ ಆ ಗ್ರಾಮವನ್ನು **ಸುಗ್ರಾಮವಾಗಿಸಿದ ಶ್ರೀ ರಾಘವೇಂದ್ರ ಸ್ವಾಮಿಗಳು.**

ಈ ಮೇಲಿನ ಮೂರೂ ನಿದರ್ಶನಗಳನ್ನು ಗಮನಿಸಿದಾಗ ಯೋಗವನ್ನು ನಂಬಿ ಅತ್ಯಂತ ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಅಭ್ಯಾಸ ಮಾಡಿದುದರ ಫಲವಾಗಿ ಅವರು ಪಡೆದುಕೊಂಡ ಆರೋಗ್ಯ ಹಾಗೂ ಕಾಯಿಲೆಗಳನ್ನು ಗುಣಪಡಿಸುವಲ್ಲಿ "ಯೋಗ ಚಿಕಿತ್ಸೆ" ಎಂಬ ಔಷಧರಹಿತ ಸಾಧನೆಯ ಪರಿಣಾಮವನ್ನು ಸಾರುತ್ತದೆ. ಇದು ಯೋಗಕ್ಕೂ ಮತ್ತು ಆರೋಗ್ಯಕ್ಕೂ ಇರುವ ಅವಿನಾಭಾವ ಸಂಬಂಧವನ್ನು ಸಾಕ್ಷೀಕರಿಸುತ್ತದೆ.

ಯೋಗ ಚಿಕಿತ್ಸೆ ಎಂದರೇನು?:

ಚಿಕಿತ್ಸಾತ್ಮಕ ಗುಣವುಳ್ಳ ಯೋಗದ (ಆಸನ, ಪ್ರಾಣಾಯಾಮ, ಷಟ್ಕರ್ಮ ಕ್ರಿಯೆಗಳು, ಧ್ಯಾನ ಇತ್ಯಾದಿ) ನೆರವಿನಿಂದ ಕಾಯಿಲೆಗಳನ್ನು ಗುಣಪಡಿಸಿಕೊಳ್ಳುವ ಮಾರ್ಗಕ್ಕೆ "ಯೋಗ ಚಿಕಿತ್ಸೆ" ಎನ್ನಲಾಗುತ್ತದೆ.

ಇಂದು ಶಾರೀರಿಕ ಕ್ಷಮತೆಗೆ, ದೇಹದಾರ್ಢ್ಯತೆಗಳಿಸಲು, ಆರೋಗ್ಯ ಸಂಪಾದಿಸಲು ಹಲವಾರು ಮಾರ್ಗಗಳೇ ಇವೆ. ಆದರೆ ಇವೆಲ್ಲವುಗಳಿಗಿಂತ ವಿಭಿನ್ನವಾಗಿರುವ ಯೋಗದ ಹಾದಿ ಬಹು ವೈಶಿಷ್ಟ್ಯಪೂರ್ಣವಾಗಿದೆ.

ಭಾರತೀಯ ಸಂಸ್ಕೃತಿಯ ಪ್ರತೀಕವಾದ ಯೋಗಾಭ್ಯಾಸದಲ್ಲಿ ದೈನಂದಿನ ಆರೋಗ್ಯ ವರ್ಧನೆಗೆ ಮಾಡಬೇಕಾದ ಆಸನ, ಪ್ರಾಣಾಯಾಮಗಳು ಸಾಕಷ್ಟಿವೆ. ಆದರೆ ಅದೇ ಮನುಷ್ಯನಿಗೆ ಕಾಯಿಲೆ ಬಂದಾಗ ಆ ಕಾಯಿಲೆಗಳ ನಿವಾರಣೆಗೆ ಇಂತಿಂತಹ ಆಸನ, ಪ್ರಾಣಾಯಾಮಗಳನ್ನು ಮಾಡಬೇಕೆಂಬ ನಿಯಮವೇ ಇದೆ. ಇವೆಲ್ಲ ಕೇವಲ ಬರೀ ಮಾತಿನ ದಾಖಲೆಗಳಲ್ಲ. ಯೋಗ ತಜ್ಞರು, ಯೋಗ ಸಂಶೋಧಕರು ತಮ್ಮ ವೈಜ್ಞಾನಿಕ ಸಂಶೋಧನೆಗಳಿಂದ ಖಚಿತಪಡಿಸಿಕೊಂಡ ಅನುಭವಜನ್ಯ ಮಾರ್ಗದರ್ಶಿಗಳಾಗಿವೆ.

ಉದಾಹರಣೆಗೆ ನಮಗೆ ಗ್ಯಾಸ್ಟ್ರಿಕ್ ಬಂತೆನ್ನಿ, ಅದಕ್ಕೆ ಪೂರಕವಾದ ಹಾಗೂ ಅನುಗುಣವಾದ ಪವನ ಮುಕ್ತಾಸನ ಮಾಡಿಸಲು ಸಲಹೆ ನೀಡಲಾಗುತ್ತದೆ. ಹೆಸರೇ ಹೇಳುವಂತೆ ಪವನ ಎಂದರೆ ಗಾಳಿ. ಈ ಆಸನದ ಕ್ರಮಬದ್ಧ ಅಭ್ಯಾಸ ನಮಗೆ ಗ್ಯಾಸ್ಟ್ರಿಕ್‌ನಿಂದ ಮುಕ್ತಿ ನೀಡುತ್ತದೆ. ಇದೇ ರೀತಿ ಮಾನಸಿಕ ಒತ್ತಡ ಪರಿಹಾರಕ್ಕೆ ಶಶಂಕಾಸನ, ನೆಗಡಿ, ತಲೆನೋವು ಬಂದಾಗ ಷಟ್ಕರ್ಮ ಕ್ರಿಯೆಗಳಲ್ಲಿ ಒಂದಾದ ನೇತಿ ಕ್ರಿಯೆಗೆ ಸಲಹೆ ನೀಡುವುದು ಉಂಟು. ಅದರಲ್ಲೂ ಮೂಗಿನ ಹೊರಳೆಗಳಲ್ಲಿ ದುರ್ಮಾಂಸ ಬೆಳೆದಾಗ ಅದನ್ನು ಶಸ್ತ್ರಚಿಕಿತ್ಸೆ ಇಲ್ಲದೆ "ಸೂತ್ರನೇತಿ" ಎಂಬ ಸರಳ ಕ್ರಿಯೆಯಿಂದ ಗುಣಪಡಿಸಿರುವ ಹಲವಾರು ನಿದರ್ಶನಗಳೇ ಇವೆ.

ಯೋಗಾಸನಗಳು

ಬೇರೆಲ್ಲ ವ್ಯಾಯಾಮ ಪದ್ಧತಿಗಳಲ್ಲಿ ದೇಹ ಚಾಲನೆಗೆ ಮಾತ್ರ ಮಹತ್ವ ನೀಡಿದರೆ ಯೋಗದಲ್ಲಿ ಆಸನಗಳನ್ನು ಮಾಡುವಾಗ ಅದಕ್ಕೆ ಪೂರಕವಾದ ಉಸಿರಿನ ಸಂಯೋಜನೆಯನ್ನೂ ಅಳವಡಿಸಲಾಗಿದೆ. ಅಂದರೆ ಮುಂದೆ ಬಾಗುವಾಗ ಉಸಿರು ಬಿಡುತ್ತಲೇ ಬಾಗಬೇಕಾಗುತ್ತದೆ. ಮೇಲೆ ಏಳುವಾಗ ಉಸಿರನ್ನು ತೆಗೆದುಕೊಂಡು ಮೇಲೆ ಏಳಬೇಕಾಗುತ್ತದೆ. ಅದೇ ರೀತಿ ದೇಹವನ್ನು ತಿರುಚಿ ಇಲ್ಲವೇ ಪಾರ್ಶ್ವಕ್ಕೆ ತಿರುಗಿ ಮಾಡುವ ಆಸನಗಳನ್ನು ಉಸಿರು ಬಿಡುತ್ತ ಮಾಡುವುದು ಹಾಗೆಯೇ ವಾಪಸ್ ಬರುವಾಗ ಉಸಿರು ತೆಗೆದುಕೊಳ್ಳುತ್ತ ಬರುವಿಕೆ. ಸಮಸ್ಥಿತಿಯಲ್ಲಿ ಸಮಾನವಾದ ಉಚ್ಛ್ವಾಸ ಹಾಗೂ ನಿಃಶ್ವಾಸಗಳನ್ನು ಮಾಡುವಿಕೆ ಇವು ಆಸನಗಳೊಂದಿಗೆ ಅನುಸರಿಸಬೇಕಾದ ಉಸಿರಾಟದ ಕ್ರಮಗಳೇ ಆಗಿವೆ. ಉಸಿರಾಟದ ಸಂಯೋಜನೆ ಇಲ್ಲದ ಆಸನಗಳ ಅಭ್ಯಾಸ ದೊಂಬರಾಟಕ್ಕೆ ಸಮ. ಇದರಿಂದ ಆರೋಗ್ಯದ ಮೇಲೆ ಯಾವ ಸತ್ಪರಿಣಾಮವೂ ಆಗುವುದಿಲ್ಲ.

ಜೀವರಾಶಿಯಲ್ಲಿ ಎಷ್ಟು ಪ್ರಾಣಿಗಳಿವೆಯೋ ಅಷ್ಟು ಆಸನಗಳಿವೆ ಎಂಬುದು ಯೋಗತಜ್ಞರ ಅಭಿಮತ. ಆದರೆ ಪ್ರತಿದಿನದ ಅಭ್ಯಾಸದಲ್ಲಿ ಇಂತಿಷ್ಟು ಆಸನಗಳನ್ನು ಕಡ್ಡಾಯವಾಗಿ ಮಾಡಬೇಕೆಂಬ ನಿಯಮವಿದೆ. ಅದರಲ್ಲೂ ದೇಹಕ್ಕೆ ಆಯಾಮಗಳು ಸಾಕಷ್ಟಿವೆ. ಆದರೆ ಅದೇ ಮನುಷ್ಯನಿಗೆ ಕಾಯಿಲೆ ಬಂದಾಗ ಆ ಕಾಯಿಲೆಗಳ ನಿವಾರಣೆಗೆ ಇಂತಿಂತಹ ಆಸನ, ಪ್ರಾಣಾಯಾಮಗಳನ್ನು ಮಾಡಬೇಕೆಂಬ ನಿಯಮವೇ ಇದೆ. ಇವೆಲ್ಲ ಕೇವಲ ಬರೀ ಮಾತಿನ ದಾಖಲೆಗಳಲ್ಲ, ಯೋಗ ತಜ್ಞರು, ಯೋಗ

ಪರಿಪೂರ್ಣವಾದ ವ್ಯಾಯಾಮ ಲಭ್ಯವಾಗಬೇಕಾದರೆ ದೇಹವನ್ನು ಹಿಂದೆ ಬಾಗಿಸುವ ಆಸನ ಮಾಡಿದೊಡನೆ ಮುಂದೆ ಬಾಗುವ ಆಸನವನ್ನು ಮಾಡಲೇಬೇಕು. ಅನಂತರ ಪಾರ್ಶ್ವಕ್ಕೆ ತಿರುಗಿ ಮಾಡಬೇಕಾದ ಆಸನಗಳು, ತಿರುಚಿಮಾಡುವ ಆಸನಗಳು ಇವಲ್ಲದೆ ಸಮತೋಲನ ಕಾಪಾಡುವ ಆಸನಗಳು, ಶಕ್ತಿವರ್ಧಕ ಆಸನಗಳು ಇವುಗಳನ್ನೂ ಕೂಡ ಆಗಾಗ ಅಳವಡಿಸಿಕೊಳ್ಳುವುದರಿಂದ ದೇಹದ ಸರ್ವತೋಮುಖ ಬೆಳವಣಿಗೆಗೆ ನೆರವಾಗುತ್ತದೆ.

ಪ್ರಯೋಜನಗಳು

ಯೋಗಾಸನಗಳನ್ನು ಪ್ರತಿನಿತ್ಯ ಅಭ್ಯಾಸ ಮಾಡುವುದರಿಂದ ದೇಹದ ರಕ್ತಪರಿಚಲನೆ ಸರಾಗವಾಗಿ ಆಗುತ್ತದೆ. ದೇಹದ ಮಲ ಹೊರದೂಡಲ್ಪಡುತ್ತದೆ. ಅನವಶ್ಯಕ ಕೊಬ್ಬು ಕರಗಿ, ದೇಹದ ಸ್ಥಿತಿಸ್ಥಾಪಕತ್ವ ಹೆಚ್ಚುವುದರಿಂದ ವಯಸ್ಸಾದರೂ ತಾರುಣ್ಯದ ಅನುಭವ ಸಾಧಕನಿಗೆ ದೊರಕುತ್ತದೆ. ದೇಹ ಹಗುರವಾಗುತ್ತದೆ. ಆರೋಗ್ಯ ವೃದ್ಧಿಸುತ್ತದೆ. ಮಾನಸಿಕ ಶಾಂತಿ, ಏಕಾಗ್ರತೆ ಪ್ರಾಪ್ತವಾಗುತ್ತದೆ.

ಪ್ರಾಣಾಯಾಮಗಳ ಅಭ್ಯಾಸ

ನಮ್ಮ ದೇಹದಲ್ಲಿ ಸಹಜ ಗತಿಯಲ್ಲಿರುವ ಪ್ರಾಣವಾಯುವನ್ನು ಪ್ರಜ್ಞಾಪೂರ್ವಕವಾಗಿ ವಿಸ್ತರಿಸುವ, ನಿಯಂತ್ರಿಸುವ ಮೂಲಕ ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯ ಸಂಪಾದಿಸುವ ಪದ್ಧತಿಯೇ ಪ್ರಾಣಾಯಾಮ. ನಮ್ಮ ಶರೀರದಲ್ಲಿ 72 ಸಾವಿರಕ್ಕೂ ಹೆಚ್ಚು ಸೂಕ್ಷ್ಮ ನಾಡಿಗಳಿದ್ದು, ಅವುಗಳಲ್ಲಿ ಪ್ರಾಣವಾಯು ಸುಲಲಿತವಾಗಿ ಸಂಚರಿಸುತ್ತಿದ್ದರೆ ಅದು ಆರೋಗ್ಯದ ಲಕ್ಷಣವೆಂದೂ, ಅದಕ್ಕೆ ಅಡಚಣೆ ಉಂಟಾದಾಗ ಅನಾರೋಗ್ಯವೆಂದೂ ಯೋಗಶಾಸ್ತ್ರದಲ್ಲಿ ಹೇಳಲಾಗಿದೆ. ಅದಕ್ಕಾಗಿಯೇ ರೂಢಿಯಲ್ಲಿರುವ ನಾಡಿಶೋಧನ ಪ್ರಾಣಾಯಾಮ ದೇಹದ ಪ್ರಾಣವಾಯುವಿನ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ತುಂಬಾ ಸಹಕಾರಿಯಾಗುತ್ತದೆ. ಇನ್ನು ನಾವು ದಿನನಿತ್ಯ ಸೇವಿಸುವ ವಾಯು ಪ್ರದೂಷಣೆಗಳ ನಿವಾರಣೆಗಾಗಿ ಕಪಾಲಭಾತಿ, ಶ್ವಾಸಕೋಶದ ಭಾಗಗಳಲ್ಲಿನ ವಾಯು ಪ್ರದೂಷಣೆಗಳನ್ನು ಹೊರಹಾಕಲು ಭಸ್ತ್ರಿಕಾ ಪ್ರಾಣಾಯಾಮ, ದೇಹದ ಉಷ್ಣಾಂಶವನ್ನು ನೀಗಿಸಿ ತಂಪು ಉಂಟುಮಾಡುವ ಶೀತಳಿ, ಶೀತ್ಕಾರಿ ಪ್ರಾಣಾಯಾಮಗಳು, ದೇಹದ ಜೀರ್ಣಾಂಗ ಕ್ರಿಯೆಗೆ ಉತ್ತೇಜನವನ್ನು ಉಂಟುಮಾಡುವ ಅಗ್ನಿಸಾರ ಕ್ರಿಯೆಗಳು ಅನಾರೋಗ್ಯವನ್ನು ದೂರ ಮಾಡುವ, ಆರೋಗ್ಯವನ್ನು ವೃದ್ಧಿಸುವ ಶ್ರೇಷ್ಠ ಪ್ರಾಣಾಯಾಮಗಳಾಗಿವೆ. ಇನ್ನು ಷಟ್ಕರ್ಮ ಕ್ರಿಯೆಗಳಂತೂ (ನೇತಿ, ಧೌತಿ, ಬಸ್ತಿ, ನೌಲಿ, ಕಪಾಲಭಾತಿ, ತ್ರಾಟಕ) ಇಡೀ ಶರೀರವನ್ನು ಸಂಪೂರ್ಣವಾಗಿ ಶುಚಿಗೊಳಿಸಿಬಿಡುತ್ತದೆ.

ಇಂದು ಮೈಸೂರು ಸೇರಿದಂತೆ ಭಾರತಾದ್ಯಂತ ಯೋಗ ಚಿಕಿತ್ಸೆಗೆ ಬೇಡಿಕೆ ಹೆಚ್ಚುತ್ತಿದೆ. ಯೋಗಕ್ಕೆ ಮಾರುಹೋಗುತ್ತಿರುವವರ ಸಂಖ್ಯೆ ಕೂಡ ಇಂದು ಹೆಚ್ಚುತ್ತಿರುವುದು ಮಹತ್ವದ ಬೆಳವಣಿಗೆಯಾಗಿದೆ. ಆಂಗ್ಲಸೂಕ್ತಿಯಂತೆ Prevention is better than cure ಎಂಬಂತೆ ಕಾಯಿಲೆ ನಮ್ಮನ್ನು ಆವರಿಸಿ ನಂತರ ಅದರಿಂದ ಮುಕ್ತಿ ಹೊಂದಲು ಯೋಗ ಚಿಕಿತ್ಸೆಗೆ ಮೊರೆ ಹೋಗುವುದಕ್ಕಿಂತ ಕಾಯಿಲೆ ಬಾರದಂತೆ ಮುಂಚಿತವಾಗಿಯೇ ಯೋಗಕ್ಕೆ ಅವಲಂಬಿತರಾಗುವುದು ಕ್ಷೇಮಕರ.

ಒಟ್ಟಾರೆ ಯೋಗ ಎಂಬುದು ಋಷಿಮುನಿಗಳು ಮನುಕುಲದ ಅಭ್ಯುದಯಕ್ಕಾಗಿ ನೀಡಿದ ಅದ್ಭುತ ಕೊಡುಗೆ ಎಂಬುದರಲ್ಲಿ ಎರಡು ಮಾತಿಲ್ಲ. ಅದರಲ್ಲೂ ಇಂದು ನಮ್ಮನ್ನು ಕಾಡುತ್ತಿರುವ ಅನೇಕಾನೇಕ ಕಾಯಿಲೆಗಳ ನಿವಾರಣೆಗೆ ಹಾಗೂ ಆರೋಗ್ಯ ವರ್ಧನೆಗೆ ಸಂಜೀವಿನಿಯಂತೆ ಕೆಲಸ ಮಾಡುತ್ತಿರುವುದರಿಂದ ಯೋಗ "ಆರೋಗ್ಯ ಸಂಜೀವಿನಿ"ಯೇ ಸರಿ.

ಇಂಡಿಯಾ ಮೈತ್ರಿಕೂಟದ ಭಾಗವಾಗಿ ಎಸ್‌ಡಿಪಿಐ ಪರಿಗಣಿಸಬೇಕು

● ಕಾಂಗ್ರೆಸ್‌ಗೆ ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಫೈಜಿ ಆಗ್ರಹ ● ಪರಿಗಣಿಸದೇ ಇದ್ದರೆ ಕರ್ನಾಟಕದ ಏಳು ಸೇರಿದಂತೆ ದೇಶಾದ್ಯಂತ 60 ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧೆ

ಮೈಸೂರು, ಡಿ.13(ಎಸ್‌ಪಿಎನ್)– ಜಾತ್ಯಾತೀತ ಸಿದ್ಧಾಂತಗಳ ಮೇಲೆ ರಚಿತವಾಗಿರುವ 'ಐ.ಎನ್.ಡಿ.ಐ.ಎ' ಮೈತ್ರಿಕೂಟದ ಭಾಗವಾಗಿ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ(ಎಸ್‌ಡಿಪಿಐ)ವನ್ನು ಕಾಂಗ್ರೆಸ್ ಪರಿಗಣಿಸಬೇಕು ಎಂದು ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ.ಫೈಜಿ ಆಗ್ರಹಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಎಸ್‌ಪಿಡಿಐ ವತಿಯಿಂದ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಡಿಪಿಐಯನ್ನು ಐಎನ್‌ಡಿಐಎ ಮೈತ್ರಿಕೂಟದ ಭಾಗವಾಗಿ ಕಾಂಗ್ರೆಸ್ ಒಂದು ವೇಳೆ ಪರಿಗಣಿಸದಿದ್ದರೆ, ದೇಶದ 543 ಲೋಕಸಭಾ ಕ್ಷೇತ್ರಗಳ ಪೈಕಿ 60 ಲೋಕಸಭಾ ಕ್ಷೇತ್ರಗಳಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲು ನಮ್ಮ ಪಕ್ಷ ತಯಾರಿ ನಡೆಸಿದೆ. ಅದರಂತೆ ಕರ್ನಾಟಕದಲ್ಲಿ ಮೈಸೂರು–ಕೊಡಗು, ದಕ್ಷಿಣ ಕನ್ನಡ, ಹಾವೇರಿ, ಬೆಂಗಳೂರು ಸೆಂಟ್ರಲ್, ವಿಜಯಪುರ, ಬಾಗಲಕೋಟೆ, ದಾವಣಗೆರೆ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ತಯಾರಿ ನಡೆದಿದೆ ಎಂದು ತಿಳಿಸಿದರು.

ಆರು ಅಂಶಗಳ ಕುರಿತು ಚರ್ಚೆ: ಕಳೆದೆರಡು ದಿನಗಳಿಂದ ಎಸ್‌ಡಿಪಿಐ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯನ್ನು ಮೈಸೂರಲ್ಲಿ ನಡೆಸಲಾಗಿದೆ. ಈ ಸಭೆಯಲ್ಲಿ 6 ಅಂಶಗಳು ಪ್ರಮುಖವಾಗಿ ಚರ್ಚೆ ನಡೆದಿದೆ. ದಲಿತರ ಮೇಲಿನ ದೌರ್ಜನ್ಯ ಪ್ರಕರಣ, ಬಿಜೆಪಿಯೇತರ ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವ ವಿವಿಧ ಪಕ್ಷಗಳಿಗೆ ಕೇಂದ್ರ ಸರ್ಕಾರ



ರಾಜ್ಯಪಾಲರ ಮೂಲಕ ಆಡಳಿತಾತ್ಮಕ ತಡೆ ನೀಡುತ್ತಿರುವುದು. ಸಂವಿಧಾನ ಬಾಹಿರವಾದ ಸಿಎಎ ಜಾರಿ ಬಗ್ಗೆ ಬಿಜೆಪಿ ಹೇಳಿಕೆ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಲಪಂಥೀಯ ವಿಚಾರಧಾರೆಯನ್ನು ವಿರೋಧಿಸುವ ಮೈತ್ರಿಕೂಟದಲ್ಲಿ ಸೇರಿಕೊಳ್ಳುವ ಬಗ್ಗೆ, ಅಲ್ಪಸಂಖ್ಯಾತರನ್ನು ರಾಜಕೀಯವಾಗಿ ತುಳಿಯುವ ಹುನ್ನಾರದ ಭಾಗವಾಗಿ ದೇಶಾದ್ಯಂತ ವಿಧಾನಸಭೆ ಮತ್ತು ಲೋಕಸಭಾ ಕ್ಷೇತ್ರ ವಿಂಗಡಣೆ ಕುರಿತು ಚರ್ಚೆ ಮಾಡಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ಗೆಲುವಿನಿಂದ ಮೈಮರೆತ ಕಾಂಗ್ರೆಸ್: ಐದು ರಾಜ್ಯಗಳಾದ ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ, ಮಿಜೊರಾಂ, ಛತ್ತೀಸ್‌ಗಡ ರಾಜ್ಯಗಳ ಚುನಾವಣೆಯಲ್ಲಿ ಮೂವರಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿದೆ. ಇದರ ಪರಾಮರ್ಶೆ ಕೂಡ ನಡೆಸಲಾಯಿತು. ಇದರಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿನ ಅಭೂತಪೂರ್ವ ಗೆಲುವಿನಿಂದ ಮೈಮರೆತ ಹಿನ್ನೆಲೆ ಹಾಗೂ ಐಎನ್‌ಡಿಐಎ ಮೈತ್ರಿಕೂಟದ ಪಾಲುದಾರ ಪಕ್ಷಗಳನ್ನು ಲಘುವಾಗಿ ಪರಿಗಣಿಸಿದ ಹಿನ್ನೆಲೆಯಲ್ಲಿ ಐದು ರಾಜ್ಯಗಳ ಪೈಕಿ, ಮೂರರಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋತಿದೆ. ಹಾಗಾಗಿ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಸೋಲಿಸಬೇಕಾದರೆ, ಎಸ್‌ಡಿಪಿಐಯನ್ನು ಐಎನ್‌ಡಿಐಎ ಮೈತ್ರಿಕೂಟಕ್ಕೆ ಸೇರಿಸಿಕೊಳ್ಳುವ ಕುರಿತು ಚರ್ಚಿಸಲಾಯಿತು ಎಂದರು.

ಭಾವನಾತ್ಮಕ ಅಂಶಗಳ ಮೇಲೆ ಬಿಜೆಪಿ ಚುನಾವಣೆ: ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಬಲಪಂಥೀಯ ಸಿದ್ಧಾಂತಗಳ ಮೇಲೆ ಚುನಾವಣೆ ಗೆಲ್ಲಲು ಮುಂದಾಗಿದೆ. ಅಲ್ಲದೆ, ಕಳೆದ ಒಂಭತ್ತೂವರೆ ವರ್ಷಗಳ ಅಧಿಕಾರಾವಧಿಯಲ್ಲಿ ಅಭಿವೃದ್ಧಿ ಮಾಡದ ಹಿನ್ನೆಲೆಯಲ್ಲಿ ಸಿಎಎ, ಎನ್‌ಆರ್‌ಸಿ, ಧರ್ಮ, ಧರ್ಮಗಳ ನಡುವಿನ ಕಂದಕ, ಜಮ್ಮು ಮತ್ತು ಕಾಶ್ಮೀರ ಚುನಾವಣೆ ವಿಷಯಗಳನ್ನು ಮುಂದು ಮಾಡಿ, ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಈ ತಂತ್ರವನ್ನು ಕಟ್ಟಿಹಾಕಲು ನಾವು ಜಾತ್ಯಾತೀತ ನಿಲುವು ಪ್ರತಿಪಾದಿಸುವ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಒಲವು ವ್ಯಕ್ತಪಡಿಸಿದರು.

ಜಾತಿಗಣತಿ ವರದಿ ಸ್ವೀಕರಿಸುವಂತೆ ಒತ್ತಾಯ: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೋಟ್ಯಾಂತರ ರೂ.,ಗಳನ್ನು ವೆಚ್ಚ ಮಾಡಿ, ಜಾತಿಗಣತಿ ವರದಿಯನ್ನು ಹಿಂದುಳಿದ ವರ್ಗಗಳ ಆಯೋಗದಿಂದ ಸಿದ್ಧಪಡಿಸಿದೆ. ಈ ವರದಿಯನ್ನು ಸ್ವೀಕರಿಸಿ, ಜಾರಿ ಮಾಡಲು ಇದೀಗ ಕಾಂಗ್ರೆಸ್ ಸರ್ಕಾರ ಮೀನಾಮೇಷ ಎಣಿಸುತ್ತಿದೆ ಮೇಲ್ವರ್ಗದವರ ಪ್ರಭಾವದಿಂದ ವರದಿ ಸ್ವೀಕರಿಸಲು ಕಾಂಗ್ರೆಸ್ ಕಳ್ಳಾಟವಾಡುತ್ತಿದೆ ಎಂದು ದೂರಿದರಲ್ಲದೆ, ದೇಶಾದ್ಯಂತ ಜಾತಿಗಣತಿ ನಡೆಸುವಂತೆ ಜಾಥಾ, ಪ್ರತಿಭಟನೆ, ವಿಚಾರ ಸಂಕಿರಣ ಹಮ್ಮಿಕೊಂಡು ಮತದಾರರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ದಲಿತರ ಮೇಲಿನ ಪ್ರಕರಣ ಹೆಚ್ಚಳ: ಉತ್ತರ ಪ್ರದೇಶ, ಗುಜರಾತ್, ಮಧ್ಯಪ್ರದೇಶ, ಹರಿಯಾಣ, ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳಲ್ಲಿ ದಲಿತರ ಮೇಲೆ ಪ್ರತಿ ವರ್ಷ 60 ಸಾವಿರ ದೌರ್ಜನ್ಯ ಪ್ರಕರಣ ದಾಖಲಾಗುತ್ತಿವೆ. ಈ ಪ್ರಕರಣಗಳನ್ನು ಆಯಾಯ ರಾಜ್ಯದ ಪೊಲೀಸ್ ಇಲಾಖೆ ಸರಿಯಾಗಿ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುತ್ತಿಲ್ಲ. ಅಲ್ಲದೆ, ಕಾಂಗ್ರೆಸ್ ಪಕ್ಷ ಮುಸ್ಲಿಂರ ರಕ್ಷಣೆ ಮಾಡುತ್ತೇವೆ ಎನ್ನುತ್ತಿದ್ದಾರೆ. ಬಲಪಂಥಿಯ ಧೋರಣೆಯನ್ನು ವಿರೋಧಿಸುವ ಎಸ್‌ಡಿಪಿಐ ಕಾರ್ಯಕರ್ತರ ಮೇಲೆ ರಾಜ್ಯದಲ್ಲಿ ಸುಮೊಟೋ ಕೇಸ್ ದಾಖಲಿಸುತ್ತಿದೆ. ಇದು ಕಾಂಗ್ರೆಸ್‌ನ ದ್ವಿಮುಖ ನೀತಿ ಅಲ್ಲದೆ ಮತ್ತೇನು ಎಂದು ಪ್ರಶ್ನಿಸಿದ ಅವರು, ಹಮಾಸ್ ಮತ್ತು ಇಸ್ರೇಲ್ ಯುದ್ಧವನ್ನು ಖಂಡಿಸಿರುವ ಕಾಂಗ್ರೆಸ್, ಪ್ಯಾಲೆಸ್ಟೈನ್ ಪರವಾಗಿ ಬೆಂಬಲ ಸೂಚಿಸುತ್ತದೆ. ಎಸ್‌ಡಿಪಿಐ ಕಾರ್ಯಕರ್ತರು, ಪ್ಯಾಲೆಸ್ಟೈನ್ ಪರವಾಗಿ ರಾಜ್ಯದಲ್ಲಿ ಪ್ರತಿಭಟನೆ ನಡೆಸಿದರೆ ಕೇಸ್ ದಾಖಲಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ತನಿಖೆಗೆ ಆಗ್ರಹ: ಸಂಸತ್‌ಗೆ ಒಳ ಪ್ರವೇಶಿಸಿರುವ ಆಗಂತುಕರು, ನಮ್ಮ ಭದ್ರತಾ ವ್ಯವಸ್ಥೆಗೆ ದೊಡ್ಡ ಸವಾಲು ಎಸಗಿದ್ದಾರೆ. ಈ ಆಗಂತುಕರಲ್ಲಿ ಇಬ್ಬರಿಗೆ ಪಾಸ್ ವಿತರಣೆ ಮಾಡಿರುವುದು ಸಂಸದ ಪ್ರತಾಪಸಿಂಹ ಅವರ ಮೈಸೂರು ಕಚೇರಿಯಿಂದ. ಈ ಕೂಡಲೇ ಕೇಂದ್ರ ಸರ್ಕಾರ, ಪ್ರತಾಪಸಿಂಹ ಅವರಿಂದ ರಾಜೀನಾಮೆ ಪಡೆದು ತನಿಖೆ ನಡೆಸುವಂತೆ ಒತ್ತಾಯಿಸಿದರು. ಈ ವೇಳೆ ಎಸ್‌ಡಿಪಿಐ ರಾಷ್ಟ್ರೀಯ ಉಪಾಧ್ಯಕ್ಷರಾದ ಬಿಎಂ ಕಾಂಬ್ಳೆ ಮಹಮ್ಮದ್ ಶಫಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಇಲಿಯಾಸ್ ತುಂಬೆ, ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಕೊಡ್ಲಿಪೇಟೆ ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಗುರುವಾರ 14 ಡಿಸೆಂಬರ್ 2023

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಪ್ರತಿಮೆ

ರಾಜಮಾತೆ ಪ್ರಮೋದಾದೇವಿ ಒಡೆಯರ್ ಪ್ರತಿಕ್ರಿಯೆ





ಸುತ್ತೂರು ಶ್ರೀ ಪ್ರಮೋದಾದೇವಿ

ಮೈಸೂರು, ಡಿ. 13(ಆರ್‌ಕೆ)–ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಪ್ರತಿಮೆ ಸ್ಥಾಪನೆಯಾಗಿ ಅದರ ಅನಾವರಣವೂ ನಿಮ್ಮ ಉಪಸ್ಥಿತಿಯಲ್ಲೇ ನೆರವೇರಲಿ. ಅದಕ್ಕೆ ನೀವು ಸಮ್ಮತಿಸುತ್ತೀರೆಂಬ ವಿಶ್ವಾಸವಿದೆ ಎಂಬ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, 2022ರ ಜುಲೈ 28ರಂದು ಬರೆದಿದ್ದ ಪತ್ರಕ್ಕೆ ಸಂಬಂಧಿಸಿದಂತೆ ಪ್ರಮೋದಾದೇವಿ ಒಡೆಯರ್ ಪ್ರತಿಕ್ರಿಯೆ ನೀಡಿದ್ದಾರೆ.

ಸುತ್ತೂರು ಶ್ರೀಗಳು ಶ್ರೀ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಪ್ರತಿಮೆ ಅನಾವರಣಕ್ಕೆ ಆಹ್ವಾನ ನೀಡಿದ್ದನ್ನು ನಾನು ಸಮ್ಮತಿಸುವುದು ಸಮಂಜಸವಲ್ಲ. ಅಲ್ಲದೇ ನಾನು ಈಗಾಗಲೇ ನನ್ನ ಸಮುದಾಯದ ಜನರ ಭಾವನೆಗಳಿಗೆ ಸ್ಪಂದಿಸಿದ್ದೇನೆ ಹಾಗೂ ವಿದ್ಯಾಪೀಠ ಕಟ್ಟಡವೂ ಸೇರಿದಂತೆ ಸುತ್ತೂರು ಮಠಕ್ಕೆ ನೀಡಿರುವ ಇತರ ಆಸ್ತಿಗಳು ಅರಮನೆಯು ಕೊಡುಗೆ ಅಥವಾ ಇತರ ರೂಪದ್ದಾಗಿದೆ.

ಇಂತಹ ಸಂದರ್ಭದಲ್ಲಿ ಸಂಸ್ಥೆ ಮತ್ತು ಭಕ್ತರಿಂದ ಅರಮನೆಯು ಉದಾರತೆಯನ್ನು ನಿರೀಕ್ಷಿಸಿತ್ತು. ಎಂ.ಲಕ್ಷ್ಮೀನಾರಾಯಣ ಅವರು ಸುತ್ತೂರು ಮಠಕ್ಕೆ ನನ್ನ ಪತ್ರ ಕೊಂಡೊಯ್ದಿದ್ದು ಸತ್ಯ. ಆದರೆ ಅವರು ನಾನು ಬರೆದಿದ್ದ ಪತ್ರದೊಂದಿಗೆ ವಾಪಸಾಗಿದ್ದಾರೆ. ಅಷ್ಟಕ್ಕೂ ಈ ವಿಷಯವು ಸುತ್ತೂರು ಜಗದ್ಗುರು ಶ್ರೀ ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಮೇಲಿನ ನಮ್ಮ ಭಕ್ತಿಯ ಸುತ್ತ ಮಾತ್ರ ಸುತ್ತುತ್ತಿಲ್ಲ. ಬದಲಾಗಿ ಅದು ಕೇವಲ ಪ್ರತಿಮೆ ಸ್ಥಾಪಿಸುವ ಸ್ಥಳ ಆಯ್ಕೆಗೆ ಸೀಮಿತವಾಗಿದೆ. ನಾನು ಈಗಾಗಲೇ ಪ್ರತಿಮೆ ಸ್ಥಾಪಿಸುವ ಪ್ರಕ್ರಿಯೆ ಆರಂಭಿಸಿದವರಿಗೆ ಬೆಂಬಲ ವ್ಯಕ್ತಪಡಿಸಿದ್ದೇನೆ ಹಾಗೂ ಘನತೆವೆತ್ತ ಸುಪ್ರೀಂಕೋರ್ಟ್‌ನ ತೀರ್ಪಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದೇನೆ.

ಭೂ ಮಾಫಿಯಾ ಜೊತೆಗೆ ಕೈಜೋಡಿಸಿ ಸರ್ಕಾರಿ ಭೂಮಿ ಅಕ್ರಮ ಪರಭಾರೆ

ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ; ಸರ್ಕಾರಿ ಭೂಮಿ ಮತ್ತೆ ವಶಕ್ಕೆ ಪಡೆಯುವ ಕಾರ್ಯ

● ಕಂದಾಯ ಸಚಿವ ಕೃಷ್ಣಬೈರೇಗೌಡ ಮಾಹಿತಿ ● ಈಗಾಗಲೇ ಹಲವು ಪ್ರಕರಣಗಳಲ್ಲಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲು

ಬೆಳಗಾವಿ, ಡಿ.13(ಕೆಎಂಶಿ)–ಭೂ ಮಾಫಿಯಾ ಜೊತೆಗೆ ಕೈಜೋಡಿಸಿ ಸರ್ಕಾರಿ ಜಮೀನಿನ ಅಕ್ರಮ ಪರಭಾರೆಗೆ ಸಹಕರಿಸಿದ ಎಲ್ಲಾ ಅಧಿಕಾರಿಗಳ ವಿರುದ್ಧವೂ ಕೇಸ್ ಬೈ ಕೇಸ್ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಅಲ್ಲದೆ, ಸರ್ಕಾರಿ ಜಮೀನನ್ನೂ ವಶಕ್ಕೆ ಪಡೆಯುವ ಕೆಲಸ ಸಮರೋಪಾದಿಯಲ್ಲಿ ಆರಂಭಿಸಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ವೈ.ಎ.ನಾರಾಯಣಸ್ವಾಮಿ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಸರ್ಕಾರಿ ಭೂ ಒತ್ತುವರಿ ಎಂಬುದು ಬೆಂಗಳೂರು ಮಾತ್ರವಲ್ಲ ರಾಜ್ಯಾದ್ಯಂತ ಇದೀಗ ದೊಡ್ಡ ಸಮಸ್ಯೆಯಾಗಿದೆ. ಸರ್ಕಾರಿ ಅಧಿಕಾರಿಗಳೇ ಭೂ ಮಾಫಿಯಾ ಜೊತೆಗೆ ಕೈಜೋಡಿಸಿ ಜಮೀನುಗಳನ್ನು ಖಾಸಗಿಯವರಿಗೆ ಅಕ್ರಮವಾಗಿ ಪರಭಾರೆ ಮಾಡುತ್ತಿರುವುದು ದುರದೃಷ್ಟಕರ. ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಇಂತಹ ಭ್ರಷ್ಟ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಮುಂದಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.



'ಸರ್ಕಾರಿ ಭೂಮಿ ಅಕ್ರಮ ಪರಭಾರೆ ಪ್ರಕರಣದಲ್ಲಿ ಬೆಂಗಳೂರಿನ ಉಪವಿಭಾಗಾಧಿಕಾರಿ ವಿರುದ್ಧ ಎರಡು ಎಫ್‌ಐಆರ್ ಮಾಡಲಾಗಿದೆ. ಆನೇಕಲ್ ತಹಶೀಲ್ದಾರ್, ಕೆ.ಆರ್.ಪುರ ತಹಶೀಲ್ದಾರ್ ಹಾಗೂ ಯಲಹಂಕ ತಹಶೀಲ್ದಾರ್ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಈ ಎಲ್ಲಾ ಪ್ರಕ ರಣದಲ್ಲೂ ಎಫ್‌ಐಆರ್ ಜೊತೆಗೆ ಕ್ರಿಮಿನಲ್ ಪ್ರಕರಣವನ್ನೂ ದಾಖಲಿಸಿ ವಿಚಾರಣೆ ಕೈಗೊಳ್ಳಲಾಗಿದೆ. ರಾಜ್ಯಾದ್ಯಂತ ಅಕ್ರಮದಲ್ಲಿ ಶಾಮೀಲಾದ ಎಲ್ಲಾ ಅಧಿಕಾರಿಗಳ ವಿಚಾರದಲ್ಲೂ ಕೇಸ್ ಬೈ ಕೇಸ್ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದರು. ಇದಲ್ಲದೆ, ಬೆಂಗಳೂರಿನ ಮಟ್ಟಿಗೆ ಇಲ್ಲಿ ತಹಶೀಲ್ದಾರ್ ಆಗಿ ಕೆಲಸ ನಿರ್ವಹಿಸಿದ ಅಧಿಕಾರಿಗಳೇ ಭವಿಷ್ಯದಲ್ಲಿ ಉಪ ವಿಭಾಗಾಧಿಕಾರಿಗಳಾಗಿ ನೇಮಕವಾಗುವ ಪ್ರಸಂಗ ಹಲವು ವರ್ಷಗಳಿಂದ ನಡೆದುಕೊಂಡು ಬಂದಿದೆ. ಭ್ರಷ್ಟಾಚಾರ ಹೆಚ್ಚಾಗಲು ಮತ್ತು ಸರ್ಕಾರಿ ಜಮೀನು ಖಾಸಗಿಯವರ ಪಾಲಾಗಲು ಇದೂ ಸಹ ಒಂದು ಕಾರಣ. ಹೀಗಾಗಿ ಮುಂದಿನ ದಿನಗಳಲ್ಲಿ ಈ ಬಗ್ಗೆಯೂ ಕ್ರಮವಹಿಸಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಸದನಕ್ಕೆ ತಿಳಿಸಿದರು.

ರಾಜ್ಯದ ಯಾವ ಜಿಲ್ಲೆ ಯಾವ ಭಾಗದಲ್ಲಿ ಯಾವ ಜಮೀನನ್ನು ಅಧಿಕಾರಿಗಳು ಅಕ್ರಮವಾಗಿ ಖಾಸಗಿಯವರಿಗೆ ಪರಭಾರೆ ಮಾಡಿದ್ದಾರೆ ಎಂಬ ಕುರಿತು ವಿಸ್ತೃತ ವರದಿ ನೀಡುವಂತೆ ಪ್ರಾದೇಶಿಕ ಆಯುಕ್ತರಿಗೆ ಸೂಚಿಸಲಾಗಿದೆ. ಈ ವರದಿ ಆಧರಿಸಿ ಈಗಾಗಲೇ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಆಂದೋಲನ ಮಾದರಿಯಲ್ಲಿ ಕಾರ್ಯಾಚರಣೆ ನಡೆಸುವ ಮೂಲಕ ಸಾವಿರಾರು ಕೋಟಿ ಸರ್ಕಾರಿ ಆಸ್ತಿಯನ್ನು ವಶಕ್ಕೆ ಪಡೆಯಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಜಾಗಗಳ ರಕ್ಷಣೆಗೆ ಸರ್ಕಾರ ಮುಂದಾಗಿದೆ. ದಾಖಲೆಗಳಲ್ಲಿರುವ ಎಲ್ಲಾ ಜಮೀನಿನ ವಿವರಗಳನ್ನೂ ಈಗಾಗಲೇ ಆ್ಯಪ್‌ಗೆ ಅಪ್ಲೋಡ್ ಮಾಡಲಾಗಿದೆ. ಅಲ್ಲದೆ, ಮೊಬೈಲ್ ಆ್ಯಪ್ ಮೂಲಕ ಖಾಲಿ ಜಾಗಗಳ ಜಿ.ಪಿ.ಎಸ್ ಲೊಕೇಷನ್ ಮಾರ್ಕ್ ಮಾಡಿ, ಬೌಂಡರಿ ಫಿಕ್ಸ್ ಮಾಡಲಾಗಿದೆ.

ಕಂದಾಯ ಇಲಾಖೆ ಅಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಖಾಲಿ ಜಾಗಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಲು ಬೀಟ್ ಸಿಸ್ಟಂ ಜಾರಿ ಮಾಡಲಾಗಿದೆ. ಒತ್ತುವರಿಯಾಗಿರುವುದು ಕಂಡುಬಂದರೆ ಕೂಡಲೇ ಸಂಬಂಧಪಟ್ಟ ತಹಶೀಲ್ದಾರ್ ತೆರವುಗೊಳಿಸಬೇಕು. ಬೀಟ್ ಸಿಸ್ಟಂ ಮೊಬೈಲ್ ಲೊಕೇಷನ್ ಆಧಾರದ ಮೇಲೆ ಕಾರ್ಯ ನಿರ್ವಹಿಸುವುದರಿಂದ ಅಧಿಕಾರಿಗಳು ಕಡ್ಡಾಯ ಸ್ಥಳಕ್ಕೇ ತೆರಳಬೇಕು. ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

'ಮಾಸ್ಕ್ ಧರಿಸಿ': ದೇಶದಲ್ಲಿ ಮತ್ತೆ ಕೋವಿಡ್–19 ಸೋಂಕು ಹೆಚ್ಚಳ



ನವದೆಹಲಿ: ದೇಶದಲ್ಲಿ ಮತ್ತೆ ಕೋವಿಡ್–19 ಸೋಂಕು ಹೆಚ್ಚಳವಾಗುತ್ತಿದ್ದು, ಇಂದು ಒಂದೇ ದಿನ ದೇಶಾದ್ಯಂತ 252 ಹೊಸ ಸೋಂಕು ಪ್ರಕರಣಗಳು ವರದಿಯಾಗಿದೆ ಎಂದು ತಿಳಿದುಬಂದಿದೆ.

ಇಂದು ದೇಶಾದ್ಯಂತ 252 ಹೊಸ ಕೋವಿಡ್ ಸೋಂಕು ಪ್ರಕರಣಗಳು ವರದಿಯಾಗಿದ್ದು, ಈ ವರ್ಷ ಜೂನ್ 2 ರಿಂದೀಚೆಗೆ ಇದು ದಿನವೊಂದರಲ್ಲಿ ದಾಖಲಾದ ಗರಿಷ್ಠ ಪ್ರಮಾಣದ ಸೋಂಕು ಪ್ರಕರಣಗಳಾಗಿದೆ. ಇಂದಿನ ಪ್ರಕರಣಗಳ ಸಂಖ್ಯೆಯೂ ಸೇರಿದಂತೆ ದೇಶದಲ್ಲಿ ಸಕ್ರಿಯ ಸೋಂಕು ಪ್ರಕರಣಗಳ ಸಂಖ್ಯೆ 1,091ಕ್ಕೆ ಏರಿದೆ ಎಂದು ಬುಧವಾರ ನವೀಕರಿಸಿದ ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ ಅಂಶಗಳು ತಿಳಿಸಿವೆ. ಅಂತೆಯೇ ದೇಶದ ಒಟ್ಟಾರೆ ಕೋವಿಡ್ ಪ್ರಕರಣಗಳ ಸಂಖ್ಯೆ 4.50 ಕೋಟಿ (4,50,03,593) ದಾಟಿದ್ದು, ಸಾವಿನ ಸಂಖ್ಯೆ 5,33,308ಕ್ಕೆ ದಾಖಲಾಗಿದೆ.

ಅರ್ಜುನನಿಗೆ ಮೊಂಬತ್ತಿ ಬೆಳಗಿ ಶ್ರದ್ಧಾಂಜಲಿ



ಮೈಸೂರು, ಡಿ.13(ಎಸ್‌ಪಿಎನ್)– ಇತ್ತೀಚೆಗೆ ಮದಗಜದೊಂದಿಗೆ ಕಾದಾಡಿ ವೀರ ಮರಣವನ್ನಪ್ಪಿದ ಅರ್ಜುನ ದಸರಾ ಆನೆ ಪ್ರತಿಕೃತಿಗೆ ವಾಂಯ್ಸ್ ಆಫ್ ಪೀಪಲ್ ಪದಾಧಿಕಾರಿಗಳು, ಸಾರ್ವಜನಿಕರು ಮೊಂಬತ್ತಿ ಬೆಳಗಿ ಬುಧವಾರ ಶ್ರದ್ಧಾಂಜಲಿ ಸಲ್ಲಿಸಿದರು.

ಮೈಸೂರು ವಿವೇಕಾನಂದ ನಗರದಲ್ಲಿನ ಜ್ಯೋತಿ ವಿದ್ಯಾಸಂಸ್ಥೆ ಬಳಿಯ ಹಿರಿಯ ನಾಗರಿಕರ ವೃತ್ತದಲ್ಲಿ ಅರ್ಜುನ ಆನೆಗೆ ಶ್ರದ್ಧಾಂಜಲಿ ಸಲ್ಲಿಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಎ.ವಸಂತ್‌ರಾವ್ ಚವಾಣ್, ಹಾಸನ ಜಿಲ್ಲೆ ಸಕಲೇಶಪುರ ಬಳಿಯ ಕಾಡಿನಲ್ಲಿ ಮದವೇರಿದ ಕಾಡಾನೆಯೊಂದಿಗೆ ಕಾದಾಡಿ ಅರ್ಜುನ ಸಾವನ್ನಪ್ಪಿದೆ. ಈ ಹಿಂದೆ 8 ಬಾರಿ ಅಂಬಾರಿ ಹೊತ್ತು ಲಕ್ಷಾಂತರ ಜನರ ಕಣ್ಮಣಿಯಾಗಿದೆ ಎಂದರು.

ಪ್ರತಿಮೆ ಸ್ಥಾಪಿಸಿ: ಲಕ್ಷಾಂತರ ಜನರ ಹೃದಯದಲ್ಲಿರುವ ಕ್ಯಾ.ಅರ್ಜುನ ದಸರಾ ಆನೆಗೆ ಮೈಸೂರಿನ ಯಾವುದಾದರು ವೃತ್ತದಲ್ಲಿ ಪ್ರತಿಮೆ ಸ್ಥಾಪಿಸಿ, ಜಿಲ್ಲಾಡಳಿತ ವತಿಯಿಂದ ಪ್ರತಿ ವರ್ಷ ಗೌರವ ಸಲ್ಲಿಸುವಂತೆ ಮನವಿ ಮಾಡಿದರು. ಈ ವೇಳೆ ಸುಜಯ್‌ಕುಮಾರ್ ಸಿಂಗ್, ಪಿ.ರಾಜೇಶ್, ಕೆ.ವೆಂಕಟೇಶ್, ಎಸ್.ಮಧುಸೂದನ್, ಪ್ರದೀಪ್ ಬಿಡ್ಡನ್, ಶ್ವೇತಾ, ಮಂಜುನಾಥ್, ಅರುಣ್ ಸೇರಿದಂತೆ ಇತರರಿದ್ದರು.

ಕರ್ನಾಟಕ ಮೋಟಾರು ವಾಹನ ತಿದ್ದುಪಡಿ ಮಸೂದೆ

ವೈಯಕ್ತಿಕ, ಶಾಲಾ ವಾಹನ, ಕ್ಯಾಬ್‌ಗಳ ಮೇಲಿನ ತೆರಿಗೆ ಹೆಚ್ಚಳ



ಬೆಳಗಾವಿ: ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ಮಸೂದೆ, ಕರ್ನಾಟಕ ಹೈಕೋರ್ಟ್ (ತಿದ್ದುಪಡಿ) ಮಸೂದೆ–2023 ಮತ್ತು ಕರ್ನಾಟಕ ಸಿವಿಲ್ ಕೋರ್ಟ್ (ತಿದ್ದುಪಡಿ) ಮಸೂದೆ 2023– ಎಂಬ ಮೂರು ಮಸೂದೆಗಳನ್ನು ಬೆಳಗಾವಿ ಸುವರ್ಣ ಸೌಧದಲ್ಲಿ ನಡೆದ ಅಧಿವೇಶನದಲ್ಲಿ ಮಂಡಿಸಲಾಯಿತು. ಮೋಟಾರು ವಾಹನ ತೆರಿಗೆ (2ನೇ ತಿದ್ದುಪಡಿ) ಮಸೂದೆಯು ಕೇಂದ್ರ ಸರ್ಕಾರವು ಮೋಟಾರು ವಾಹನ ಕಾಯ್ದೆ, 2019ಗೆ ಮಾಡಿದ ತಿದ್ದುಪಡಿಗಳನ್ನು ಜಾರಿಗೆ ತರುತ್ತದೆ. ಇದರೊಂದಿಗೆ, 5,600ದಷ್ಟು ಸರಕು ವಾಹನಗಳು, ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಒಡೆತನದ 50,165 ವಾಹನಗಳು, ಕ್ಯಾಬ್‌ಗಳು 4,000 ಮತ್ತು ಎಲೆಕ್ಟ್ರಿಕ್ ವಾಹನಗಳು 2,088ರ 4 ವಿಭಾಗಗಳ ನೋಂದಣಿ ಮೇಲೆ ತೆರಿಗೆ ಹೆಚ್ಚಿಸುವ ಮೂಲಕ 234.34 ಕೋಟಿ ಹೆಚ್ಚುವರಿ ಆದಾಯ ಸಂಗ್ರಹವಾಗಬಹುದು ಎಂದು ರಾಜ್ಯ ಸರ್ಕಾರ ನಿರೀಕ್ಷಿಸುತ್ತಿದೆ. ಹೊಸ ಕಾಯಿದೆ ಅಡಿಯಲ್ಲಿ, ಖಾಸಗಿ ವಾಹನಗಳನ್ನು 5 ಲಕ್ಷ ರೂ. ಬೆಲೆಯಿಂದ 20 ಲಕ್ಷ ರೂ. ವರೆಗೆ ವಿವಿಧ ವರ್ಗಗಳಾಗಿ ವರ್ಗೀಕರಿಸಲಾಗಿದೆ. ಈ ವಾಹನಗಳಿಗೆ ವಾಹನಗಳ ವೆಚ್ಚದ ಶೇ.13ರಿಂದ 18ರಷ್ಟು ತೆರಿಗೆ ವಿಧಿಸಲಾಗುತ್ತದೆ. ಸರಕು ವಾಹನಗಳನ್ನು, ಅವುಗಳ ತೂಕ–ಸಾಗಿಸುವ ಸಾಮರ್ಥ್ಯದ ಪ್ರಕಾರ 1,500 ಕೆಜಿಯಿಂದ 9,500 ಕೆಜಿವರೆಗೆ ತೆರಿಗೆಯು 20,000 ರಿಂದ 80,000 ರೂ.ವರೆಗೆ ವರ್ಗೀಕರಿಸಲಾಗಿದೆ. ಕ್ಯಾಬ್‌ಗಳನ್ನು ಅವುಗಳ ಬೆಲೆಗೆ ಅನುಗುಣವಾಗಿ 10 ಲಕ್ಷ ರೂ.ಗಳಿಂದ 15 ಲಕ್ಷ ರೂ.ವರೆಗೆ ಮತ್ತು 15 ಲಕ್ಷಕ್ಕಿಂತ ಹೆಚ್ಚು ಎಂದು ವರ್ಗೀಕರಿಸಲಾಗಿದೆ. ಮೊದಲಿನವು ವಾಹನಗಳ ವೆಚ್ಚದಲ್ಲಿ ಶೇ.9 ರಷ್ಟು ಮತ್ತು ಎರಡನೆಯದು ಶೇ.15ರಷ್ಟು ತೆರಿಗೆ ವಿಧಿಸಲಾಗುತ್ತದೆ. 10ರಿಂದ 15 ಲಕ್ಷ ಮೌಲ್ಯದ ವಾಹನಗಳ ತೆರಿಗೆಯನ್ನು ಈಗಿರುವಂತೆ ಪ್ರತಿ 3 ತಿಂಗಳಿಗೊಮ್ಮೆ ಸಂಗ್ರಹಿಸುವ ಬದಲು ಒಂದು ಬಾರಿ ಸಂಗ್ರಹಿಸಲು ಉದ್ದೇಶಿಸಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು. ಕ್ಯಾಬ್ ಮಾಲೀಕರ ವಿರೋಧದ ನಂತರ, ಹಳೆಯ ವಾಹನಗಳಿಗೆ ತೆರಿಗೆ ವಿಧಿಸುವ ಷರತ್ತನ್ನು ತೆಗೆದುಹಾಕಲು ಸರ್ಕಾರ ನಿರ್ಧರಿಸಿದೆ. ಈಗ ನೋಂದಣಿಯಾದ ಹೊಸ ವಾಹನಗಳಿಗೆ ಮಾತ್ರ ತೆರಿಗೆ ವಿಧಿಸಲಾಗುವುದು ಎಂದರು.

ಹೈಕೋರ್ಟ್ ಮಸೂದೆಯು ಕರ್ನಾಟಕ ಹೈಕೋರ್ಟ್ ಕಾಯಿದೆ 1961 ಅನ್ನು ಮರು ವ್ಯಾಖ್ಯಾನಿಸಲು, ಮೊದಲ ಮೇಲ್ಮನವಿ ಮತ್ತು 2ನೇ ಮೇಲ್ಮನವಿಯನ್ನು ತಿದ್ದುಪಡಿ ಮಾಡುತ್ತದೆ, ಜೊತೆಗೆ ಪ್ರಕರಣಗಳ ತ್ವರಿತ ವಿಲೇವಾರಿಗೆ ಕರ್ನಾಟಕದ ಕಾನೂನು ಆಯುಕ್ತರ ಶಿಫಾರಸುಗಳಿಗೆ ಅನುಗುಣವಾಗಿ ಕೆಲವು ಪರಿಣಾಮವಾಗಿ ತಿದ್ದುಪಡಿಗಳನ್ನು ಮಾಡುತ್ತದೆ.

ಸಿವಿಲ್ ನ್ಯಾಯಾಲಯದ (ತಿದ್ದುಪಡಿ) ಮಸೂದೆ 2023 ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಹಣದ ನ್ಯಾಯ ವ್ಯಾಪ್ತಿಯನ್ನು ಹೆಚ್ಚಿಸಲು ಮತ್ತು ಬಾಕಿಗೆ ಸಂಬಂಧಿಸಿದಂತೆ ಹೈಕೋರ್ಟ್ ಮೇಲಿನ ಹೊರೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತದೆ. ಕರ್ನಾಟಕದ ಕಾನೂನು ಆಯೋಗದ ಶಿಫಾರಸಿನ ಮೇರೆಗೆ ಈ ಮಸೂದೆಯನ್ನು ಪ್ರಕಟಿಸಲಾಗಿದೆ.

ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆವರಣದಲ್ಲಿ ಮೂರು ದಿನವಾದರೂ ಚಿರತೆ ಸುಳಿವಿಲ್ಲ

ಮೈಸೂರು, ಡಿ.13(ಎಂಕೆ)– ಮೈಸೂರಿನ ಯಾದವಗಿರಿಯ ಶ್ರೀ ರಾಮಕೃಷ್ಣ ವಿದ್ಯಾಶಾಲಾ ಆವರಣದ ತೋಟದಲ್ಲಿ ಕಾಣಿಸಿಕೊಂಡಿರುವ ಚಿರತೆ ಇದುವರೆಗೂ ಪತ್ತೆಯಾಗಿಲ್ಲ ಎಂದು ಅರಣ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ.

ಸೋಮವಾರ ರಾತ್ರಿ ರಾಮಕೃಷ್ಣ ವಿದ್ಯಾಶಾಲಾ ಆವರಣದ ತೋಟದಲ್ಲಿ ಚಿರತೆ ಹೊಂಚು ಹಾಕುತ್ತಿದ್ದ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ವಿಷಯ ತಿಳಿದ ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ, ಕೂಂಬಿಂಗ್ ನಡೆಸಿದರಾದರೂ ಚಿರತೆ ಪತ್ತೆಯಾಗಿರಲಿಲ್ಲ. ಮುನ್ನೆಚ್ಚರಿಕಾ ಕ್ರಮವಾಗಿ ಮಂಗಳವಾರ ಬೆಳಗ್ಗೆ ಚಿರತೆ ಕಾಣಿಸಿಕೊಂಡ ಸ್ಥಳದಲ್ಲಿ ಬೋನ್ ಇಡಲಾಗಿದೆ. ಆದರೆ, ಬೋನ್ ಇಟ್ಟು ದಿನ ಕಳೆದರೂ ಚಿರತೆ ಪತ್ತೆಯಾಗಿಲ್ಲ. ತೋಟದಲ್ಲಿ ಕಾಣಿಸಿಕೊಂಡಿರುವ ಚಿರತೆ ಕಾಂಪೌಂಡ್ ಜಿಗಿದು ಹೊರಹೋಗಿರುವ ಸಾಧ್ಯತೆಯೂ ಇದೆ. ಆದರೂ ಮುನ್ನೆಚ್ಚರಿಕಾ ಕ್ರಮವಾಗಿ ಬೋನ್ ಅಲ್ಲಿಯೇ ಇರಲಿದ್ದು, ನಿವಾಸಿಗಳು ಅನಗತ್ಯವಾಗಿ ಆತಂಕಕ್ಕೆ ಒಳಗಾಗದೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ರಾತ್ರಿ ವೇಳೆ ನಿರ್ಜನ ಪ್ರದೇಶದಲ್ಲಿ ಒಂಟಿಯಾಗಿ ಓಡಾಡದಂತೆ ಕೋರಿದ್ದಾರೆ.

ಗಂಧದ ಮರ ಸಾಗಾಟ: ಮೂವರ ಬಂಧನ

ಮೈಸೂರು, ಡಿ.13(ಎಂಕೆ)– ಗಂಧದ ಮರದ ತುಂಡುಗಳನ್ನು ಸಾಗಿಸುತ್ತಿದ್ದ ಮೂವರನ್ನು ಬಂಧಿಸಿರುವ ಅರಣ್ಯ ಸಂಚಾರಿ ದಳದ ಪೊಲೀಸರು, ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಶಿರಸಿ ನಿವಾಸಿ ರಾಘವೇಂದ್ರ ಗುಡಿಗಾರ್, ಶಿವಮೊಗ್ಗ ಸೊರಬದ ಸಚಿನ್ ಎಂ.ಗುಡಿಗಾರ್ ಹಾಗೂ ಮೈಸೂರಿನ ಕೆಸರೆ ನಿವಾಸಿ ನಾರಾಯಣ್ ಬಂಧಿತ ಆರೋಪಿಗಳು. ಅಕ್ರಮವಾಗಿ ಶಿರಸಿಯಿಂದ ಮೈಸೂರಿನ ಮಂಡಿ ಮೊಹಲ್ಲಾಕ್ಕೆ ಗಂಧದ ತುಂಡುಗಳನ್ನು ತರಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಅರಣ್ಯ ಸಂಚಾರಿ ದಳದ ಮೈಸೂರು ವಿಭಾಗ ತಂಡದ ಪೊಲೀಸರು, ಬಂಧಿತರಿಂದ 308 ಕೆ.ಜಿ.ತೂಕದ ಗಂಧದ ಮರದ ತುಂಡುಗಳನ್ನು ವಶಪಡಿಸಿಕೊಂಡಿದ್ದಾರೆ. ಹೆಚ್ಚಿನ ವಿಚಾರಣೆಗೆ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅರಣ್ಯ ಇಲಾಖೆ ಸಿಐಡಿ ಸುಧೀರ್‌ಕುಮಾರ್ ರೆಡ್ಡಿ ಹಾಗೂ ಮಡಿಕೇರಿ ಅರಣ್ಯ ಇಲಾಖೆ ಸಿಐಡಿ ವಿಭಾಗದ ಎಸ್ಪಿ ಎಸ್.ಎಸ್.ಕಾಶಿ ಮಾರ್ಗದರ್ಶನದಲ್ಲಿ ಮೈಸೂರು ಅರಣ್ಯ ಸಂಚಾರ ದಳದ ಎಸ್‌ಐ ಲಕ್ಷ್ಮಿ, ಕೊಳ್ಳೇಗಾಲ ಅರಣ್ಯ ಸಂಚಾರಿ ದಳದ ಎಸ್‌ಐ ವಿಜಯರಾಜು, ಸಾಗರ ಅರಣ್ಯ ಸಂಚಾರಿ ದಳದ ಎಸ್‌ಐ ವಿನಾಯಕ ಹಾಗೂ ಸಕಲೇಶಪುರ ಅರಣ್ಯ ಸಂಚಾರಿ ದಳದ ಪಿಎಸ್‌ಐ ಸ್ವಾಮಿ ಮತ್ತು ಸಿಬ್ಬಂದಿಗಳಾದ ಜುಹೂರ್ ಅಹಮದ್, ಹೇಮರಾಜು, ಕೃಷ್ಣೇಗೌಡ, ಅರುಣ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸುವರ್ಣ ವಿಧಾನಸೌಧವನ್ನು ಪ್ರವಾಸಿ ತಾಣವನ್ನಾಗಿ ಮಾಡಲು ನಿರ್ಧಾರ



ಬೆಳಗಾವಿ: ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣಗೊಂಡು 50 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಬೆಳಗಾವಿಯ ಸುವರ್ಣ ಸೌಧದ ಆವರಣದಲ್ಲಿ ನಡೆದ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಬೆಳಗಾವಿಯ ಸುವರ್ಣ ವಿಧಾನಸೌಧವನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಸರ್ಕಾರ ಮುಂದಾಗಿದೆ ಎಂದರು. ವಾರಾಂತ್ಯದಲ್ಲಿ ಸುವರ್ಣ ವಿಧಾನ ಸೌಧವನ್ನು ಸಾರ್ವಜನಿಕರಿಗೆ ಮುಕ್ತವಾಗಿ ತೆರೆದು ಪ್ರವಾಸಿ ತಾಣವನ್ನಾಗಿ ಮಾಡಲು ಸರ್ಕಾರ ಚಿಂತನೆ ನಡೆಸಿದೆ ಎಂದರು. ಸುವರ್ಣಸೌಧದ ಪ್ರಮುಖ ಸ್ಥಳಗಳಲ್ಲಿ ಫೋಟೊಶೂಟ್ ಸ್ಥಳಗಳನ್ನು ನಿರ್ಮಾಣ ಮಾಡುವ ಮೂಲಕ ಪ್ರವಾಸಿಗರನ್ನು ಆಕರ್ಷಿಸಲಾಗುವುದು. ಈ ಬಗ್ಗೆ ಈಗಾಗಲೇ ವಿಧಾನಸಭೆ ಹಾಗೂ ಪರಿಷತ್ತಿನ ಮಾಜಿ ಸಭಾಪತಿಗಳು ಸಲಹೆಗಳನ್ನು ನೀಡಿದ್ದು, ಸರ್ಕಾರವೂ ಈ ಬಗ್ಗೆ ಚಿಂತನೆ ನಡೆಸಲಿದೆ ಎಂದು ತಿಳಿಸಿದರು.

ವಕೀಲರ ಸಂರಕ್ಷಣೆ ಕಾಯ್ದೆಗೆ ಒತ್ತಾಯಿಸಿ 3ನೇ ದಿನದ ಧರಣಿ



ಮೈಸೂರು, ಡಿ.13(ಜಿಎ)–ವಕೀಲರ ಸಂರಕ್ಷಣೆ ಕಾಯ್ದೆ ಜಾರಿಗೆ ಒತ್ತಾಯಿಸಿ ಮೈಸೂರು ವಕೀಲರ ಸಂಘ ಕಲಾಪದಿಂದ ಹೊರಗೆ ಉಳಿದು ನಗರದ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಮುಂಭಾಗ ಧರಣಿ ಬುಧವಾರ 3ನೇ ದಿನಕ್ಕೆ ತಲುಪಿತು.

ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ ಮಾತನಾಡಿ, ವಕೀಲರ ಸಂರಕ್ಷಣೆ ಕಾಯ್ದೆಯನ್ನು ಈಗಾಗಲೇ ಸದನದಲ್ಲಿ ಮಂಡಿಸಿದ್ದಾರೆ. ಇಂದು ಸದನದಲ್ಲಿ ಈ ಬಗ್ಗೆ ಚರ್ಚೆಯಾಗಲಿದೆ ಎಂಬ ಭರವಸೆ ಇದ್ದು, ತದನಂತರ ವಿಧಾನಪರಿಷತ್‌ನಲ್ಲಿ ಮಂಡನೆಯಾಗಲಿದೆ ಎಂದು ಮುಖ್ಯಮಂತ್ರಿಗಳು, ಗೃಹ ಸಚಿವರು ಭರವಸೆ ನೀಡಿದ್ದಾರೆ. ಇದು ಈಡೇರಿದರೆ ವಕೀಲರ ಮೊದಲ ಗೆಲುವಾಗಲಿದೆ. ನಂತರ ಈ ಕಾಯ್ದೆಗೆ ರಾಜ್ಯಪಾಲರ ಬಳಿ ಅಂಕಿತಕ್ಕೆ ಹೋಗಲಿದೆ. ಎರಡು ಸದನದಲ್ಲಿ ಕಾಯ್ದೆ ಮಂಡನೆಯಾದ ಬಳಿಕ ನಾವು ಧರಣಿಯನ್ನು ಕೈಬಿಡುತ್ತೇವೆ ಎಂದು ತಿಳಿಸಿದರು.

ಧರಣಿಯಲ್ಲಿ ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಎಸ್.ಉಮೇಶ್, ಖಜಾಂಚಿ ಎಚ್.ಎಸ್.ಮಹದೇವಸ್ವಾಮಿ, ಜಂಟಿ ಕಾರ್ಯದರ್ಶಿ ಜಿ.ಎಂ.ನಾಗೇಶ್, ಮಹಿಳಾ ಕಾರ್ಯದರ್ಶಿ ಬಿ.ಎಸ್.ಭಾಗ್ಯಮ್ಮ ಸೇರಿದಂತೆ ಇನ್ನಿತರರು ಭಾಗಿಯಾಗಿದ್ದರು.

ಭಿಕ್ಷಾಟನೆ ವಿರುದ್ಧ ಕಾರ್ಯಾಚರಣೆ: 3 ತಾಯಂದಿರು, 4 ಮಕ್ಕಳ ರಕ್ಷಣೆ

ಮೈಸೂರು, ಡಿ.13(ಎಂಕೆ)– ನಗರದ ವಿವಿಧೆಡೆ ಭಿಕ್ಷಾಟನೆ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ನಗರ ಪೊಲೀಸರು, 3 ತಾಯಂದಿರೊಂದಿಗೆ 4 ಮಕ್ಕಳನ್ನು ರಕ್ಷಣೆ ಮಾಡಿದ್ದಾರೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸಮಾಜ ಕಲ್ಯಾಣ ಇಲಾಖೆ, ಚೈಲ್ಡ್ ಲೈನ್, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಮಾನವ ಕಳ್ಳಸಾಗಾಣೆ ವಿರೋಧಿ ಘಟಕ, ಮಕ್ಕಳ ವಿಶೇಷ ಪೊಲೀಸ್ ಘಟಕದ ವತಿಯಿಂದ ನಗರದ ಕೆ.ಆರ್.ವೃತ್ತ, ನಗರ ಬಸ್ ನಿಲ್ದಾಣ, ದೇವರಾಜ ಅರಸು ರಸ್ತೆ, ಪ್ರಭಾ ಟಾಕೀಸ್, ಗಾಂಧಿವೃತ್ತ, ರಾಮಸ್ವಾಮಿ ಸರ್ಕಲ್, ದಾಸಪ್ಪ ಸರ್ಕಲ್, ಆಯುರ್ವೇದಿಕ್ ಸರ್ಕಲ್, ಗ್ರಾಮಾಂತರ ಬಸ್ ನಿಲ್ದಾಣ, ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ, ಝೂ, ಎಲೆತೋಟ, ನಂಜನಗೂಡು ರಿಂಗ್ ರಸ್ತೆ, ಮಣಿ ಪಾಲ್ ಆಸ್ಪತ್ರೆ, ಕೆ.ಆರ್.ಎಸ್ ರಿಂಗ್ ರಸ್ತೆ, ರೈಲ್ವೆ ನಿಲ್ದಾಣ ಸೇರಿದಂತೆ ಹಲವೆಡೆ ಕಾರ್ಯಾಚರಣೆ ನಡೆಸಿ ಮೂವರು ತಾಯಂದಿರೊಂದಿಗೆ 4 ಮಕ್ಕಳನ್ನು ರಕ್ಷಣೆ ಮಾಡಿ ಸ್ತ್ರೀ ಸೇವಾ ನಿಕೇತನಕ್ಕೆ ದಾಖಲಿಸಲಾಗಿದೆ. ಟ್ರಾಫಿಕ್ ಸಿಗ್ನಲ್, ಪ್ರಮುಖ ವೃತ್ತ ಮತ್ತು ಮುಖ್ಯ ಬೀದಿಗಳಲ್ಲಿ ಮಹಿಳೆಯರು ಮತ್ತು ಮಕ್ಕಳು ಭಿಕ್ಷೆ ಬೇಡುವುದರಿಂದ ಸಾಂಸ್ಕೃತಿಕ ನಗರಿ ಮೈಸೂರಿನ ಘನತೆಗೆ ಧಕ್ಕೆ ಬರುವುದನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ನಿರಂತರವಾಗಿ ನಗರದೆಲ್ಲೆಡೆ ಎರಡು ತಂಡಗಳು ಕಾರ್ಯನಿರ್ವಹಿಸಲಿವೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಬಾನೋತ್ ತಿಳಿಸಿದ್ದಾರೆ.



ಮೈಸೂರಿನ ಬೆಮೆಲ್ ಬಡಾವಣೆಯ ಶ್ರೀ ರಾಜರಾಜೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ದೀಪೋತ್ಸವವನ್ನು ಅಂಕಣಕಾರ ನಂ.ಶ್ರೀಕಂಠ ಕುಮಾರ್ ಉದ್ಘಾಟಿಸಿದರು. ದೇವಸ್ಥಾನ ಸಮಿತಿಯ ಅಧ್ಯಕ್ಷ ಲಿಂಗರಾಜು, ಕಾರ್ಯದರ್ಶಿ ಕೆ.ಮಲ್ಲೇಶಪ್ಪ, ಶ್ರೀ ರಾಜರಾಜೇಶ್ವರಿ ಗೆಳತಿ ಮಂಡಳಿ ಅಧ್ಯಕ್ಷೆ ವಿಜಯಲಕ್ಷ್ಮಿ, ಸುದರ್ಶನ್, ಸುದರ್ಶನ್, ಅಪ್ಪುಗೌಡ, ವಿಜಯಕುಮಾರ್, ಅಂಬಿಕುಮಾರ್ ಬಾಬು, ರಾಮಚಂದ್ರ, ನಾಗಶಯನ, ಸುಬ್ಬಣ್ಣ ಉಪಸ್ಥಿತರಿದ್ದರು.

ಭ್ರಷ್ಟ ಸಂಸದನ ವಜಾಕ್ಕೆ ಒತ್ತಾಯ



ಹೇಮಾ ನಂದೀಶ್

ಮೈಸೂರು, ಡಿ.13–ಒಡಿಶಾ ರಾಜ್ಯಸಭಾ ಸದಸ್ಯ ಕಾಂಗ್ರೆಸ್‌ನ ಧೀರಜ್ ಪ್ರಸಾದ್ ಸಾಹು ಅವರ ಮನೆಯಲ್ಲಿ 300 ಕೋಟಿಗೂ ಅಧಿಕ ನಗದು ಪತ್ತೆಯಾಗಿದ್ದು, ತಕ್ಷಣವೇ ಭ್ರಷ್ಟ ಸಂಸದನನ್ನು ಬಂಧಿಸಬೇಕು ಎಂದು ಬಿಜೆಪಿ ಮಹಿಳಾ ಮುಖಂಡರಾದ ಹೇಮಾ ನಂದೀಶ್ ಆಗ್ರಹಿಸಿದರು.

ಕಾಂಗ್ರೆಸ್ ರಾಜ್ಯಸಭಾ ಸದಸ್ಯ ಧೀರಜ್ ಸಾಹು ಅವರ ಮನೆಯಲ್ಲಿ ಕೋಟ್ಯಾಂತರ ನಗದು ಪತ್ತೆಯಾಗಿದ್ದು, ಕಾಂಗ್ರೆಸ್ ಪ್ರಜಾಪ್ರಭುತ್ವ ವಿರೋಧಿ, ಲೂಟಿಕೋರ, ಲಂಚಕೋರ ಎಂಬುದು ಸಾಬೀತಾಗಿದೆ. ಬೆಂಗಳೂರಿನಲ್ಲಿ ಗುತ್ತಿಗೆದಾರರ ಬಳಿ 40 ಕೋಟಿ, 80 ಕೋಟಿ ಸಿಕ್ಕಿತ್ತು. ಇದೀಗ ಸಂಸದನ ಮನೆಯಲ್ಲಿ 300 ಕೋಟಿ ನಗದು ಸಿಕ್ಕಿದೆ. ಇದರಿಂದ ಕಾಂಗ್ರೆಸ್‌ನ ಸಾಚಾತನ ಬಟಾಬಯಲಾಗಿದೆ ಎಂದು ಆರೋಪಿಸಿದರು. ಸಂಸದ ಧೀರಜ್ ಸಾಹು ಅವರು ರಾಜೀನಾಮೆ ಕೊಡಬೇಕು. ತಕ್ಷಣ ಅವರನ್ನು ಐಟಿ ಅಧಿಕಾರಿಗಳು ಬಂಧಿಸಿ ಕ್ರಮ ತೆಗೆದುಕೊಳ್ಳಬೇಕು. ನೈತಿಕತೆ ಇದ್ದರೆ ಕಾಂಗ್ರೆಸ್ ಪಕ್ಷ ಕ್ರಮ ಕೈಗೊಳ್ಳಬೇಕು ಎಂದರು.

ಕಾನೂನು–ಸುವ್ಯವಸ್ಥೆ ಕಾಪಾಡಲು ಜನರ ಸಹಕಾರ ಅವಶ್ಯ

ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅಭಿಮತ



ಮೈಸೂರು,ಡಿ.13(ಎಂಕೆ)– ಸಮಾಜದಲ್ಲಿ ಕಾನೂನು–ಸುವ್ಯವಸ್ಥೆ ಕಾಪಾಡಲು ಸಾರ್ವಜನಿಕರ ಸಹಕಾರ ಅತ್ಯಂತ ಅವಶ್ಯವಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಹೇಳಿದರು.

ಮೈಸೂರಿನ ಎನ್‌ಆರ್ ಮೊಹಲ್ಲಾ ವ್ಯಾಪ್ತಿಯ ಶಿವಾಜಿ ರಸ್ತೆಯಲ್ಲಿರುವ ಶಿವಾಜಿ ಪಾರ್ಕ್‌ನಲ್ಲಿ ಆಯೋಜಿಸಿದ್ದ 'ಪೊಲೀಸರ ನಡೆ, ಸಾರ್ವಜನಿಕರ ಕಡೆ' ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಸಾರ್ವಜನಿಕರಿರುವ ಕಡೆಗೆ ಪೊಲೀಸರೇ ಬಂದು ಸಮಸ್ಯೆ ಆಲಿಸಿ, ಸಮಸ್ಯೆ ಪರಿಹರಿಸುವ ಕೆಲಸ ಮಾಡಲು ಮುಂದಾಗಿದ್ದೇವೆ. ಇದಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಹೇಳಿದರು.

ಅಪ್ರಾಪ್ತ ಬಾಲಕರು ಬೈಕ್ ವ್ಹೀಲಿಂಗ್ ಮಾಡುವುದು, ಮಾದಕ ವ್ಯಸನಿಗಳಾಗುವುದು ಹೆಚ್ಚಾಗುತ್ತಿದೆ. ಇದರ ಬಗ್ಗೆ ಮೊದಲು ಪೋಷಕರು ಎಚ್ಚರಿಕೆ ವಹಿಸಬೇಕು. ನಿಮ್ಮ ಮಕ್ಕಳು ಯಾವ ಕೆಲಸ ಮಾಡುತ್ತಾರೆ, ಸರಿಯಾಗಿ ಓದುತ್ತಿದ್ದಾರಾ... ಒಳ್ಳೆಯವರ ಸಹವಾಸ ಮಾಡಿದ್ದಾರೆಯೇ ಎಂಬುದೆಲ್ಲದರ ಮೇಲೂ ಗಮನಹರಿಸಬೇಕು. ಮನೆಯಲ್ಲೇ ಮೊದಲು ಸರಿದಾರಿಗೆ ತಂದರೆ ಮುಂದಾಗುವ ಅನಾಹುತಗಳನ್ನು ತಪ್ಪಿಸಬಹುದು. ಬೈಕ್ ವ್ಹೀಲ್, ಮಾದಕ ವಸ್ತುಗಳಿಂದ ಚಿಕ್ಕ ವಯಸ್ಸಿಗೆ ನಿಧನರಾದರೆ ಎಂತಹವರಿಗೂ ನೋವಾಗುತ್ತದೆ. ಆದ್ದರಿಂದ ಎಚ್ಚರಿಕೆ ವಹಿಸಬೇಕು ಎಂದು ತಿಳಿ ಹೇಳಿದರು.

ಮಾನವೀಯತೆ ಇರಲಿ: ಯಾರಿಗಾದರೂ ಅಪಘಾತವಾದರೆ ಗಾಯಗೊಂಡವರನ್ನು ಮೊದಲು ಆಸ್ಪತ್ರೆಗೆ ಕರೆದೊಯ್ಯುವ ಮೂಲಕ ಮಾನವೀಯತೆ ತೋರಿ. ಪೊಲೀಸರು ಕೇಳುತ್ತಾರೆ ಎಂದು ನಮಗ್ಯಾಕೆ ಎಂದು ನಿರ್ಲಕ್ಷ್ಯ ವಹಿಸಿದರೆ ಬದುಕುತ್ತಿದ್ದ ಪ್ರಾಣವನ್ನು ಕಳೆದುಕೊಳ್ಳಬೇಕಾಗುತ್ತದೆ. ಮುಂದೊಂದು ದಿನ ನಮಗೂ ಆ ಸ್ಥಿತಿ ಬಂದರೆ ಯಾರೂ ಸಹಾಯಕ್ಕೆ ಬರಲ್ಲ. ಜನಸ್ನೇಹಿ ಪೊಲೀಸ್ ವ್ಯವಸ್ಥೆಯಿಂದ ಸಾಕಷ್ಟು ಬದಲಾವಣೆಯಾಗಿದ್ದು, ಪೊಲೀಸರಿಗೆ ಭಯಪಡುವ ಬದಲು ಅವರೊಂದಿಗೆ ಉತ್ತಮ ಸ್ಪಂದನೆ ಇದ್ದರೆ ಸಾಕು ಎಂದರು.

ಸಾರ್ವಜನಿಕರ ಬಳಿಗೆ ಪೊಲೀಸರು: ಘಟನೆ ನಡೆದು ಠಾಣೆಗೆ ಬಂದು ದೂರು ಕೊಡುವುದಕ್ಕಿಂತ ಮೊದಲೇ ಸಮಸ್ಯೆ ಬಗೆಹರಿಸಿದರೆ ಕಾನೂನು ಸುವ್ಯವಸ್ಥೆ ಮತ್ತಷ್ಟು ಸುಧಾರಿಸಲಿದೆ. ಆದ್ದರಿಂದ ಮೈಸೂರಿನಲ್ಲಿ ಮೊದಲ ಬಾರಿಗೆ 'ಪೊಲೀಸರ ನಡೆ, ಸಾರ್ವಜನಿಕರ ಕಡೆ' ಕಾರ್ಯಕ್ರಮವನ್ನು ರೂಪಿಸಲಾಗಿದೆ. ವಾರದಲ್ಲಿ ಎರಡ್ಮೂರು ದಿನಕ್ಕೊಮ್ಮೆ ಪೊಲೀಸರ ತಂಡ ನಿಮ್ಮ ಏರಿಯಾಗಳೀಗೆ ಬರಲಿದೆ. ಎಲ್ಲರೂ ಸಹಕರಿಸಿದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಅಲ್ಲದೆ ಪರಸ್ಪರ ಸಹಾಯ ಮಾಡುವ ಗುಣ ಬೆಳೆಸಿಕೊಳ್ಳಿ ಎಂದು ಕೋರಿದರು.

ನಿಮ್ಮ ಸುತ್ತಮುತ್ತ ಏನಾದರೂ ಅಪಘಾತ, ಗಲಾಟೆ, ಗಾಂಜಾ ಮಾರಾಟದಂತಹ ಕೃತ್ಯಗಳು ಕಂಡುಬಂದರೆ ಮಾಹಿತಿ ನೀಡುವುದರಲ್ಲಿ ಯಾವ ತೊಂದರೆಯಿಲ್ಲ. ಆದ್ದರಿಂದ ಪೊಲೀಸರೊಂದಿಗೆ ಜನರು ಕೈಜೋಡಿಸಿದರಷ್ಟೇ ಆರೋಗ್ಯ ಸಮಾಜ ನಿರ್ಮಾಣ ಸಾಧ್ಯ ಎಂದರು. ಎನ್.ಆರ್. ವಿಭಾಗದ ಎಸಿಪಿ ಅಶ್ವಥ್‌ನಾರಾಯಣ್, ಸಂಚಾರ ಪರಶುರಾಮಪ್ಪ, ನರಸಿಂಹರಾಜ ಠಾಣೆ ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತ್ ತಳವಾರ್, ಪಿಎಸ್‌ಐ ರಾಜು, ಚಂದ್ರಶೇಖರ್ ಇಟ್ಟಿಗೆ, ಗಣೇಶ್, ಧನಲಕ್ಷ್ಮಿ, ಸಿಬ್ಬಂದಿ ಇದ್ದರು.

ವಕೀಲರ ರಕ್ಷಣಾ ವಿಧೇಯಕ ಅಂಗೀಕಾರಕ್ಕೆ ಆಗ್ರಹಿಸಿ ಕೆ.ಆರ್.ಪೇಟೆಯಲ್ಲಿ ವಕೀಲರಿಂದ ಪ್ರತಿಭಟನೆ



ಕೆಆರ್.ಪೇಟೆ, ಡಿ.13– ವಕೀಲರ ಮೇಲೆ ಹಲ್ಲೆ ಅಥವಾ ಹಿಂಸಾಚಾರ ನಡೆಸುವವರಿಗೆ ಶಿಕ್ಷೆ ನೀಡುವ ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಮಸೂದೆಯನ್ನು ಕೂಡಲೇ ಅಂಗೀಕರಿಸ ಬೇಕು. ಆರೋಪಿಗಳಿಗೆ 6 ತಿಂಗಳು ಜೈಲು ಮತ್ತು 2 ಲಕ್ಷ ದಂಡ ವಿಧಿಸಬೇಕು. ಜಾಮೀನು ರಹಿತ ಪ್ರಕರಣ ದಾಖಲಿಸುವ ಕಾನೂನು ಜಾರಿಗೆ ತರಬೇಕೆಂದು ಒತ್ತಾಯಿಸಿ ಕೆ.ಆರ್.ಪೇಟೆ ಪಟ್ಟಣದಲ್ಲಿ ನೂರಾರು ವಕೀಲರು ನ್ಯಾಯಾಲಯದ ಆವರಣ ದಲ್ಲಿ ಪ್ರತಿಭಟನೆ ನಡೆಸಿದರು.

ನ್ಯಾಯಾಲಯಗಳ ಕಲಾಪದಿಂದ ಹೊರಗುಳಿದು ಪ್ರತಿಭಟನೆ ನಡೆಸಿದ ವಕೀಲರು ರಾಜ್ಯ ಸರ್ಕಾರ ವಕೀಲರ ರಕ್ಷಾ ಕಾಯಿದೆಗೆ ಅನುಮೋದನೆ ನೀಡುವವರೆಗೂ ತಮ್ಮ ಹೋರಾಟ ಮುಂದುವರಿಸುವುದಾಗಿ ತಿಳಿಸಿದ ರಲ್ಲದೇ, ರಾಜ್ಯ ಸರ್ಕಾರ ಕೇವಲ ವಕೀಲರ ರಕ್ಷಣಾ ಕಾಯಿದೆಯನ್ನು ಪ್ರಸ್ತಾವನೆ ಮಾಡಿ ಸುಮ್ಮನಾಗಿದೆ. ಇದು ಸರಿಯಲ್ಲ.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಜಿ.ಆರ್.ಅನಂತರಾಮಯ್ಯ, ಕೆ.ಎನ್. ನಾಗರಾಜು, ಬಿ.ಗಣೇಶ್, ಹೆಚ್.ರವಿ ಅವರು ಮಾತನಾಡಿ, ರಾಜ್ಯದಲ್ಲಿ ವಕೀಲರ ಮೇಲೆ ನಿರಂತರವಾಗಿ ಹಲ್ಲೆಗಳು ನಡೆಯು ತ್ತಿದ್ದು, ವಕೀಲರಿಗೆ ರಕ್ಷಣೆ ಇಲ್ಲದಂತಾಗಿದೆ. ಚಿಕ್ಕಮಗಳೂರಿನಲ್ಲಿ ವಕೀಲರೊಬ್ಬರ ಮೇಲೆ ಪೊಲೀಸರು ಅಮಾನುಷವಾಗಿ ಹಲ್ಲೆ ನಡೆಸಿ ಅವಮಾನಿಸಿದ್ದಾರೆ ಹಾಗಾಗಿ ಪೊಲೀಸರನ್ನು ಸೇವೆಯಿಂದಲೇ ವಜಾ ಮಾಡಬೇಕು ಹಾಗೂ ಗುಲ್ಬರ್ಗಾದಲ್ಲಿ ವಕೀಲರೊಬ್ಬರನ್ನು ಬರ್ಬರವಾಗಿ ಹತ್ಯೆ ಮಾಡಿದ ಆರೋಪಿಗಳ ವಿರುದ್ಧ ಜೀವಾವಧಿ ಶಿಕ್ಷೆಗೆ ಗುರಿಪಡಿಸಬೇಕು. ವಕೀಲರ ಮೇಲೆ ಹಲ್ಲೆ ನಡೆಸಿದ ಆರೋಪಿಗಳಿಗೆ ಜಾಮೀನು ನೀಡಬಾರದು. ಕನಿಷ್ಠ 6 ತಿಂಗಳು ಜೈಲು ಮತ್ತು 2 ಲಕ್ಷ ದಂಡ ವಿಧಿಸುವ ಕಾನೂನು ಜಾರಿಗೆ ತರಬೇಕು ಎಂದು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡಿದರು.

ಪ್ರತಿಭಟನೆಯಲ್ಲಿ ತಾಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷ ಜಿ.ಆರ್.ಅನಂತ ರಾಮಯ್ಯ, ಕೆ.ಎನ್.ನಾಗರಾಜು, ಹೆಚ್. ರವಿ, ಕೆ.ಆರ್.ಮಹೇಶ್, ಕೆ.ಎನ್.ಪಾಂಡು, ವಳಗೆರೆಮೆಣಸ ಸತೀಶ್, ಎಂ.ಸಿ.ಪ್ರವೀಣ್, ಕೆರೆಮೇಗಳಕೊಪ್ಪಲು ಶಂಕರೇಗೌಡ, ಆರ್.ಎಂ.ದೇವಾನಂದ್, ಎಸ್.ಸ್ವಾಮಿ, ರಾಣಿ, ವಾಣಿ, ಬಿ.ಸಿ.ಹರ್ಷ, ಅರುಣ್ ಕುಮಾರ್, ಜಗದೀಶ್, ಶ್ರೀನಿವಾಸ್, ಅನ್ವೇಶ್, ಎಸ್.ಜೆ.ಮಂಜೇಗೌಡ ಮತ್ತಿತರರು ಸೇರಿದಂತೆ ನೂರಾರು ವಕೀಲರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಶತದಿನ ಪೂರೈಸಿದ ಕಾವೇರಿ ಹೋರಾಟ



ಮಂಡ್ಯ,ಡಿ.13– ತಮಿಳುನಾಡಿಗೆ ನೀರು ಹರಿಸಲು ಪದೇ ಪದೇ ಆದೇಶ ಮಾಡುತ್ತಿರುವ ಕಾವೇರಿ ನದಿ ನೀರು ನಿಯಂತ್ರಣ ಸಮಿತಿ, ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯದ ಹಿತ ಕಾಪಾಡದ ಕೇಂದ್ರ-ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯು ನಡೆಸುತ್ತಿರುವ ಹೋರಾಟ ಶತದಿನ ಪೂರೈಸಿದೆ.

ನಗರದ ಸರ್‌ಎಂವಿ ಪ್ರತಿಮೆ ಎದುರು ನಿರಂತರ ಧರಣಿ ಶತದಿನಕ್ಕೆ ಕಾಲಿಟ್ಟಿದ್ದು, 100ನೇ ದಿನದ ಹೋರಾಟದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ, ಕೇಂದ್ರ-ರಾಜ್ಯ ಸರ್ಕಾರ, ಕಾವೇರಿ ನದಿ ನೀರು ಪ್ರಾಧಿಕಾರ, ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ವಿರುದ್ಧ ಪ್ರತಿಭಟನಾಕಾರರು ಧಿಕ್ಕಾರದ ಘೋಷಣೆ ಕೂಗಿದರು.

ಜೊತೆಗೆ ಕಳೆದ 19 ದಿನಗಳಿಂದ ಕೆಲ ಹೋರಾಟಗಾರರು ಸರದಿ ಉಪವಾಸ ನಡೆಸುತ್ತಿದ್ದು, ಮೆಣಸಗೆರೆಯ ಅರ್ಚಕ ಶಿವಲಿಂಗಪ್ಪ, ಕನ್ನಡ ಸೇನೆ ಪಾಂಡವಪುರ ತಾಲೂಕು ಅಧ್ಯಕ್ಷ ದೇವು, ಕಲ್ಲಹಳ್ಳಿ ಶಂಕರೇಗೌಡ, ಆಜಾದ್‌ನಗರದ ಫಯಾಜ್, ಪಣಕನಹಳ್ಳಿ ಶಿವರಾಮು ಉಪವಾಸ ನಿರತರಾಗಿದ್ದರು.

ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ ಆಶ್ರಯ ದಲ್ಲಿ ರೈತ, ದಲಿತ, ಪ್ರಗತಿಪರ, ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಹಾಗೂ ಅತಿಥಿ ಉಪನ್ಯಾಸಕರು ಬೆಂಗಳೂರು– ಮೈಸೂರು ಹೆದ್ದಾರಿ ತಡೆ ನಡೆಸಿದರು.

ಕಾವೇರಿ ನದಿ ನೀರು ರಕ್ಷಣೆಗಾಗಿ ಕಳೆದ ನೂರು ದಿನದಿಂದ ಹೋರಾಟ ಮಾಡುತ್ತಾ ಬಂದಿದ್ದರೂ ಸಹ ರಾಜ್ಯ ಸರ್ಕಾರ ತಮಿಳುನಾಡಿಗೆ ನಿರಂತರವಾಗಿ ಕದ್ದು ಮುಚ್ಚಿ ನೀರು ಹರಿಸುತ್ತಿದೆ. ಅಷ್ಟೇ ಅಲ್ಲದೆ ವಿಧಾನಮಂಡಲದ ಅಧಿವೇಶನದಲ್ಲಿ ಕಾವೇರಿ ವಿವಾದ ಕುರಿತು ಚರ್ಚಿಸದೆ ಉದಾ ಸೀನತೆ ತೋರಿ ಕಾಲಾಹರಣ ಮಾಡುತ್ತಿದೆ ಎಂದು ಆಕ್ರೋಶಿಸಿದರು. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ನಡುವೆ ಜಲ ವಿವಾದ ಉಂಟಾದಾಗ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಡೆಸಲು ಮುಂದಾಗದ ಪ್ರಧಾನಿ ನರೇಂದ್ರ ಮೋದಿ, ಸಂಕಷ್ಟ ಸನ್ನಿವೇಶದಲ್ಲೂ ಹಠ ಮಾರಿತನದಿಂದ ನೀರು ಹರಿಸಿಕೊಳ್ಳು ತ್ತಿರುವ ತಮಿಳುನಾಡು, ರಾಷ್ಟ್ರೀಯ ಜಲ ನೀತಿ ರೂಪಿಸದ ಕೇಂದ್ರ ಸರ್ಕಾರದ ವಿರುದ್ಧ ಹೋರಾಟಗಾರರು ಕಿಡಿಕಾರಿದರು.

ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಮಾತನಾಡಿ, ಚುನಾಯಿತ ಜನಪ್ರತಿನಿಧಿಗಳ ಮೇಲೆ ಮತದಾರರ ಋಣ ಇದೆ. ಆದರೆ ಕಾವೇರಿ ವಿಚಾರ ದಲ್ಲಿ ಜನಪ್ರತಿನಿಧಿಗಳು ನಿರ್ಲಕ್ಷ್ಯ, ಉದಾ ಸೀನತೆ ತೋರಿದ್ದಾರೆ, ಜ್ವಲಂತ ಸಮಸ್ಯೆ ಯನ್ನು ಗಂಭೀರವಾಗಿ ಪರಿಗಣಿಸದೆ ರಾಜ್ಯ ಸರ್ಕಾರ ಹೊಣೆಗಾರಿಕೆ ನಿರ್ವಹಿಸದೆ ಜಾಣ ತನ ಪ್ರದರ್ಶಿಸುತ್ತಿದೆ. ಕಾವೇರಿ ಹೋರಾಟ ಗಾರರ ಕಿವಿಗೆ ಹೂವು ಮುಡಿಸಲು ಸಾಧ್ಯವಿಲ್ಲ ಸದನದಲ್ಲಿ ಕಾವೇರಿ ವಿಚಾರ ಚರ್ಚಿಸದೆ ಇದೂವರೆಗೆ ಕಾಲಹರಣ ಮಾಡಿದ್ದು ಸಾಕು. ಇನ್ನು ಎರಡು ದಿನ ಕಾಲಾವಕಾಶ ವಿದ್ದು ಚರ್ಚಿಸಿ, ದೃಢ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ಕಾವೇರಿ ಹೋರಾಟ ಐತಿಹಾಸಿಕ ದಾಖಲೆ ಮಾಡಿದೆ. ಶತಮಾನದಲ್ಲಿಯೇ ನೂರು ದಿನ ಪೂರೈಸಿ ರುವ ಹೋರಾಟ ಇತಿಹಾಸದ ಪುಟ ಸೇರಿದೆ. ಇಂತಹ ಹೋರಾಟಕ್ಕೆ ಕೇಂದ್ರ, ರಾಜ್ಯ ಸರ್ಕಾರದ ನಿರ್ಲಕ್ಷ್ಯತೆ, ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಹಾಗೂ ಪ್ರಾಧಿ ಕಾರದ ಪಕ್ಷಪಾತ ಕಾರಣ ಎಂದರು.

ಮೇಕೆದಾಟು ಯೋಜನೆ ಅನುಷ್ಠಾನ ಗೊಳಿಸಿ ಶಾಶ್ವತ ಪರಿಹಾರಕ್ಕೆ ಮುಂದಾಗ ಬೇಕು, ಸಂಕಷ್ಟ ಸನ್ನಿವೇಶದಲ್ಲಿ ನೀರು ಹಂಚಿಕೆಗೆ ಅನುಕೂಲವಾಗಲು ಸಂಕಷ್ಟ ಸೂತ್ರ ರೂಪಿಸಬೇಕು ಎಂದು ಒತ್ತಾಯಿಸಿದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ಬೋರಯ್ಯ, ಮಾಜಿ ಶಾಸಕ ಜಿ.ಬಿ.ಶಿವ ಕುಮಾರ್, ರೈತ ಸಂಘದ ಇಂಡುವಾಳು ಚಂದ್ರಶೇಖರ್, ಸಾದೊಳಲು ಸ್ವಾಮಿ, ಕೀಲಾರ ಕೃಷ್ಣ, ಮೈಸುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ, ಕನ್ನಡ ಸೇನೆ ಮಂಜುನಾಥ್, ನಗರಸಭೆ ಮಾಜಿ ಅಧ್ಯಕ್ಷೆ ಅಂಬುಜಮ್ಮ, ಹೋರಾಟಗಾರರಾದ ತೂಬಿನಕೆರೆ ಲಿಂಗರಾಜು, ಮಹಾಂತೇಶಪ್ಪ, ಎಸ್.ನಾರಾಯಣ್, ದಸಂಸ ಕೃಷ್ಣ, ಕೆಂಪೇಗೌಡ, ಹುರುಗಲವಾಡಿ ರಾಮಯ್ಯ ಭಾಗವಹಿಸಿದ್ದರು.

ಅತಿಥಿ ಉಪನ್ಯಾಸಕರಿಗೆ ನ್ಯಾಯ ಸಿಗುವವರೆಗೆ ಹೋರಾಟ ನಿರಂತರ

ಸಂಘದ ರಾಜ್ಯಾಧ್ಯಕ್ಷ ಡಾ. ಹನುಮಂತಗೌಡ ಕಲಮನಿ ಘೋಷಣೆ



ಮಂಡ್ಯ, ಡಿ.13– ಅತಿಥಿ ಉಪನ್ಯಾಸಕರಿಗೆ ನ್ಯಾಯ ಸಿಗುವವರೆಗೂ ಹೋರಾಟ ನಿರಂತರವಾಗಿ ನಡೆಯಲಿದೆ ಎಂದು ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಕಲಮನಿ ತಿಳಿಸಿದರು.

ಬುಧವಾರ ನಗರದ ಸರ್‌ಎಂವಿ ಪ್ರತಿಮೆ ಎದುರು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿ ಸುತ್ತಿರುವ ಅತಿಥಿ ಉಪನ್ಯಾಸಕರ ಧರಣಿ ಸ್ಥಳದಲ್ಲಿ ಮಾತನಾಡಿದ ಅವರು, ರಾಜ್ಯದ ಎಲ್ಲೆಡೆ ಸೇವೆ ಖಾಯಮ್ಮಾತಿಗೆ ಆಗ್ರಹಿಸಿ ಅತಿಥಿ ಉಪನ್ಯಾಸಕರು ಪ್ರತಿಭಟನೆ ನಡೆಸಿ, ಆಳುವ ಸರ್ಕಾರದ ಗಮನ ಸೆಳೆದಿದ್ದಾರೆ, ಉನ್ನತ ಶಿಕ್ಷಣ, ಕಾನೂನು ಸಚಿವರು ನಮ್ಮಗಳ ಬೇಡಿಕೆಯನ್ನು ಆಲಿಸಿದ್ದು ನ್ಯಾಯ ದೊರಕಿಸಿಕೊಡುವ ಭರವಸೆ ನೀಡಿದ್ದಾರೆ. ಅತಿಥಿ ಉಪನ್ಯಾಸಕರ ಸೇವೆ ಕಾಯಂ ಮಾಡಲು ಕಾನೂನು ತೊಡಕು ಎಂಬುದು ನೆಪ ಮಾತ್ರ, ಶಾಸಕರು ಸಚಿವರ ಸಂಬಳ ಹೆಚ್ಚಳ ಮಾಡಿಕೊಳ್ಳಲು ಹಾಗೂ ದೊಡ್ಡ ದೊಡ್ಡ ಕಾಮಗಾರಿ ಮಾಡಲು ಯಾವುದೇ ತೊಡಕು ಇಲ್ಲದಿದ್ದ ಮೇಲೆ, ಇಲ್ಲೇಕೆ ತೊಡಕು ಕಾಣಲಿದೆ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ, ಸರ್ಕಾರದ ಮೇಲೆ ನಂಬಿಕೆ ಇದೆ. ಈಗಾಗಲೇ ಸಂಬಂಧ ಪಟ್ಟ ಸಚಿವರು ಅಧಿಕಾರಿಗಳೊಂದಿಗೆ ಸಮಾಲೋಚಿಸಿದ್ದಾರೆ, ಇಲಾಖೆಯ ಹಿರಿಯ ಅಧಿಕಾರಿಗಳು ಪ್ರಾಚಾರ್ಯರ ಜೊತೆ ಮಾತುಕತೆ ನಡೆಸಿದ್ದಾರೆ, ಕಾದು ನೋಡು ತ್ತೇವೆ, ಸರ್ಕಾರ ನ್ಯಾಯ ದೊರಕಿಸಿಕೊಡದಿದ್ದರೆ ವಿಭಿನ್ನ ರೀತಿಯಲ್ಲಿ ಹೋರಾಟ ಮುಂದುವರೆಯಲಿದೆ ಎಂದರು.

ಅತಿಥಿ ಉಪನ್ಯಾಸಕರು ತರಗತಿ ಬಹಿಷ್ಕರಿಸಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ನೋವಿದೆ, ಮುಂದಿನ ದಿನಗಳಲ್ಲಿ ಹೆಚ್ಚುವರಿ ತರಗತಿ ಮಾಡುವ ಮೂಲಕ ಸರಿದೂಗಿಸಲಾಗುವುದು, ವಿದ್ಯಾರ್ಥಿ ಗಳಿಗೆ ಆಗುತ್ತಿರುವ ತೊಂದರೆಗೆ ಅತಿಥಿ ಉಪನ್ಯಾಸಕರು ಹೊಣೆಯಲ್ಲ. ಸೇವಾ ಭದ್ರತೆ ಇಲ್ಲದೆ ಅತಿಥಿ ಉಪನ್ಯಾಸಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ಉಪನ್ಯಾಸಕರ ಕುಟುಂಬಕ್ಕೆ ಬಿಡಿಗಾಸು ಸಿಕ್ಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಧರಣಿಯಲ್ಲಿ ಭಾಗಿಯಾಗಿ ಬೆಂಬಲ ಸೂಚಿಸಿದರು. ಸಂಘದ ಗೌರವಾಧ್ಯಕ್ಷ ರಮೇಶ್, ಅಧ್ಯಕ್ಷ ಕೆ.ಪರಮೇಶ್, ಉಪಾಧ್ಯಕ್ಷ ಡಾ.ಎಂ.ಎಸ್.ಚಲುವರಾಜು, ಸಂಘದ ಡಾ.ಗಣೇಶ್, ನಂದಿನಿ ಬಿ.ಆರ್.ಉಮಾಕಾಂತ್, ನಾಗರತ್ನ, ಭಾರ್ಗವಿ ಧರಣಿಯಲ್ಲಿ ಭಾಗವಹಿಸಿದ್ದರು.

ಅನುಮಾನದ ಭೂತಕ್ಕೆ ಪತಿಯಿಂದಲೇ ಪತ್ನಿಯ ಹತ್ಯೆ



ಮಳವಳ್ಳಿ, ಡಿ.13– ಅನುಮಾನದ ಭೂತಕ್ಕೆ ಪತಿಯೇ ಪತ್ನಿಯನ್ನು ಕಬ್ಬಿಣದ ರಾಡ್‌ನಿಂದ ಹೊಡೆದು ಹತ್ಯೆ ಮಾಡಿರುವ ಘಟನೆ ತಾಲೂಕಿನ ಕಿರುಗಾವಲು ಹೋಬಳಿಯ ದೇಶಹಳ್ಳಿ ಗ್ರಾಮದಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ಘಟನೆಯಲ್ಲಿ ಗ್ರಾಮದ ಮಹದೇವ(38) ಎಂಬಾತನ ಪತ್ನಿ ಮಧುಶ್ರೀ (32) ಸಾವನ್ನಪ್ಪಿದ್ದು, ಹತ್ಯೆ ಮಾಡಿದ ಬಳಿಕ ಕಿರುಗಾವಲು ಪೊಲೀಸ್ ಠಾಣೆಗೆ ಮಹದೇವ ತನ್ನ 6 ವರ್ಷದ ಪುತ್ರಿಯೊಂದಿಗೆ ಬಂದು ಶರಣಾಗಿದ್ದಾನೆ. ಕೊಲೆಯಾದ ಮಧುಶ್ರೀ ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದು, ಮಹದೇವ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಪತ್ನಿ ಮೇಲೆ ಅನುಮಾನದಿಂದ ಈತ ಪದೇ ಪದೇ ಜಗಳವಾಡುತ್ತಿದ್ದ ಎನ್ನಲಾಗಿದ್ದು, ಗಂಡನ ಅನುಮಾನದ ಭೂತಕ್ಕೆ ಕೆಲ ತಿಂಗಳ ಹಿಂದೆ ಮಧುಶ್ರೀ ತವರು ಮನೆ ಸೇರಿದ್ದರು. ಎರಡು ತಿಂಗಳ ಹಿಂದೆಯಷ್ಟೆ ರಾಜೀ ಪಂಚಾಯತಿ ನಡೆಸಿ ವಾಪಸ್ಸು ಗಂಡನ ಮನೆಗೆ ಕುಟುಂಬಸ್ಥರು ಕಳುಹಿಸಿದ್ದರು.

ನಿನ್ನೆ ಮೊಬೈಲ್ ರೀಚಾರ್ಜ್ ವಿಚಾರವಾಗಿ ಮತ್ತೆ ದಂಪತಿ ನಡುವೆ ಜಗಳ ಆರಂಭವಾಗಿ, ಜಗಳ ವಿಕೋಪಕ್ಕೆ ತಿರುಗಿ ಕಬ್ಬಿಣದ ರಾಡ್‌ನಿಂದ ಪತ್ನಿ ಮೇಲೆ ಮಹದೇವ ಹಲ್ಲೆ ಮಾಡಿದ್ದಾನೆ. ಇದರಿಂದ ತೀವ್ರ ರಕ್ತಸ್ರಾವವಾಗಿ ಮಧುಶ್ರೀ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ.

ಮಹದೇವ ಹಾಗೂ ಮಧುಶ್ರೀ ದಂಪತಿಗೆ 12 ಮತ್ತು 6 ವರ್ಷದ ಪುತ್ರಿಯರಿದ್ದಾರೆ. ಘಟನೆ ಸಂಬಂಧ ಶರಣಾಗಿರುವ ಮಹದೇವನನ್ನು ವಿಚಾರಣೆಗೊಳಪಡಿಸಿರುವ ಕಿರುಗಾವಲು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಡಿ.19, ಅಂಚೆ ಅದಾಲತ್

ಮಂಡ್ಯ, ಡಿ.13– ಮಂಡ್ಯ ಅಂಚೆ ಅಧೀಕ್ಷಕರ ಕಚೇರಿ ವತಿಯಿಂದ ಡಿ.19 ರಂದು ಬೆಳಗ್ಗೆ 3 ಗಂಟೆಗೆ ಮಂಡ್ಯ ವಿಭಾಗ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಅಂಚೆ ಅದಾಲತ್ ಆಯೋಜಿಸಲಾಗಿದೆ. ಸಾರ್ವಜನಿಕರು ಅಂಚೆ ಸೇವೆಗಳ ಬಗ್ಗೆ ಕುಂದು ಕೊರತೆಗಳಿದ್ದರೆ ಡಿ.15ರೊಳಗೆ ಅಂಚೆ ಅಧೀಕ್ಷಕರ ಕಚೇರಿಗೆ ಲಿಖಿತ ರೂಪದಲ್ಲಿ ತಲುಪಿಸುವಂತೆ ತಿಳಿಸಲಾಗಿದೆ. ಇಚ್ಛೆಯುಳ್ಳ ಸಾರ್ವಜನಿಕರು ಅಂಚೆ ಅದಾಲತ್‌ನಲ್ಲಿ ಭಾಗವಹಿಸಬಹುದು.

ಲೋಕಾಯುಕ್ತ ಬಲೆಗೆ ಬಿದ್ದ ಸೆಸ್ಕ್ ಸಹಾಯಕ ಇಂಜಿನಿಯರ್

ಹಲಗೂರು, ಡಿ.13– ಕೃಷಿ ಪಂಪ್‌ಸೆಟ್‌ಗಾಗಿ ವಿದ್ಯುತ್ ಪರಿವರ್ತಕ ಅಳವಡಿಕೆಗೆ ರೈತನೊಬ್ಬರಿಂದ ಲಂಚ ಸ್ವೀಕರಿಸುತ್ತಿದ್ದ ಸೆಸ್ಕ್ ಸಹಾಯಕ ಇಂಜಿನಿಯರ್ ಹಲಗೂರಿನಲ್ಲಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ

ಮಳವಳ್ಳಿ ತಾಲೂಕಿನ ಹಲಗೂರು ಹೋಬಳಿಯ ಸಹಾಯಕ ಎಂಜಿನಿಯರ್ ಚಂದ್ರಶೇಖರ್ ಲೋಕಾಯುಕ್ತಕ್ಕೆ ಸಿಕ್ಕಿಬಿದ್ದಿದ್ದಾರೆ. ಲಿಂಗಪಟ್ಟಣ ಗ್ರಾಮದ ಪುಟ್ಟಸ್ವಾಮಿ ಅವರ ಜಮೀನಿಗೆ ವಿದ್ಯುತ್ ಪರಿವರ್ತಕ ಅಳವಡಿಸಲು ಕೋರಿದ್ದು, ಈ ವೇಳೆ ಚಂದ್ರಶೇಖರ್ ಹಣಕ್ಕೆ ಬೇಡಿಕೆ ಇಟ್ಟಿದ್ದರು. ರೈತ ಪುಟ್ಟಸ್ವಾಮಿ ಲೋಕಾಯುಕ್ತ ಕಚೇರಿಗೆ ದೂರು ನೀಡಿದ್ದರು. ಲೋಕಾಯುಕ್ತ ಅಧಿಕಾರಿ ಬ್ಯಾಟರಾಯಗೌಡ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದು ರೈತನಿಂದ 4500 ಹಣ ಸ್ವೀಕರಿಸುತ್ತಿದ್ದ ವೇಳೆ ಬಲೆಗೆ ಬಿದ್ದಿದ್ದು, ಲೋಕಾಯುಕ್ತ ಪೊಲೀಸರು ಸಹಾಯಕ ಇಂಜಿನಿಯರ್ ಚಂದ್ರಶೇಖರ್‌ನನ್ನು ಬಂಧಿಸಿದ್ದಾರೆ.

ಪ್ರತ್ಯೇಕ ಅಪಘಾತ: ಇಬ್ಬರು ಸಾವು, ಐವರು ಗಂಭೀರ



ರಾಮನಗರ, ಡಿ.13– ಜಿಲ್ಲೆಯ ಕನಕಪುರ ಹಾಗೂ ಚನ್ನಪಟ್ಟಣದಲ್ಲಿ ನಡೆದ ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಪ್ರೇಮಿಗಳು ಸಾವನ್ನಪ್ಪಿ, ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಸಂಭವಿಸಿದ ಭೀಕರ ಅಪಘಾತದಲ್ಲಿ ಐದು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಪ್ರೇಮಿಗಳ ದುರ್ಮರಣ: ಮಿನಿಬಸ್‌ಗೆ ಕಾರು ಡಿಕ್ಕಿಯಾದ ಪರಿಣಾಮ ಪ್ರೇಮಿಗಳಿಬ್ಬರು ಸಾವನ್ನಪ್ಪಿರುವ ಘಟನೆ ಕನಕಪುರ ತಾಲೂಕಿನ ಕೆಬ್ಬಹಳ್ಳಿ ಗ್ರಾಮದ ಬಳಿ ಬುಧವಾರ ಸಂಭವಿಸಿದೆ.


ಘಟನೆಯಲ್ಲಿ ದೀಪಕ್(25) ಮತ್ತು ಶೈಲಾ (22) ಸಾವನ್ನಪ್ಪಿದ ಪ್ರೇಮಿಗಳಾಗಿದ್ದು, ಇವರಿಬ್ಬರು ಕನಕಪುರದಿಂದ ದೀಪಕ್ ಸ್ವಗ್ರಾಮ ಕೆಬ್ಬಹಳ್ಳಿಗೆ ಬರುತ್ತಿದ್ದರು. ಈ ವೇಳೆ ಮುಂದೆ ಹೋಗುತ್ತಿದ್ದ ವಾಹನವನ್ನು ಓವರ್‌ಟೇಕ್ ಮಾಡುವ ವೇಳೆ ಮಿನಿಬಸ್‌ಗೆ ಕಾರು ಡಿಕ್ಕಿ ಹೊಡೆದಿದೆ.

ಡಿಕ್ಕಿ ರಭಸಕ್ಕೆ ಕಾರು ಸಂಪೂರ್ಣವಾಗಿ ಜಖಂಗೊಂಡ ಪರಿಣಾಮ ಕಾರಿನಲ್ಲಿದ್ದ ಶೈಲಾ ಸ್ಥಳದಲ್ಲೇ ಸಾವನ್ನಪ್ಪಿದ್ದು, ಗಂಭೀರ ಗಾಯಗೊಂಡಿದ್ದ ದೀಪಕ್ ಚಿಕಿತ್ಸೆ ಫಲಿಸದೇ ಕನಕಪುರ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕೋಡಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಕ್ಸ್‌ಪ್ರೆಸ್‌ವೇನಲ್ಲಿ ಭೀಕರ ಅಪಘಾತ: ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಕಾರಿನ ಟೈರ್ ಸ್ಫೋಟಗೊಂಡು ಡಿವೈಡರ್‌ಗೆ ಡಿಕ್ಕಿ ಹೊಡೆದು ಮಗುಚಿ ಬಿದ್ದ ಪರಿಣಾಮ ಐವರು ಪ್ರಯಾಣಿಕರು ಗಾಯಗೊಂಡಿರುವ ಘಟನೆ ಚನ್ನಪಟ್ಟಣ ತಾಲೂಕಿನ ಭೈರಾಪಟ್ಟಣ ಬಳಿ ಬುಧವಾರ ಸಂಭವಿಸಿದೆ.

ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ಕಾರಿನ ಟೈರ್ ಏಕಾಏಕಿ ಸ್ಫೋಟಗೊಂಡು ಅವಘಡ ಸಂಭವಿಸಿದ್ದು, ಕಾರಿನಲ್ಲಿದ್ದ ಐವರಿಗೆ ಗಂಭೀರ ಸ್ವರೂಪದ ಗಾಯವಾಗಿದೆ. ಸ್ಥಳಕ್ಕೆ ಚನ್ನಪಟ್ಟಣ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಗಾಯಗೊಂಡವರನ್ನು ಚನ್ನಪಟ್ಟಣ ತಾಲೂಕು ಆಸ್ಪತ್ರೆಗೆ ರವಾನಿಸಲಾಗಿದ್ದು, ಕೆಲವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಚನ್ನಪಟ್ಟಣ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ

ದೇವರ ಕೆಂಪೇಗೌಡ ನಿಧನ



ನಾಗಮಂಗಲ, ಡಿ.13– ತಾಲೂಕಿನಾದ್ಯಂತ ದೇವರ ಕೆಂಪೇಗೌಡ ಎಂದೇ ಹೆಸರುವಾಸಿಯಾಗಿದ್ದ ಕೆಂಪೇಗೌಡ ಇಂದು ಮಧ್ಯಾಹ್ನ ನಿಧನರಾದರು. ಅವರಿಗೆ 58 ವರ್ಷ ವಯಸ್ಸಾಗಿತ್ತು. ಕೆಂಪೇಗೌಡರು ಇಲ್ಲಿನ ದೇವಸ್ಥಾನಗಳಲ್ಲಿ ನಡೆಯುವ ರಥೋತ್ಸವ, ಮಾರಮ್ಮನ ಹಬ್ಬ, ಹನುಮ ಜಯಂತಿ ಮುಂತಾದ ಕಾರ್ಯಕ್ರಮಗಳಲ್ಲಿ ಎಡೆಬಿಡದೇ ಭಾಗವಹಿಸುತ್ತಿದ್ದು, ಬಂದ ಭಕ್ತಾದಿಗಳಿಗೆ ಅನ್ನ ದಾಸೋಹವನ್ನು ಏರ್ಪಡಿಸುತ್ತಾ ದೇವರ ಕೆಂಪೇಗೌಡ ಎಂದೇ ಪ್ರಖ್ಯಾತರಾಗಿದ್ದರು. ಮೃತರು ಪತ್ನಿ ಮತ್ತು ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯ ಸ್ವಾಮಿ, ಮಾಜಿ ಶಾಸಕ ಸುರೇಶ್‌ಗೌಡ ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ. ಸಾವಿರಾರು ಜನ ಕೆಂಪೇಗೌಡರ ಶವದ ಅಂತಿಮ ದರ್ಶನ ಪಡೆದರು.

ಸಂಸತ್ ಭವನದ ಮೇಲಿನ ದಾಳಿ ಖಂಡನೀಯ

ಬೆಳಗಾವಿ, ಡಿ.13(ಕೆಎಂಶಿ)–ಸಂಸತ್ ಭವನದ ಮೇಲೆ ನಡೆದಿರುವ ದಾಳಿ ಖಂಡನೀಯವಾದುದು ಮಾತ್ರವಲ್ಲ, ಅತ್ಯಂತ ಆಘಾತಕಾರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಬೆಳಗಾವಿಯ ಸುವರ್ಣಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಸದರೆಲ್ಲರೂ ಸುರಕ್ಷಿತವಾಗಿದ್ದಾರೆ ಎನ್ನುವುದು ಸಮಾಧಾನದ ಸಂಗತಿ. ಅತ್ಯಂತ ಬಿಗಿಭದ್ರತೆಯ ಹೊರತಾಗಿಯೂ ಇಂತಹದ್ದೊಂದು ಘಟನೆ ನಡೆದಿರುವುದು ಆಘಾತಕಾರಿ ಬೆಳವಣಿಗೆ ಎಂದರು.

ಇದು ಸಂಪೂರ್ಣವಾಗಿ ಭದ್ರತಾ ವ್ಯವಸ್ಥೆಯ ಲೋಪ ಎನ್ನುವುದು ಸ್ಪಷ್ಟವಾಗಿದೆ. ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ಘಟನೆಯ ಹಿಂದಿನ ಸಂಪೂರ್ಣ ಸತ್ಯವನ್ನು ದೇಶದ ಮುಂದಿಡುವುದು ಕೇಂದ್ರ ಸರ್ಕಾರ, ಬಹಳ ಪ್ರಮುಖವಾಗಿ ದೇಶದ ಗೃಹ ಸಚಿವರ ಕರ್ತವ್ಯವಾಗಿದೆ.

ಇಪ್ಪತ್ತೆರಡು ವರ್ಷಗಳ ಹಿಂದೆ (13–12–2001) ಸಂಸತ್ ಮೇಲೆ ಭಯೋತ್ಪಾದಕರು ನಡೆಸಿದ್ದ ದಾಳಿಯ ದಿನವನ್ನೇ ಆರಿಸಿಕೊಂಡು ಈ ದಾಳಿ ನಡೆದಿರುವುದನ್ನು ಗಮನಿಸಿದರೆ ಇದರ ಹಿಂದೆ ಬೇರೆ ಹುನ್ನಾರಗಳಿರಬಹುದೆಂಬ ಸಂಶಯವೂ ಮೂಡುತ್ತಿದೆ. 2001ರ ದಾಳಿಯ ಸಮಯದಲ್ಲಿಯೂ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವೇ ಅಧಿಕಾರದಲ್ಲಿ ಇತ್ತು ಎನ್ನುವುದನ್ನು ಗಮನಿಸಬೇಕಾಗುತ್ತದೆ. ಇದು ದೇಶದ ಸುರಕ್ಷತೆಯ ಬಗ್ಗೆ ಹಲವಾರು ಪ್ರಶ್ನೆಗಳಿಗೆ ಕಾರಣವಾಗಿದೆ.

ಸಂಸತ್ ಭವನದ ಮೇಲೆ ದಾಳಿ ನಡೆಸಿದ ಯುವಕರಿಗೆ ಮೈಸೂರಿನ ಲೋಕಸಭಾ ಸದಸ್ಯ ಪ್ರತಾಪ ಸಿಂಹ ಅವರೇ ಪಾಸ್ ನೀಡಿರುವ ವರದಿಗಳು ಬರುತ್ತಿವೆ. ಈ ಸುದ್ದಿ ನಿಜವಾಗಿದ್ದಲ್ಲಿ ಈ ಸಂಸದರನ್ನು ಕೂಡಾ ವಿಚಾರಣೆಗೆ ಒಳಪಡಿಸಬೇಕಾಗುತ್ತದೆ.

ಪಾಸ್ ನೀಡಿರಬೇಕಾಗಿದ್ದರೆ ಯುವಕರು ಸಂಸದರ ಪರಿಚಯಸ್ಥರಾಗಿರಬಹುದು. ಪರಿಚಯಸ್ಥರಲ್ಲದೆ ಇದ್ದರೆ ಅಪರಿಚಿತರಿಗೆ ಪಾಸುಗಳನ್ನು ಹೇಗೆ ನೀಡಲಾಯಿತು ಎನ್ನುವ ಪ್ರಶ್ನೆ ಕೂಡಾ ಹುಟ್ಟುತ್ತದೆ. ಕಾನೂನಿನಲ್ಲಿ ಬೇಜವಾಬ್ದಾರಿಯಿಂದ ನಡೆಯುವ ಅನಾಹುತ ಕೂಡಾ ಶಿಕ್ಷಾರ್ಹ ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ.

ದೇಶದ ಹೃದಯದಂತಿರುವ ಸಂಸತ್ ಭವನಕ್ಕೆ ಬೇರೆ ಯಾವುದೇ ಪ್ರದೇಶ ಇಲ್ಲವೆ ಕಟ್ಟಡವನ್ನು ಮೀರಿದ ಬಿಗಿ ಭದ್ರತೆಯನ್ನು ನೀಡಲಾಗಿದೆ. ಹೀಗಿದ್ದರೂ ಈ ಯುವಕರು ಸ್ಮೋಕ್ ಬಾಂಬು ಹಿಡಿದುಕೊಂಡು ಸಂಸತ್ ಒಳಗೆ ಹೇಗೆ ಪ್ರವೇಶಿಸಿದರು? ಈ ಕೃತ್ಯದಲ್ಲಿ ಒಳಗಿನವರೇ ಯಾರಾದರೂ ಭಾಗಿಯಾಗಿದ್ದಾರೆಯೇ? ಈ ಯುವಕರ ಕೃತ್ಯದ ಹಿಂದೆ ಬೇರೆ ಯಾವುದಾದರೂ ಬಾಹ್ಯ ಶಕ್ತಿಗಳ ಕೈವಾಡ ಇದೆಯೇ? ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿಯೇ ಹುಟ್ಟಿಕೊಳ್ಳುತ್ತವೆ. ದೇಶದ ಸಂಸತ್ ಭವನವೇ ಸುರಕ್ಷಿತವಾಗಿಲ್ಲದಿರುವಾಗ ದೇಶದ ಗಡಿ ಸುರಕ್ಷಿತವಾಗಿರುತ್ತಾ ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿಯೇ ಹುಟ್ಟಿಕೊಳ್ಳುತ್ತವೆ. ಈ ಪ್ರಶ್ನೆಗಳಿಗೆಲ್ಲ ಉತ್ತರಿಸಬೇಕಾಗಿರುವ ಹೊಣೆ ದೇಶದ ಪ್ರಧಾನಿ ನರೇಂದ್ರ ಮೋದಿಯವರದ್ದಾಗಿದೆ.

ಪ್ರತಾಪ್ ಸಿಂಹ ಪಾಸ್ ನೀಡಿದ್ದರೆ ಅವರನ್ನು ವಿಚಾರಣೆಗೆ ಒಳಪಡಿಸಬೇಕು: ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹ

ಬೆಂಗಳೂರು, ಡಿ.13– ಸಂಸತ್ ಭವನದ ಮೇಲೆ ದಾಳಿ ನಡೆಸಿದ ಯುವಕರಿಗೆ ಮೈಸೂರಿನ ಲೋಕಸಭಾ ಸದಸ್ಯ ಪ್ರತಾಪ ಸಿಂಹ ಅವರು ಪಾಸ್ ನೀಡಿದ್ದರೆ ಅವರನ್ನು ವಿಚಾರಣೆಗೆ ಒಳಪಡಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಇಡೀ ದೇಶವನ್ನೇ ಬೆಚ್ಚಿ ಬೀಳಿಸಿರುವ ಸಂಸತ್ ಭವನದ ಮೇಲೆ ಇಂದು ನಡೆದಿರುವ ದಾಳಿ ಖಂಡನೀಯ ಮಾತ್ರವಲ್ಲದೆ ಅತ್ಯಂತ ಆಘಾತಕಾರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ಘಟನೆಯ ಹಿಂದಿನ ಸಂಪೂರ್ಣ ಸತ್ಯವನ್ನು ದೇಶದ ಮುಂದಿಡುವುದು ಕೇಂದ್ರ ಸರ್ಕಾರ, ಬಹಳ ಪ್ರಮುಖವಾಗಿ ದೇಶದ ಗೃಹ ಸಚಿವ ಅಮಿತ್ ಶಾ ಅವರ ಕರ್ತವ್ಯವಾಗಿದೆ ಎಂದು ಅವರು ಹೇಳಿದ್ದಾರೆ. ಈ ಕೃತ್ಯದಲ್ಲಿ ಒಳಗಿನವರು ಭಾಗಿಯಾಗಿದ್ದಾರೆಯೇ? ಬಾಹ್ಯ ಶಕ್ತಿಗಳ ಕೈವಾಡ ಇದೆಯೇ? ದೇಶದ ಸಂಸತ್ ಭವನವೇ ಸುರಕ್ಷಿತವಾಗಿಲ್ಲದಿರುವಾಗ ದೇಶದ ಗಡಿ ಸುರಕ್ಷಿತವಾಗಿರುತ್ತದೆಯಾ? ಈ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಹೊಣೆ ಪ್ರಧಾನಿ ನರೇಂದ್ರ ಮೋದಿ ಅವರಿಗಿದೆ ಎಂದು ಅವರು ಹೇಳಿದ್ದಾರೆ.



ಶಬರಿಮಲೆ ಅಯ್ಯಪ್ಪನ ದರ್ಶನಕ್ಕೆ ಬಂದ 12 ವರ್ಷದ ಬಾಲಕಿ ಕುಸಿದುಬಿದ್ದು ಸಾವು



ಪಟ್ಟಣಂತಿಟ್ಟ, ಡಿ.13–ಕೇರಳದ ಶಬರಿಮಲೆ ದೇಗುಲದಲ್ಲಿ ದರ್ಶನಕ್ಕಾಗಿ ಸರತಿ ಸಾಲಿನಲ್ಲಿ ನಿಂತಿದ್ದ ತಮಿಳುನಾಡಿನ 12 ವರ್ಷದ ಬಾಲಕಿಯೊಬ್ಬಳು ಇದ್ದಕ್ಕಿದ್ದಂತೆ ಕುಸಿದು ಬಿದ್ದು ಸಾವನ್ನಪ್ಪಿದ ಘಟನೆ ನಡೆದಿದೆ. ತಮಿಳುನಾಡು ಮೂಲದ ಪದ್ಮಶ್ರೀ (12) ಮೃತಪಟ್ಟ ಬಾಲಕಿಯಾಗಿದ್ದಾಳೆ. ದೇವಸ್ಥಾನದ ಅಪ್ಪಾಚಿಮೇಡು ಪ್ರದೇಶದಲ್ಲಿ ಬಾಲಕಿ ಕುಸಿದು ಬಿದ್ದಿದ್ದು, ಕೂಡಲೇ ಆಕೆಯನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಆದರೂ ಆಕೆಯನ್ನು ಉಳಿಸಲಾಗಲಿಲ್ಲ. ಮೃತದೇಹವನ್ನು ಪಂಬಾ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು ಎಂದು ವರದಿಗಳು ತಿಳಿಸಿವೆ.

ಬಾಲಕಿಗೆ ಈ ಹಿಂದೆಯೇ ಉಸಿರಾಟ ಸಮಸ್ಯೆ ಸೇರಿದಂತೆ ಇತರೆ ಆರೋಗ್ಯ ಸಮಸ್ಯೆಗಳಿತ್ತು ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ. ಬಾಲಕಿ ಮೂರು ವರ್ಷದಿಂದ ಹೃದ್ರೋಗಕ್ಕೆ ಚಿಕಿತ್ಸೆ ಪಡೆಯುತ್ತಿದ್ದಳು, ಡಯಾಲಿಸಿಸ್ ಮಾಡಿಸಿಕೊಳ್ಳುತ್ತಲೇ ಶಬರಿಮಲೆ ಏರಲು ನಿರ್ಧರಿಸಿದ್ದಳು ಎನ್ನಲಾಗಿದೆ. ಈ ನಡುವೆ ಶುಕ್ರವಾರ ರಾತ್ರಿಯಿಂದಲೇ ಶಬರಿಮಲೆ ಅಯ್ಯಪ್ಪ ದೇವಸ್ಥಾನದಲ್ಲಿ ಯಾತ್ರಾರ್ಥಿಗಳ ನೂಕುನುಗ್ಗಲು ಕಂಡು ಬರುತ್ತಿದ್ದು, ಜನಸಂದಣಿಯನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡುತ್ತಿದ್ದಾರೆ. ಅನೇಕ ಯಾತ್ರಾರ್ಥಿಗಳು ಬೇಲಿಗಳನ್ನು ಮುರಿದು ಅರಣ್ಯ ಮಾರ್ಗಗಳ ಮೂಲಕ ದೇವಾಲಯವನ್ನು ಪ್ರವೇಶಿಸಲು ಶಾರ್ಟ್‌ಕಟ್‌ಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದ್ದರಿಂದ ದೇವಾಲಯದಲ್ಲಿ ಪ್ರಯತ್ನಿಸಲಾಗಿದ್ದ ತಿರುಪತಿ ಮಾದರಿ ಸರತಿ ವ್ಯವಸ್ಥೆಯು ಸಂಪೂರ್ಣ ವಿಫಲವಾಗಿದೆ ಎಂದು ವರದಿಗಳು ತಿಳಿಸಿವೆ. ಪುರುಷರಷ್ಟೇ ಅಲ್ಲದೇ ಈ ಬಾರಿ ಶಬರಿಮಲೆಗೆ ಬರುವ ಮಹಿಳೆಯರ ಸಂಖ್ಯೆ ಕೂಡ ಹೆಚ್ಚಾಗಿದೆ. ಪ್ರತಿ ವರ್ಷಕ್ಕಿಂತ ಈ ಬಾರಿ ಶಬರಿಮಲೆಯಕ್ಕೆ ಬರುವ ಮಹಿಳೆಯರ ಸಂಖ್ಯೆ ಶೇಕಡ 20ರಷ್ಟು ಹೆಚ್ಚಾಗಿದೆ ಎಂದು ದೇವಸ್ವಂ ಮಂಡಳಿ ಮಾಹಿತಿ ನೀಡಿದೆ.

ಸಹಾಯಕ ಅರ್ಚಕ ಸಾವು: ಏತನ್ಮಧ್ಯೆ ಶಬರಿಮಲೆಯದಲ್ಲಿ ಸಹಾಯಕ ಅರ್ಚಕರೊಬ್ಬರು ಕುಸಿದು ಬಿದ್ದು ಸಾವನ್ನಪ್ಪಿದ ಘಟನೆ ಡಿಸೆಂಬರ್ 7 ರಂದು ನಡೆದಿದೆ. ಮೃತರನ್ನು ತಮಿಳುನಾಡಿನ ಕುಂಭಕೋಣಂನ ರಾವ್‌ಕುಮಾರ್(43) ಎಂದು ಗುರುತಿಸಲಾಗಿದೆ.

ಬೆಳಗ್ಗೆ ಕೋಣೆಯಲ್ಲಿ ಕುಸಿದು ಬಿದ್ದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ತಕ್ಷಣ ಇವರನ್ನು ಸನ್ನಿಧಾನಂ ಆಸ್ಪತ್ರೆಗೆ ಕರೆದೊಯ್ದರೂ ಜೀವ ಉಳಿಸಲಾಗಲಿಲ್ಲ.

ಮನೋರಂಜನ್ ಬಾಕ್ಸಿಂಗ್‌ನಲ್ಲಿ ಪರಿಣಿತ

ಮೈಸೂರು, ಡಿ.13(ಬಿಎಲ್‌ಯು)– ಸಂಸತ್ ಭವನದೊಳಗೆ ನುಗ್ಗಿ ರಂಪಾಟ ಮಾಡಿರುವ ಮೈಸೂರಿನ ಮನೋರಂಜನ್ ಬಾಕ್ಸಿಂಗ್‌ನಲ್ಲಿ ಪರಿಣಿತ.


ಮೈಸೂರಿನ ಸೈಂಟ್ ಜೋಸೆಫ್ ಸ್ಕೂಲ್ ಹಾಗೂ ಮರಿಮಲ್ಲಪ್ಪ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ್ದ ಮನೋರಂಜನ್, ಬಿಇ ಪದವೀಧರ. ಈ ತನಕ ಕೆಲಸಕ್ಕೆ ಹೋಗುವ ಮನಸು ಮಾಡಿರಲಿಲ್ಲ.

ಬಿಇ ಓದಿದ ನಂತರ ಮನೋರಂಜನ್ ಬಾಕ್ಸಿಂಗ್ ಕಲಿತ್ತಿದ್ದನು. ತನಗೆ ಗೊತ್ತಿರುವವರ ಮಕ್ಕಳಿಗೆ ಬಾಕ್ಸಿಂಗ್ ತರಬೇತಿ ನೀಡುತ್ತಿದ್ದನು. ಮನೋರಂಜನ್ ವ್ಯಕ್ತಿಗತವಾಗಿ ಒಳ್ಳೆಯವನಾಗಿದ್ದು, ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದನು. ಭಿಕ್ಷುಕರು ಮನೆಗೆ ಬಂದಾಗ ಏನಾದರೊಂದು ಕೊಡುತ್ತಿದ್ದನೆ ಹೊರತು, ಖಾಲಿ ಕೈಯಲ್ಲಿ ಕಳುಹಿಸುತ್ತಿರಲಿಲ್ಲ.



ಮನೋರಂಜನ್ ಕೆಲವು ಪ್ರಭಾವಿ ವ್ಯಕ್ತಿಗಳ ತತ್ವಾದರ್ಶಕ್ಕೆ ಪ್ರಭಾವಿತನಾಗಿದ್ದನು. ಸ್ವಾಮಿ ವಿವೇಕಾನಂದ ಸೇರಿದಂತೆ ಹಲವು ದಾರ್ಶನಿಕರ ಪುಸ್ತಕಗಳನ್ನು ಹೆಚ್ಚಾಗಿ ಓದುತ್ತಿದ್ದನು. ಆದರೆ ಇಂತಹ ಯುವಕ ಸಂಸತ್ ಭವನದೊಳಗೆ ನುಗ್ಗಿ ಈ ರೀತಿ ವರ್ತಿಸಲು ಕಾರಣ ಏನಿರಬಹುದು ತಿಳಿಯದು ಎಂದು ಹೆಸರೇಳಲಿಚ್ಛಿಸದ ಮನೋರಂಜನ್ ಆಪ್ತರೊಬ್ಬರು ತಿಳಿಸಿದರು.

ನಿರುದ್ಯೋಗಿಯಾಗಿದ್ದ ಮನೋರಂಜನ್ ಹಾಗಾಗೆ ಎರಡ್ಮೂರು ದಿನಗಳ ಕಾಲ ಹೊರಗಡೆ ಹೋಗಿ ಬರುತ್ತಿದ್ದನು. ಆದರೆ ಎಲ್ಲಿ ಹೋಗುತ್ತಿದ್ದನು ಎಂಬ ಮಾಹಿತಿ ತಿಳಿದಿಲ್ಲ ಎಂದು ಅವರು ಹೇಳಿದರು.



ಮನೋರಂಜನ್ ತನ್ನ ಕೊಠಡಿಯಲ್ಲಿ ಸಂಗ್ರಹಿಸಿರುವ ಪುಸ್ತಕಗಳು.

ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಶಾಲಾ ವಸ್ತುಪ್ರದರ್ಶನಕ್ಕೆ ಚಾಲನೆ



ಮೈಸೂರು, ಡಿ.13–ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾ ಕೇಂದ್ರದಲ್ಲಿ ಶಾಲಾ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಪ್ರಾಯೋಗಿಕವಾಗಿ ಶಾಲೆಯ ಆವರಣದಲ್ಲಿ ಚಂದ್ರಯಾನ–3 ಮಾದರಿ ರಾಕೆಟ್ ಉಡಾವಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ವಿಧ್ಯುಕ್ತ ಚಾಲನೆ ನೀಡಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಮಾತನಾಡಿ, ಯಾಕೆ, ಹೇಗೆ, ಎಲ್ಲಿ, ಮುಂತಾದ ಪ್ರಶ್ನೆಗಳನ್ನು ಹುಟ್ಟುಹಾಕುವುದೇ ವಿಜ್ಞಾನ ಎಂದು ತಿಳಿಸಿದರು. ನಮ್ಮ ಹಿರಿಯರು ಹಾಕಿಕೊಟ್ಟ ದಾರಿ ಬಹಳ ವೈಜ್ಞಾನಿಕವಾಗಿದ್ದು, ಅದನ್ನು ನಾವು ಅನುಸರಿಸಿ ಹೋಗಬೇಕು ಎಂದರು. ಮಕ್ಕಳು ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ತಿಳಿಸುತ್ತಾ ದೇಶಕ್ಕೆ ವಿಜ್ಞಾನಿಗಳ ಕೊಡುಗೆ ಅಪಾರ ಎಂದು ಶ್ಲಾಘಿಸಿದರು.

ಪ್ರೊಸೆಟ್ಟಾ ಬಯೋಕನ್ ಫಾರ್ಮಟಿಕ್ಸ್ ಪ್ರೈವೇಟ್ ಲಿಮಿಟೆಡ್ ಸಿಇಓ ಧರ್ಮ ಪ್ರಸಾದ್ ಮಾತನಾಡಿ, ವಿಜ್ಞಾನ ಮುಂದುವರೆದಂತೆ, ಮಾನವನೂ ಮುಂದುವರೆಯುತ್ತಾನೆ. ತಂತ್ರಜ್ಞಾನವಿಲ್ಲದೇ ಮಾನವನ ಪ್ರಗತಿ ಅಸಾಧ್ಯ ಎಂದು ತಿಳಿಸಿದರು ಹಾಗೂ ಭಾರತೀಯ ಸಂಸ್ಕೃತಿಯು ವೈಜ್ಞಾನಿಕ ತಳಹದಿಯ ಮೇಲೆ ನಿಂತಿದ್ದು ಅಡುಗೆ ಮನೆಯಿಂದ ಹಿಡಿದು ಪ್ರತಿ ಹಂತದಲ್ಲೂ ವಿಜ್ಞಾನವಿದೆ ಎಂದು ತಿಳಿಸಿಕೊಟ್ಟರು. ವೈಜ್ಞಾನಿಕ ಹಿನ್ನೆಲೆ ತಿಳಿಯದೇ ಯಾವುದನ್ನೂ ನಾವು ಅಲ್ಲಗಳೆಯಬಾರದು ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಎಂ.ಪಾಪೇಗೌಡ ಮಾತನಾಡಿ, ಪಾಲಕರು ಹಾಗೂ ಶಿಕ್ಷಕರು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವಲ್ಲಿ ಮುಖ್ಯ ಪಾತ್ರವಹಿಸಬೇಕು ಎಂದು ತಿಳಿಸಿದರು. ವೈಜ್ಞಾನಿಕ ಮನೋಭಾವನೆಯ ಮೂಲಕ ಮಕ್ಕಳು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳಾಗಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮಕ್ಕಳು ರೇಷ್ಮೆ ಹುಳುವಿನ ಜೀವನಚಕ್ರ, ರಕ್ತದ ಗುಂಪಿನ ಪರೀಕ್ಷೆ ಹಾಗೂ ಸೂಕ್ಷ್ಮಾಣು ಜೀವಿಗಳ ಬೆಳವಣಿಗೆ, ದೇಶ ವಿದೇಶಗಳ ಕರೆನ್ಸಿ, ನಾಣ್ಯ ಹಾಗೂ ಅಂಚೆಚೀಟಿಗಳು ಮತ್ತು ಕಾರ್ಯನಿರ್ವಹಿಸುವ ಹಲವು ಮಾದರಿ, ಚಾರ್ಟ್‌ಗಳು, ಚಿತ್ರಪಟಗಳು ಮುಂತಾದವುಗಳ ಕ್ರಿಯಾತ್ಮಕ ಪ್ರದರ್ಶನವನ್ನು ಪ್ರದರ್ಶಿಸಲಾಯಿತು. ಶ್ರೀ ರಾಮಕೃಷ್ಣ ಸೇವಾಸಂಘದ ಉಪಾಧ್ಯಕ್ಷ ಕೆಂಪಲಿಂಗರಾಜು, ಖಜಾಂಚಿ ಹೆಚ್.ಜಿ.ರಮೇಶ್, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ. ಚಂದ್ರಶೇಖರ್, ರಾಮಕೃಷ್ಣ ವಿದ್ಯಾಕೇಂದ್ರದ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್. ವಿಶ್ವನಾಥ್, ಮುಖ್ಯೋಪಾಧ್ಯಾಯಿನಿ ವೀಣಾ ಕೆ.ಹೆಗಡೆ ಉಪಸ್ಥಿತರಿದ್ದರು.

ಡಿ.16ರಂದು ಲೆಕ್ಕ ಪರಿಶೋಧಕರಿಂದ ಸರ್ಕಾರಿ ಶಾಲೆಗಳಿಗೆ ಪರಿಕರ ಕೊಡುಗೆ



ಮೈಸೂರು, ಡಿ.13(ಜಿಎ)–ಲೆಕ್ಕ ಪರಿಶೋಧಕ ತಂಡದ 'ಕ್ಯಾಪ್ಸ್' ಎನ್‌ಜಿಓ ಸೇವಾ ಸಂಸ್ಥೆಯು ಡಿ.16ರಂದು 'ಕಲಾಂ ಕಲಂ' ಯೋಜನೆಯಡಿ ಸರ್ಕಾರಿ ಶಾಲೆಗಳಿಗೆ 1 ಕೋಟಿ ರೂ. ಮೌಲ್ಯದ ಪರಿಕರಗಳನ್ನು ಕೊಡುಗೆಯಾಗಿ ನೀಡಲಿದೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 15 ವರ್ಷಗಳಿಂದ ಲೆಕ್ಕಪರಿಶೋಧಕರೆ ಸೇರಿ ಕಾಪ್ಸ್ ಎಂಬ ಫೌಂಡೇಶನ್ ಸ್ಥಾಪಿಸಿಕೊಂಡು ಹಲವು ಸೇವಾ ಕಾರ್ಯಗಳನ್ನು ಮಾಡಿಕೊಂಡು ಬರಲಾಗಿದೆ. ಅಂತೆಯೇ ಈ ಬಾರಿ 1000 ಅಂಗನವಾಡಿ ಹಾಗೂ 531 ಶಾಲೆಗಳ ಬೇಡಿಕೆಗೆ ಪೂರಕವಾದ ಪಠ್ಯ ಸಾಮಗ್ರಿ, ಕ್ರೀಡಾ ಪರಿಕರ, ಬ್ಯಾಗ್, ಕುಡಿಯುವ ನೀರಿನ ಬಾಟಲ್ ಇನ್ನಿತರ ಪರಿಕರಗಳನ್ನು ಕೊಡುಗೆಯಾಗಿ ನೀಡಲು ಮುಂದಾಗಿದೆ. ಈಗಾಗಲೇ ಉಪನಿರ್ದೇಶಕರ ಮಾಹಿತಿ ಮೇರೆಗೆ ವಿತರಣೆಗೆ ಸಿದ್ಧತೆ ನಡೆಸಲಾಗಿದೆ ಎಂದರು.

ಡಿ.16ರ ಬೆ.10.35 ಕ್ಕೆ ನಂಜನಗೂಡಿನ ಸರ್ಕಾರಿ ಕಾಲೇಜು ಮೈದಾನದಲ್ಲಿ ಸಿಎಫ್ ಕೊಡುಗೆ ಸಂಭ್ರಮ ಕಾರ್ಯಕ್ರಮವನ್ನು ಅಂತಾರಾಷ್ಟ್ರೀಯ ತೆರಿಗೆ ತಜ್ಞ ಸಿಎಹೆಚ್ ಪದವ್ ಚಂದ್ ಖಿಂಚಾ ಉದ್ಘಾಟಿಸುವರು. ಶಾಸಕ ದರ್ಶನ್ ಧ್ರುವನಾರಾಯಣ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಡಿಡಿಪಿಐ ಎಚ್.ಕೆ.ಪಾಂಡು, ನಿರಾಮಯ ಯೋಗ ಕುಟೀರಮ್ ಸಂಸ್ಥಾಪಕ ಬಿ.ರಾಘವೇಂದ್ರ ಶೆಣೈ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಮುಖ್ಯೋಪಾಧ್ಯಯರ ಸಂಘದ ಅಧ್ಯಕ್ಷ ಸೋಮೇಗೌಡ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆಯ ಶಾಲೆಗಳಿಂದ 3 ಸಾವಿರ ವಿದ್ಯಾರ್ಥಿಗಳು, 2 ಸಾವಿರ ಶಿಕ್ಷಕರು ಇದರ ಪ್ರಯೋಜನ ಪಡೆದುಕೊಳ್ಳಲಿದ್ದಾರೆ. ಪ್ಲಾಸ್ಟಿಕ್ ಮುಕ್ತಗೊಳಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಕೆ.ವಸಂತ್ ಕುಮಾರ್, ನಿವೃತ್ತ ಮುಖ್ಯ ಶಿಕ್ಷಕ ಬಸವರಾಜು, ಫೌಂಡೇಶನ್ ಸದಸ್ಯ ಸುಮಂತ್ ಉಪಸ್ಥಿತರಿದ್ದರು.

ನಾಳೆ ಬಾ ನಲ್ಲೆ ಮದುವೆಗೆ ಚಿತ್ರ ಬಿಡುಗಡೆ



ಮೈಸೂರು, ಡಿ.13(ಜಿಎ)–'ಬಾ ನಲ್ಲೆ ಮದುವೆಗೆ' ಚಿತ್ರವು ಡಿ.15ರಂದು ತೆರೆ ಕಾಣಲಿದೆ ಎಂದು ನಿರ್ಮಾಪಕ ಹಾಗೂ ನಿರ್ದೇಶಕ ಯೋಗೇಶ್ ನಂದ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ಹಳ್ಳಿಯಲ್ಲಿ ಪ್ರೀತಿ ಮಾಡಿ ಮದುವೆಯಾದ ಬಳಿಕ ಎದುರಾಗುವ ಎಲ್ಲಾ ಸನ್ನಿವೇಶದಲ್ಲಿ ಹೇಗೆ ಬದುಕಬೇಕು ಎಂಬುದನ್ನು ಚಿತ್ರ ತಿಳಿಸಿಕೊಡಲಿದ್ದು, ಚಿತ್ರದಲ್ಲಿ ಐದು ಹಾಡು, ನಾಲ್ಕು ಫೈಟ್‌ಗಳನ್ನು ಒಳಗೊಂಡಿದೆ ಎಂದರು.

ನಾಯಕ ನಟ ಅರ್ಜುನ್ ಮಾತನಾಡಿ, ಹಲವು ಸಿನಿಮಾಗಳಲ್ಲಿ ನಟನೆ ಮಾಡಿದ್ದ ಅನುಭವದ ಬಳಿಕ ಈ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಈ ಪ್ರಯತ್ನಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ. ನಾಯಕಿಯಾಗಿ ಶೋಭ ನಟಿಸಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಹಕಲಾವಿದ ಸಿದ್ದರಾಜು, ಹಾಸ್ಯ ಕಲಾವಿದ ಉಮ್ಮತ್ತೂರು ಬಸವರಾಜು, ಸಹ ನಟ ಸಚ್ಚಿನ್ ಉಪಸ್ಥಿತರಿದ್ದರು.

ನಾಳೆ ಮಾಯಾನಗರಿ ಚಿತ್ರ ಬಿಡುಗಡೆ



ಮೈಸೂರು, ಡಿ.13(ಜಿಎ)–ಡಿ.15 ಕ್ಕೆ 'ಮಾಯನಗರಿ' ಚಿತ್ರವು 170 ಥಿಯೇಟರ್‌ಗಳಲ್ಲಿ ತೆರೆ ಕಾಣಲಿದೆ ಎಂದು ಸಹ ನಟ ಭರತ್ ಸಾಗರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಯಾಂಡಲ್‌ವುಡ್ ಪಿಚ್ಚರ್ಸ್ ಅಡಿಯಲ್ಲಿ ಚಿತ್ರ ತೆರೆ ಕಾಣುತ್ತಿದ್ದು, ನಾಲ್ಕು ಹಾಡು, ಎರಡು ಫೈಟ್‌ಗಳಿವೆ. ಮಾಸ್ ಹಾಗೂ ಹಾರರ್ ಕಥೆಯನ್ನು ಒಳಗೊಂಡಂತೆ ಪ್ರೇಕ್ಷಕರಿಗೆ ಒಳ್ಳೆಯ ಮನರಂಜನೆ ಕೊಡಲಿದೆ. ಚಿತ್ರದಲ್ಲಿ ಮುಖ್ಯ ನಾಯಕರಾಗಿ ಅನೀಶ್, ನಟಿಯರಾಗಿ ತೇಜು, ಶ್ರಾವ್ಯ, ಚಿಕ್ಕಣ್ಣ ಸೇರಿದಂತೆ ಬಹುದೊಡ್ಡ ತಾರಾಂಗಣವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹಂಚಿಕೆದಾರರಾದ ಸತೀಶ್, ಶಿವು ಉಪಸ್ಥಿತರಿದ್ದರು.

ಸಂಸ್ಕೃತ ಜ್ಞಾನ ಭಂಡಾರದ ಸಮುದ್ರ; ಇದನ್ನು ಯಾರಿಂದಲೂ ದಾಟಲು ಸಾಧ್ಯವಿಲ್ಲ

ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಅಭಿಪ್ರಾಯ



ಮೈಸೂರು, ಡಿ.13(ಬಿಎಲ್‌ಯು)–ಸಂಸ್ಕೃತ ಜ್ಞಾನ ಭಂಡಾರದ ಸಮುದ್ರವಾಗಿದ್ದು, ಅದನ್ನು ದಾಟಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ನಡೆದ ಸಂಸ್ಕೃತೋತ್ಸವ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜ್ಞಾನ ಭಂಡಾರದ ಸಮುದ್ರ ಪ್ರವೇಶ ಮಾಡಬಹುದಷ್ಟೆ, ಆದರೆ ದಾಟಲು ಸಾಧ್ಯವಿಲ್ಲ. ಅದರ ಆಳ, ಉದ್ದ, ಅಗಲ ತಿಳಿಯಲು ಯಾರಿಂದಲೂ ಆಗಲ್ಲ ಎಂದು ಹೇಳಿದರು.

ಸಂಸ್ಕೃತ ಹಿಂದೂ ಧರ್ಮದ ಸಾಹಿತ್ಯ, ಕೃತಿಗಳಿಗೆ ಮಾತ್ರ ಬಳಕೆಯಾಗದೆ, ಜೈನ, ಬೌದ್ಧ ಸೇರಿದಂತೆ ಹಲವು ಧರ್ಮಗಳ ಕೃತಿ ಹಾಗೂ ಸಾಹಿತ್ಯಗಳಲ್ಲೂ ಬಳಕೆಯಾಗಿದೆ. ಹಲವು ಧರ್ಮ ಗ್ರಂಥಗಳಲ್ಲಿ ಸಂಸ್ಕೃತದ ಉಲ್ಲೇಖವಿದೆ ಎಂದರು.

ರಾಮಾಯಣ, ಮಹಾಭಾರತದಲ್ಲಿ ಸಂಸ್ಕೃತದ ಪ್ರಭಾವವಿದೆ. ಆದರೆ ಕಾಲ ಕಳೆದಂತೆ ರಾಮಾಯಣ ಹಲವು ಕಥಾ ವಸ್ತುಗಳ ಆಧಾರದ ಮೇಲೆ ರೂಪ ಪಡೆದಿದೆ. ಆದರೆ ರೂಪಾಂತರ ಬೇರೆಯಾಗಿದ್ದರೂ ಅದರ ಕಥಾ ಸಾರ ಮಾತ್ರ ಒಂದೇ ರೀತಿ ಇದೆ ಎಂದು ಪ್ರೊ.ಪದ್ಮಾಶೇಖರ್ ಅಭಿಪ್ರಾಯಪಟ್ಟರು. ವೇದ, ಪುರಾಣ, ಗಣಿತ ಸೇರಿದಂತೆ ಪ್ರತಿಯೊಂದು ವಿಷಯದಲ್ಲಿ ಸಂಸ್ಕೃತದ ಜ್ಞಾನ ಭಂಡಾರವಿದೆ. ಸಂಸ್ಕೃತದ ಬಗ್ಗೆ ಎಷ್ಟೇ ಅಧ್ಯಯನ ಮಾಡಿದ್ದರೂ ಪೂರ್ಣ ಪ್ರಮಾಣದ ಜ್ಞಾನಾರ್ಜನೆ ಅಸಾಧ್ಯ. ಸಂಸ್ಕೃತ ಅಕ್ಷಯ ಪಾತ್ರೆಯಾಗಿದೆ. ಈ ಕಾರಣದಿಂದಲೇ ಭಾರತ ಮಾತ್ರವಲ್ಲದೆ ವಿಶ್ವದ ಹಲವು ವಿಶ್ವ ವಿದ್ಯಾನಿಲಯಗಳಲ್ಲಿ ಸಂಸ್ಕೃತದ ಬಗ್ಗೆ ಈಗಲೂ ಅಧ್ಯಯನ ಮಾಡಲಾಗುತ್ತಿದೆ ಎಂದರು.

ಮನುಷ್ಯನಿಗೆ ಅವಶ್ಯವಿರುವ ವಸ್ತು ವಿಷಯ ಸಂಸ್ಕೃತದಲ್ಲಿದೆ. ಜೀವನದ ವಿಧಾನ, ಮೌಲ್ಯ, ಕಾವ್ಯ, ಕಥೆಯ ಕಲಾ ಸಾರ ಸಂಸ್ಕೃತದಿಂದ ತಿಳಿದು ಬರುತ್ತದೆ. ಸಂಸ್ಕ್ರತದಿಂದ ತತ್ವಜ್ಞಾನ ಮತ್ತು ದೇವರ ಪರಿಕಲ್ಪನೆ ತಿಳಿಯುತ್ತದೆ. ಈ ಕಾರಣದಿಂದ ಸಂಸ್ಕೃತವನ್ನು ಸಾಂಸ್ಕೃತಿಕ ಪತ್ಯ ಎಂದು ಒಪ್ಪಿದ್ದೇವೆ ಎಂದು ಪ್ರೊ.ಪದ್ಮಾಶೇಖರ್ ಹೇಳಿದರು. ಆಯಾ ಭಾಷೆಯಲ್ಲಿ ಸಂದರ್ಭ ಹಾಗೂ ಪರಿಸ್ಥಿತಿಗೆ ತಕ್ಕಂತೆ ಸಂಸ್ಕೃತ ಸ್ಥಿತ್ಯಂತರಗೊಂಡಿದೆ. ಉದಾಹರಣೆಗೆ ಹೇಳುವುದಾದರೆ ವಾಲ್ಮೀಕಿ ರಾಮಾಯಣ ಆಯಾ ಪರಿಸ್ಥಿತಿಯ ವರ್ತಮಾನದಲ್ಲಿ ಸ್ಥಿತ್ಯಂತರದ ರೂಪ ತಾಳಿದೆ ಎಂದು ತಿಳಿಸಿದರು.

ಸಂಸ್ಕೃತದಲ್ಲಿರುವ ಮಂತ್ರವನ್ನು ಪ್ರತಿಯೊಬ್ಬರು ಉಚ್ಚರಣೆ ಮಾಡಬೇಕು. ಮಂತ್ರ ಪಠಿಸುವುದರಿಂದ ನೆನಪಿನ ಶಕ್ತಿ ವೃದ್ಧಿಸುತ್ತದೆ, ಉಚ್ಚರಣೆಯ ದೋಷ ನಿವಾರಣೆಯಾಗುತ್ತದೆ. ಅಲ್ಲದೆ ಸ್ವರಗಳು ಖಚಿತವಾಗುತ್ತದೆ ಎಂದು ಪ್ರೊ. ಪದ್ಮಶೇಖರ್ ಸಲಹೆ ನೀಡಿದರು.

ಕಾಲೇಜು ಶಿಕ್ಷಣ ವಿಭಾಗದ ನಿವೃತ್ತ ಹೆಚ್ಚುವರಿ ನಿರ್ದೇಶಕ ವಿದ್ವಾನ್ ಟಿ.ಎನ್. ಪ್ರಭಾಕರ್, ಜೆಎಸ್‌ಎಸ್ ಕಾಲೇಜುಗಳ ಪ್ರಾಂಶುಪಾಲರಾದ ಡಾ.ಎಂ. ಪೂರ್ಣಿಮಾ, ಡಾ.ಎಸ್.ಪ್ರತಿಭಾ, ಎಂ.ಪಿ. ರಾಜೇಶ್ವರಿ, ಎಸ್.ಸೋಮಶೇಖರ್ ಹಾಗೂ ಕಾಲೇಜಿನ ಶೈಕ್ಷಣಿಕ ಡೀನ್ ಡಾ.ರೇಚಣ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಪ್ನ ಬುಕ್‌ಹೌಸ್ ಪುಸ್ತಕ ಪ್ರಕಾಶನ ಸಂಸ್ಥೆಯಿಂದ ಕೃತಿಚೌರ್ಯ ಆರೋಪ



ಮೈಸೂರು, ಡಿ.13(ಜಿಎ)–ಸಪ್ನ ಬುಕ್ ಹೌಸ್ ಪುಸ್ತಕ ಪ್ರಕಾಶನ ಸಂಸ್ಥೆಯು 'ಕನ್ನಡ ವಿಶ್ವಕೋಶ'ದ ಕೃತಿಚೌರ್ಯ ಎಸಗಿದ್ದು, ಇವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ವಿಶ್ವಕೋಶದ ಗೌರವ ಸಂಪಾದಕ ಡಾ.ಹಾ.ತಿ.ಕೃಷ್ಣೇಗೌಡ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ದೊಡ್ಡ ಪುಸ್ತಕ ಪ್ರಕಾಶನ ಸಂಸ್ಥೆಯಾದ ಸಪ್ನ ಬುಕ್ ಹೌಸ್, ಯಾವುದೇ ಅನುಮತಿ ಪಡೆಯದೆ ಕನ್ನಡ ವಿಶ್ವಕೋಶದಿಂದ ನೇರವಾಗಿ ವಿಷಯ ತೆಗೆದುಕೊಂಡು ಸ್ವಂತ ಪುಸ್ತಕವೆಂದು ಪ್ರಕಟಿಸಿರುವುದು ವಿಷಾದನೀಯ ಎಂದರು.

ಕರ್ನಾಟಕದ ಚರಿತ್ರೆಗೆ ಸಂಬಂಧಿಸಿದಂತೆ 'ಕರ್ನಾಟಕ ಇತಿಹಾಸ ಮಾಲೆ' ಶೀರ್ಷಿಕೆಯಡಿ ಕೆಲವು ಪುಸ್ತಕವನ್ನು ಪ್ರಕಟಿಸಿದೆ. ಈ ಮಾಲೆಯಲ್ಲಿ ಪ್ರಕಟಿಸಿರುವ 6 ಕೃತಿಗಳು ಕದಂಬರು, ಗಂಗರು, ಚಾಲುಕ್ಯರು, ಹೊಯ್ಸಳರು, ಶಾತವಾಹನರು, ವಿಜಯನಗರ ಸಾಮ್ರಾಜ್ಯ 'ಆರ್‌ಡಿಜಿ' ಸಂಕೇತನಾಮದಲ್ಲಿ ಪ್ರಕಟಿಸಿದೆ. ಈ 6 ಪುಸ್ತಕಗಳಲ್ಲಿ ಕದಂಬರು, ಹೊಯ್ಸಳರು, ಚಾಲುಕ್ಯರು ಮತ್ತು ವಿಜಯನಗರ ಸಾಮ್ರಾಜ್ಯ– 4 ಪುಸ್ತಕಗಳ ವಿಚಾರವನ್ನು ಯಥಾವತ್ತು ಕನ್ನಡ ವಿಷಯ ವಿಶ್ವಕೋಶ 'ಕರ್ನಾಟಕ ಸಂಪುಟ–1' ಮತ್ತು ಕರ್ನಾಟಕ ಸಂಪುಟ–2'– ಈ ಎರಡು ಸಂಪುಟಗಳಿಂದ ಎತ್ತಿಕೊಳ್ಳಲಾಗಿದ್ದು, ಲೇಖನದ ಶೀರ್ಷಿಕೆಯನ್ನು ಮಾತ್ರ ಬದಲಾಯಿಸಲಾಗಿದೆ.

ಅಲ್ಲೊಂದು, ಇಲ್ಲೊಂದು ಪದವನ್ನು ಮಾರ್ಪಡಿಸಿದೆ ಅಷ್ಟೇ. ಕರ್ನಾಟಕ ವಿಷಯ ವಿಶ್ವಕೋಶ ಸಂಪುಟದಲ್ಲಿ ಮೂಲ ಲೇಖನ 'ವಿಜಯನಗರ' ಎಂದಿದ್ದರೆ ಅದನ್ನು 'ವಿಜಯನಗರ ಸಾಮ್ರಾಜ್ಯ' ಎಂದು ಬದಲಾಯಿಸಿದೆ.

'ಕದಂಬ ವಂಶ' ಎಂಬುದು 'ಕದಂಬರು' ಎಂದಾಗಿದೆ. 'ಹೊಯ್ಸಳ ವಂಶ' ಎಂಬುದು 'ಹೊಯ್ಸಳರು' ಎಂದಾಗಿದೆ. 'ಚಾಳುಕ್ಯ ವಂಶ' ಎಂಬುದು 'ಚಾಲುಕ್ಯರು' ಆಗಿದೆ. ಈ ಒಂದು ಬದಲಾವಣೆಯನ್ನುಳಿದರೆ ಲೇಖನದ ಮೊದಲ ಅಕ್ಷರದಿಂದ ಕೊನೆಯ ಅಕ್ಷರದವರೆಗೆ ಯಥಾವತ್ತು ನಕಲು ಮಾಡಿ ಮುದ್ರಣ ಮಾಡಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ಪುಸ್ತಕ ಪ್ರಕಾಶನದ ದೊಡ್ಡ ಸಂಸ್ಥೆಯೊಂದು ಇಂಥ ಸಣ್ಣ ಕೆಲಸ ಮಾಡಿರುವುದು ಕನ್ನಡಕ್ಕೆ, ಕನ್ನಡ ವಿಶ್ವಕೋಶಕ್ಕೆ ಮಾಡಿರುವ ದ್ರೋಹ ಹಾಗೂ ಮೋಸವಾಗಿದೆ. ಮೈಸೂರು ವಿಶ್ವವಿದ್ಯಾನಿಲಯ ಈ ಬಗ್ಗೆ ಕ್ರಮಕೈಗೊಂಡು ಕಾನೂನು ಕ್ರಮ ಜರುಗಿಸಬೇಕು ಎಂದು ನಾನು ಮನವಿ ಮಾಡುತ್ತೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ಪ್ರಾಧ್ಯಾಪಕ ಡಾ.ಪಿ.ಗೌರೀಶ್, ಕಾಂಗ್ರೆಸ್ ವಕ್ತಾರ ಶ್ರೀನಿವಾಸ್, ಮಾಹಿತಿ ತಂತ್ರಜ್ಞಾನ ತಜ್ಞ ಅಶೋಕ್ ಕುಮಾರ್, ಪುರಾತತ್ವ ತಜ್ಞೆ ಡಾ.ವಿ.ಶೋಭ, ವಕೀಲ ಎಂ.ಶಿವಣ್ಣ ಉಪಸ್ಥಿತರಿದ್ದರು.

ಡಿ.16, 17ಕ್ಕೆ ಶ್ರೀ ಬಲಮುರಿ ಗಣಪತಿ ದೇವಸ್ಥಾನದಲ್ಲಿ 34ನೇ ವಾರ್ಷಿಕೋತ್ಸವ



ಮೈಸೂರು, ಡಿ.13– ಮೈಸೂರಿನ ರೈಲ್ವೆ ನಿಲ್ದಾಣದಲ್ಲಿರುವ ಶ್ರೀ ಬಲಮುರಿ ಗಣಪತಿ ದೇವಸ್ಥಾನದಲ್ಲಿ ಡಿ.16 ಮತ್ತು 17ರಂದು 34ನೇ ವಾರ್ಷಿಕೋತ್ಸವ ವಿಜೃಂಭಣೆಯಿಂದ ನೆರವೇರಲಿದೆ.

ವಾರ್ಷಿಕೋತ್ಸವದ ಅಂಗವಾಗಿ ಈ ಬಾರಿ ಮೃತ್ಯು ನಿವಾರಣೆಗಾಗಿ, ಆರೋಗ್ಯಕ್ಕಾಗಿ ಮಹಾಮೃತ್ಯುಂಜಯ ಹೋಮವನ್ನು ಏರ್ಪಡಿಸಲಾಗಿದೆ ಎಂದು ಪ್ರಧಾನ ಅರ್ಚಕರಾದ ಜಿ.ಎಸ್.ನಾಗೇಶ್ ದೀಕ್ಷಿತ್, ಎನ್.ನಾಗೇಂದ್ರ ಪ್ರಸಾದ್ ದೀಕ್ಷಿತ್ ಹಾಗೂ ಎನ್.ಹೇಮಂತ್ ಕುಮಾರ್ ದೀಕ್ಷಿತ್ ತಿಳಿಸಿದ್ದಾರೆ. ಡಿ.16ರ ಶನಿವಾರ ಬೆಳಗ್ಗೆ 9ಕ್ಕೆ ಗಣಪತಿ ಹೋಮ, ಶ್ರೀ ಸುಬ್ರಹ್ಮಣ್ಯ ಹೋಮ, ಶರೀ ಧರ್ಮಶಾಸ್ತ್ರ ಹೋಮ, ಶ್ರೀ ಗುರುದತ್ತಾತ್ರೇಯ ಹೋಮ, ಶ್ರೀ ಆಂಜನೇಯ ಹೋಮ, ಶ್ರೀ ನವಗ್ರಹ ಹೋಮ, ನಾಗದೇವತಾ ಹೋಮ, ಕುಂಭಾಭಿಷೇಕ ನೆರವೇರಲಿದೆ.

ಡಿ.17ಕ್ಕೆ ಭಾನುವಾರ ಪಂಚಮಿ ಶ್ರವಣ ನಕ್ಷತ್ರ ಬೆಳಗ್ಗೆ 9ಕ್ಕೆ ವಿಶೇಷವಾಗಿ ಪ್ರಧಾನ ಹೋಮ, ಮೃತ್ಯು ನಿವಾರಣೆಗಾಗಿ, ಆರೋಗ್ಯಕ್ಕಾಗಿ ಮಹಾಮೃತ್ಯುಂಜಯ ಹೋಮವನ್ನು ಏರ್ಪಡಿಸಿದ್ದು, ಬೆಳಗ್ಗೆ 11ಕ್ಕೆ ಮಹಾಪೂರ್ಣಾಹುತಿ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗವಾಗಲಿದೆ ಎಂದು ಅವರು ತಿಳಿಸಿದ್ದಾರೆ. ಭಕ್ತಾದಿಗಳು ಈ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಶ್ರೀಯವರ ಕೃಪೆಗೆ ಪಾತ್ರರಾಗಬೇಕೆಂದು ಮನವಿ ಮಾಡಿದ್ದಾರೆ.

ಡಿ.17ರಿಂದ ಜ.14ರವರೆಗೆ ಧನುರ್ಮಾಸ ಪೂಜೆ



ಮೈಸೂರು, ಡಿ.13– ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಡಿ.17ರಿಂದ ಜ.14ರವರೆಗೆ ಧನುರ್ಮಾಸ ಪೂಜೆಯನ್ನು ಆಯೋಜಿಸಲಾಗಿದೆ. ಈ ಸಮಯದಲ್ಲಿ ದೇವಸ್ಥಾನದ ಬಾಗಿಲನ್ನು ಬೆಳಿಗ್ಗೆ 5.30ರಿಂದ 10.30 ಹಾಗೂ ಸಂಜೆ 4.30ರಿಂದ 7.30ರವರೆಗೆ ತೆರೆಯಲಾಗುವುದು. ಡಿ.23ರಂದು ವೈಕುಂಠ ಏಕಾದಶಿಯ ಪ್ರಯುಕ್ತ ಸ್ವಾಮಿಗೆ ವಿಶೇಷ ಅಭಿಷೇಕ, ಅಲಂಕಾರ, ಶಾತ್ತುಮೊರೈ, ನೈವೇದ್ಯ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಇರುತ್ತದೆ. ಜ.12ರಂದು ಕೂಡಾರವೆಲ್ಲಂ (ಆಂಡಾಳ್ ದೇವಿ ಹುಟ್ಟಿದ ದಿನ) ವಿಶೇಷ ಪೂಜಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ಪ್ರೊ.ಸಿ.ನಾಗಣ್ಣ, ಡಾ.ಕಬ್ಬಿನಾಲೆಯವರದ್ದು ಶಿಸ್ತಿನ ಸಾಹಿತ್ಯ ಸೇವೆ

● ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ.ಕೃಷ್ಣೇಗೌಡ ಬಣ್ಣನೆ ● ಮಾಜಿ ಶಾಸಕ ವಾಸು ನೇತೃತ್ವದಲ್ಲಿ ಸನ್ಮಾನ



ಮೈಸೂರು, ಡಿ. 13– ಪ್ರೊ.ಸಿ. ನಾಗಣ್ಣ ಹಾಗೂ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ ಅವರು ಗೆರೆ ದಾಟದೇ ಸಾಹಿತ್ಯ ಸೇವೆ ಮಾಡುತ್ತಿದ್ದಾರೆ ಎಂದು ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಬಣ್ಣಿಸಿದರು.

ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಈ ಇಬ್ಬರನ್ನು ಮಾಜಿ ಶಾಸಕ ವಾಸು ಅವರ ನೇತೃತ್ವದಲ್ಲಿ ಬುಧವಾರ ಅಭಿನಂದಿಸಿ, ಮಾತನಾಡಿದ ಅವರು, ಸಾಮಾನ್ಯವಾಗಿ ಸಾಹಿತಿಗಳೆಂದರೆ ತಮ್ಮ ಸಾಹಿತ್ಯ ಸೇವೆಯ ಮೂಲಕ ಜನಜಾಗೃತಿ ಉಂಟು ಮಾಡುವ ಕೆಲಸ ಮಾಡಬೇಕು. ಆದರೆ ಕೆಲವರು ಪ್ರಶಸ್ತಿ, ಸ್ಥಾನಮಾನಕ್ಕಾಗಿ ಅದನ್ನು ಮೀರಿ ಯಾವುದೋ ಪಕ್ಷದ ಪರ ಪ್ರಚಾರ ಮಾಡುತ್ತಾರೆ. ಪ್ರೊ.ನಾಗಣ್ಣ ಹಾಗೂ ಡಾ.ಕಬ್ಬಿನಾಲೆಯವರು ಎಂದೂ ಆ ಗೆರೆ ದಾಟಿದವರಲ್ಲ ಎಂದರು.

ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಅಪಾರ ಪಾಂಡಿತ್ಯ ಹೊಂದಿರುವ ಪ್ರೊ.ಸಿ. ನಾಗಣ್ಣ ಅವರು ಇಡೀ ರಾಜ್ಯದಲ್ಲಿಯೇ ಭಾಷಾಂತರಕಾರರಲ್ಲಿ ಮೊದಲ ಸಾಲಿನಲ್ಲಿ ನಿಲ್ಲುತ್ತಾರೆ. ಅದೇ ರೀತಿ ಡಾ.ಭಾರದ್ವಾಜ ಅವರು ದಾಸ ಸಾಹಿತ್ಯದ ಬಗ್ಗೆ ಸಂಶೋಧಕರಾಗಿ ಹೆಸರು ಮಾಡಿದ್ದಾರೆ ಎಂದರು.

ಮಾಜಿ ಶಾಸಕ ವಾಸು ಮಾತನಾಡಿ, ಈ ಇಬ್ಬರು ಮಹನೀಯರನ್ನು ಗೌರವಿಸುವ ಮೂಲಕ ನಮ್ಮನ್ನು ನಾವೇ ಗೌರವಿಸಿಕೊಂಡಂತೆ ಆಗಿದೆ ಎಂದರು. ಪ್ರೊ.ಸಿ. ನಾಗಣ್ಣ ಹಾಗೂ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ ಮಾತನಾಡಿ, ಕೃತಜ್ಞತೆ ಸಲ್ಲಿಸಿದರು.

ಅರಣ್ಯ ಇಲಾಖೆ ನಿವೃತ್ತ ಕಾರ್ಯದರ್ಶಿ ಎ.ಸಿ.ಲಕ್ಷ್ಮಣ, ತುಮಕೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ವೈ.ಎಸ್. ಸಿದ್ದೇಗೌಡ, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್, ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕರಾದ ಡಾ.ಎನ್.ಎಸ್. ತಾರಾನಾಥ್, ಡಾ. ಸೋಮಶೇಖರ್‌ಗೌಡ. ಡಾ.ನೀಲಗಿರಿ ಎಂ. ತಳವಾರ, ಡಾ.ಜಯಲಕ್ಷ್ಮೀ ಸೀತಾಪುರ, ಮಾಜಿ ಮೇಯರ್‌ಗಳಾದ ಮೋದಾಮಣಿ, ಬಿ.ಕೆ. ಪ್ರಕಾಶ್, ಎಂ.ಸಿ. ಚಿಕ್ಕಣ್ಣ, ಪುಷ್ಪಲತಾ ಜಗನ್ನಾಥ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಕಾರ್ಯದರ್ಶಿ ಪಿ. ವಿಶ್ವನಾಥ್, ಮುಡಾ ಮಾಜಿ ಅಧ್ಯಕ್ಷ ಸಿ. ಬಸವೇಗೌಡ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಪಾಲಿಕೆ ಮಾಜಿ ಸದಸ್ಯರಾದ ಪಿ. ಶ್ರೀಕಂಠಮೂರ್ತಿ, ಸಿದ್ದಪ್ಪ, ಕೆ.ವಿ. ಮಲ್ಲೇಶ್,ಪಿ. ಪ್ರಶಾಂತ್ ಗೌಡ, ಕೆ.ವಿ. ಶ್ರೀಧರ್, ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಸಿ.ಕೆ. ಮಹೇಂದ್ರ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಜಿಎಸ್‌ಎಸ್ ಫೌಂಡೇಷನ್‌ನ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್, ಜ್ಞಾನಬುತ್ತಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣಗೌಡ, ಮಹಾಜನ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ಎಚ್.ಆರ್. ತಿಮ್ಮೇಗೌಡ, ಕೆ.ಟಿ. ಕೃಷ್ಣಪ್ಪ, ಪಾಲಹಳ್ಳಿ ರಾಮಕೃಷ್ಣ, ನಿವೃತ್ತ ಪೊಲೀಸ್ ಅಧಿಕಾರಿಗಳಾದ ಬಿ.ಪಿ.ಸುರೇಶ್, ಜಿ.ಎನ್. ಮೋಹನ್, ಜೆ.ಬಿ.ರಂಗಸ್ವಾಮಿ, ಮುಖಂಡರಾದ ಎಲ್‌ಐಸಿ ಚಂದ್ರಶೇಖರ್, ಪಡುವಾರಹಳ್ಳಿ ಮಂಜುನಾಥ್, ಪ್ರದೀಪ್ ಕುಮಾರ್, ಯೋಗಾನರಸಿಂಹೇಗೌಡ, ಎಂ.ಎನ್. ಸ್ವರೂಪ್, ಸಿ.ಆರ್.ಹಿಮಾಂಶು, ಹೇಮಾ ನಂದೀಶ್ ಮತ್ತಿತರರು ಇದ್ದರು.

ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯಿಂದ ತುರ್ತು ವೈದ್ಯಕೀಯ ಸೇವೆಗೆ ಅತ್ಯಾಧುನಿಕ 5ಜಿ ಆಂಬುಲೆನ್ಸ್



ಮೈಸೂರು, ಡಿ. 13–ಮಲ್ಟಿ ಸ್ಪೆಷಾಲಿಟಿ ಆರೋಗ್ಯಸೇವಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯು ಆರೋಗ್ಯ ತಂತ್ರಜ್ಞಾನ ಕ್ಷೇತ್ರದ ಸ್ಟಾರ್ಟ್‌ಅಪ್ ಸಂಸ್ಥೆಯಾದ ಲೈಫ್‌ಸೈನ್ಸ್ ಸಹಯೋಗದಲ್ಲಿ ತುರ್ತು ವೈದ್ಯಕೀಯ ಸೇವೆಗಳನ್ನು ಜನರ ಬಳಿಗೇ ಕೊಂಡೊಯ್ಯಲು ಮೊತ್ತಮೊದಲ ಬಾರಿಗೆ ಅತ್ಯಾಧುನಿಕ 5ಜಿ ಆಂಬುಲೆನ್ಸ್ ಆರಂಭಿಸಿದೆ. ಈ ಸಹಯೋಗವು ಎಲ್ಲರಿಗೂ ಗುಣಮಟ್ಟದ ಆರೋಗ್ಯಸೇವೆ ನೀಡುವ ನಿಟ್ಟಿನಲ್ಲಿ ಗಮನಾರ್ಹ ಹೆಜ್ಜೆಯಾಗಿದೆ. 5ಜಿ ಆಂಬುಲೆನ್ಸ್ ಅನ್ನು ಮೈಸೂರಿನ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಚಾಮರಾಜ ವೃತ್ತದ ಸಮೀಪ ಲೋಕಾರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಡಾ.ಮನಿಶ್ ಮಟ್ಟೂ, ಸಿಇಒ–ಅಪೋಲೊ ಆಸ್ಪತ್ರೆ ಕರ್ನಾಟಕ ಪ್ರದೇಶ; ಎನ್.ಜಿ. ಭರತೀಶ ರೆಡ್ಡಿ, ಉಪಾಧ್ಯಕ್ಷರು & ಯೂನಿಟ್ ಹೆಡ್, ಅಪೋಲೊ ಬಿಜಿಎಸ್ ಆಸ್ಪತ್ರೆ, ಮೈಸೂರು; ಪ್ರೊ. ಡಾ.ವೆಂಕಟೇಶ್. ಪ್ರಾದೇಶಿಕ ನಿರ್ದೇಶಕರು–ತುರ್ತು ಸೇವೆ–ಅಪೋಲೊ ಆಸ್ಪತ್ರೆ ಕರ್ನಾಟಕ ಪ್ರದೇಶ; ಬಿ.ರಮೇಶ್, ಐಪಿಎಸ್, ಪೊಲೀಸ್ ಕಮಿಷನರ್; ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್; ಹರಿ ಸುಬ್ರಮಣಿಯನ್, ಸ್ಥಾಪಕರು ಮತ್ತು ನಿರ್ದೇಶಕರು; ಡಾ.ಕುಮಾರಸ್ವಾಮಿ ಪಿ.ಸಿ. (ಡಿಹೆಚ್‌ಒ); ಡಾ.ಜಾವಿದ್ ನಹಿಮ್ ಕೆ. ಮಹಾನ್ ಚೇರ್ಮನ್, ಮೈಸೂರು; ಡಾ.ಮನಿಶ್ ಮಟ್ಟೂ, ಸಿಇಒ–ಅಪೋಲೊ ಕರ್ನಾಟಕ ಪ್ರದೇಶ; ಸ್ಯಾವ್ ಚೆರಿಯನ್, ಮುಖ್ಯಸ್ಥರು, ಸಿಐಐ–ಮೈಸೂರು ಉಪಸ್ಥಿತರಿದ್ದರು.

5ಜಿ ಸಂಪರ್ಕ ಹೊಂದಿದ ಸ್ಮಾರ್ಟ್ ಆಂಬುಲೆನ್ಸ್ ತನ್ನದೇ ಆದ ಇಂಟಲಿಜೆಂಟ್ ಆಂಬುಲೆನ್ಸ್ ಮಾದರಿಯ ಹೊಸ ಮಾದರಿಯ ಆಂಬುಲೆನ್ಸ್ ಆಗಿದ್ದು, ಅತ್ಯಾಧುನಿಕ ತಂತ್ರಜ್ಞಾನ ಮತ್ತು ಸಮಗ್ರ ವೈದ್ಯಕೀಯ ಸೌಲಭ್ಯಗಳನ್ನು ಒಳಗೊಂಡಿದೆ. ಈ ಜೀವ ರಕ್ಷಣೆಯ ವಾಹನವು ಸಾಗಣೆಯ ವೇಳೆಯೇ ಗಂಭೀರ ಸ್ಥಿತಿಯಲ್ಲಿರುವ ರೋಗಿಗಳನ್ನು ಮಾನಿಟರ್ ಮಾಡುವುದಲ್ಲದೇ, ಸಾಗಣೆ ವೇಳೆಯೇ ಇದು ದೂರದ ಸ್ಥಳಗಳಿಂದಲೇ ಸ್ಮಾರ್ಟ್ ಕ್ಲಿನಿಕ್ ಆಗಿ ಕಾರ್ಯನಿರ್ವಹಿಸುತ್ತದೆ. ಆ ಮೂಲಕ ಆರೋಗ್ಯ ಸೇವಾ ತಂತ್ರಜ್ಞಾನದಿಂದ ಸಾಧ್ಯವಾಗುವಂಥ ಎಲ್ಲಾ ಸಾಮರ್ಥ್ಯವನ್ನೂ ತಲುಪುವ ಅಪೋಲೊ ಬದ್ಧತೆಯನ್ನು ಇದು ಸಾಬೀತುಪಡಿಸುತ್ತದೆ.

ಈ ವೇಳೆ ಎನ್.ಜಿ. ಭರತೀಶ ರೆಡ್ಡಿ, ಉಪಾಧ್ಯಕ್ಷರು & ಯೂನಿಟ್ ಹೆಡ್, ಅಪೋಲೊ ಬಿಜಿಎಸ್ ಆಸ್ಪತ್ರೆ, ಮೈಸೂರು ಮಾತನಾಡಿ, ಆರೋಗ್ಯಸೇವಾ ಕ್ಷೇತ್ರದ ಹೊಸತನದ ಹರಿಕಾರ ಅಪೋಲೊ ಆಸ್ಪತ್ರೆಯು ಅಪೋಲೊ 5ಜಿ ಆಂಬುಲೆನ್ಸ್ ಅನ್ನು ಪರಿಚಯಿಸಲು ಹೆಮ್ಮೆಪಡುತ್ತದೆ. ಇದು ತುರ್ತು ವೈದ್ಯಕೀಯ ಸೇವೆಗಳನ್ನು ಜನರ ಬಳಿಗೆ ಕೊಂಡೊಯ್ಯಲು 5ಜಿ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಮೂಲಕ ಹೊಸತನಕ್ಕೆ ನಾಂದಿ ಹಾಡಿದೆ. ಈ ಅತ್ಯಾಧುನಿಕ ಆಂಬುಲೆನ್ಸ್ ಭವಿಷ್ಯದ ಆರೋಗ್ಯ ಸೇವೆಯ ಮಹತ್ವದ ಹೆಜ್ಜೆ ಎನಿಸಿದೆ ಎಂದರು.

ಚರಂಡಿ, ಫುಟ್‌ಪಾತ್ ನಿರ್ಮಾಣವಾಗದ ರಸ್ತೆ

ಕೊಡಗರಹಳ್ಳಿ-ಕಂಬಿಬಾಣೆ-ಚಿಕ್ಲಿಹೊಳೆ ಸಂಪರ್ಕ ರಸ್ತೆಯಲ್ಲಿ ಸವಾರರಿಗೆ ಭೀತಿ

ಸುಂಟಿಕೊಪ್ಪ, ಡಿ.13– ಕೊಡಗರಹಳ್ಳಿ–ಕಂಬಿಬಾಣೆ–ಚಿಕ್ಲಿಹೊಳೆ ಸಂಪರ್ಕ ರಸ್ತೆಗೆ ಕಾಂಕ್ರಿಟ್ ಹಾಕಿದ್ದು, ಆದರೆ ರಸ್ತೆ ನಿರ್ಮಾಣದ ವೇಳೆ ಚರಂಡಿ ಮತ್ತು ಫುಟ್‌ಪಾತ್ ನಿರ್ಮಿಸದೆ ಪಾದಚಾರಿಗಳು ಮತ್ತು ವಾಹನ ಸವಾರರಿಗೆ ಪ್ರಾಣಾಪಾಯದ ಭೀತಿ ತಂದೊಡ್ಡಿದೆ.

ದಶಕಗಳ ಕಾಲದಿಂದ ಅತ್ಯಂತ ದುಸ್ಥಿತಿಗೆ ಒಳಗಾಗಿ ಮನವಿ, ರಸ್ತೆತಡೆ ಸೇರಿದಂತೆ ಮುಂತಾದ ತೀವ್ರ ಹೋರಾಟಗಳಿಂದ ಸದಾ ಸುದ್ದಿಯಲ್ಲಿದ್ದ ಈ ರಸ್ತೆಗೆ ಈಗಾಗಲೇ 1.25 ಕೋಟಿ ರೂ. ವೆಚ್ಚದಲ್ಲಿ ಸುಮಾರು 11 ಕಿ.ಮೀ. ಡಾಂಬರೀಕರಣ ಮಾಡಲಾಗಿದೆ. 2 ಹಂತದಲ್ಲಿ ಕಾಮಗಾರಿ ಮುಕ್ತಾಯವಾಗಿದೆ. ಕಾವೇರಿ ನೀರಾವರಿ ನಿಗಮದ ಹಾರಂಗಿ ಜಲಾಶಯ ಯೋಜನೆಯಡಿ ಈ ರಸ್ತೆಯನ್ನು ರಾಜ್ಯ ಹೆದ್ದಾರಿ ಸಂಪರ್ಕ ಎಂದು ಹೇಳಲಾಗಿದ್ದು, ವರ್ಷಪ್ರತಿ ರಸ್ತೆ ನಿರ್ವಹಣೆಯ ಜವಾಬ್ದಾರಿ ನಿಗಮಕ್ಕೆ ಸೇರಿದೆ.

ಈ ರಸ್ತೆಯಲ್ಲಿ ಸರ್ಕಾರಿ, ಶಾಲಾ ಬಸ್‌ಗಳು, ಸರಕು ವಾಹನಗಳು ಇತ್ತೀಚೆಗೆ ಹೆಚ್ಚಾಗಿವೆ. ಈ ಭಾಗದ ಜನರು ದಿನ ನಿತ್ಯ ಅಪಾಯಕಾರಿ ಸನ್ನಿವೇಶದಲ್ಲೇ ಸಂಚರಿಸಲಿದ್ದಾರೆ. ಪ್ರವಾಸಿ ವಾಹನಗಳ ಅತಿ ವೇಗ ಮತ್ತು ಬೇಜವಾಬ್ದಾರಿ ತನದ ಪಾರ್ಕಿಂಗ್‌ನಿಂದಾಗಿ ಈ ರಸ್ತೆಯಲ್ಲಿ ಪ್ರಯಾಣ ಪ್ರಯಾಸವಾಗಿದೆ.



ಈ ರಸ್ತೆ ಚಿಕ್ಲಿಹೊಳೆ ಜಲಾಶಯ ಮತ್ತು ದುಬಾರಿ ಆನೆ ಶಿಬಿರಕ್ಕೆ ಹತ್ತಿರದ ಮಾರ್ಗವಾಗಿದ್ದು, ಪ್ರವಾಸಿಗರು ಕೊಡಗಿನ ಈ 2 ಪ್ರವಾಸಿ ತಾಣಗಳಿಗೆ ಭೇಟಿ ನೀಡುವುದಿಲ್ಲ. ಹೀಗಾಗಿ ವಾರಾಂತ್ಯ ಮತ್ತು ಸರಣಿ ರಜಾ ದಿನಗಳ ಸಂದರ್ಭ ಈ ರಸ್ತೆಯಲ್ಲಿ ದಿನದ 24 ಗಂಟೆ ವಾಹನಗಳ ಸಂಚಾರ ಹೆಚ್ಚಿರುತ್ತದೆ. ಕೊಡಗರಹಳ್ಳಿ, ಉಪ್ಪುತೋಡು ಕಂಬಿಬಾಣೆ ರಸ್ತೆಯಲ್ಲಿ ಕಾಡಾನೆ, ಕಾಡುಕೋಣ, ಕಾಡುಹಂದಿಗಳು ರಸ್ತೆ ದಾಟುವ ಮತ್ತು ರಸ್ತೆಯಲ್ಲಿ ನಿಲ್ಲುವ ದೃಶ್ಯಾವಳಿಗಳು ಸಾಮಾನ್ಯವಾಗಿವೆ. ರಸ್ತೆ ವಿಸ್ತರಣೆ, ಫುಟ್‌ಪಾತ್ ಮತ್ತು ಚರಂಡಿ ನಿರ್ಮಾಣವಾದರೆ, ವಾಹನ ಸವಾರರಿಗೆ ಅನುಕೂಲವಾಗಿದೆ.

ಫುಟ್‌ಪಾತ್ ಮತ್ತು ಚರಂಡಿ ನಿರ್ವಹಿಸದೆ, ರಸ್ತೆಯ 2 ಬದಿಗಳಲ್ಲಿ ಅವೈಜ್ಞಾನಿಕವಾಗಿ ಮಣ್ಣು ತುಂಬಿರುವುದರಿಂದ ಭಾರಿ ಅನಾಹುತ ಸಂಭವಿಸಲಿದೆ. ಮುಖ್ಯವಾಗಿ ದ್ವಿಚಕ್ರ ವಾಹನ ಸವಾರರಿಗೆ ಪ್ರಾಣಾಪಾಯ ಕಟ್ಟಿಟ್ಟಬುತ್ತಿ ಎನ್ನುವಂತಿದೆ. ಈ ಹಿನ್ನೆಲೆಯಲ್ಲಿ ಕನಿಷ್ಠ ಮಾನವೀಯ ನೆಲೆಯಲ್ಲಾದರೂ ವೈಜ್ಞಾನಿಕವಾಗಿ ರಸ್ತೆ ವಿಸ್ತರಣೆ, ಫುಟ್‌ಪಾತ್ ಹಾಗೂ ಚರಂಡಿ ನಿರ್ಮಿಸಬೇಕಿದೆ.

ಸರ್ಕಾರ, ಜನಪ್ರತಿನಿಧಿಗಳು ಹಾಗೂ ಸಂಬಂಧಿಸಿದ ಇಲಾಖೆಗಳು ರಸ್ತೆ ಪಕ್ಕದ ಮಾಲೀಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾಲಮಿತಿಯಲ್ಲಿ ಪರಿಹಾರ ನೀಡಿ ಭೂಸ್ವಾಧೀನ ಪ್ರಕ್ರಿಯೆ ಮೂಲಕ ಸೂಕ್ತ ಕಾಮಗಾರಿ ನಿರ್ವಹಿಸಿದರೆ ಅನಾಹುತಗಳನ್ನು ತಪ್ಪಿಸಬಹುದು ಎಂದು ಕಂಬಿಬಾಣೆ ಗ್ರಾಮ ಪಂಚಾಯಿತಿ ಸದಸ್ಯ ಆರ್.ಆರ್.ಮೋಹನ್ ಒತ್ತಾಯಿಸಿದ್ದಾರೆ.

> ರಸ್ತೆ ಬದಿಗೆ ಚರಂಡಿ ಹಾಗೂ ಫುಟ್‌ಪಾತ್‌ಗೆ ಹಾಕಲಾಗಿರುವ ಮಣ್ಣು ಅವೈಜ್ಞಾನಿಕವಾಗಿದೆ. ಈ ರಸ್ತೆಯಲ್ಲಿ ವಾಹನ ಚಾಲನೆ ಸಂದರ್ಭ ಅವಘಡಗಳಾಗಿರುವ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ. ಮಣ್ಣು ತೆರವುಗೊಳಿಸಿ ವೈಜ್ಞಾನಿಕವಾಗಿ ಮಣ್ಣು ಹಾಕುವ ಮತ್ತು ವಾಹನ ಸವಾರರಿಗೆ ತೊಂದರೆಯಾಗದ ರೀತಿಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಮೇಲಾಧಿಕಾರಿಗಳಿಗೆ ಸೂಕ್ತ ಪ್ರಸ್ತಾವನೆ ಕಳುಹಿಸಲಾಗುವುದು.
>
> -ಕಿರಣ್‌ಕುಮಾರ್,
> ಇಂಜಿನಿಯರ್, ಕಾವೇರಿ ನೀರಾವರಿ ನಿಗಮದ ಹಾರಂಗಿ ಜಲಾಶಯ ವಿಭಾಗ

ಹರಾಜು ದಿನಾಂಕ ರದ್ದುಪಡಿಸುವಂತೆ ಮನವಿ ಸಲ್ಲಿಕೆ



ಮಡಿಕೇರಿ, ಡಿ.13–ಸೋಮವಾರಪೇಟೆ ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆ ನಡೆಸದೆ ವಾಣಿಜ್ಯ ಮಳಿಗೆಗಳ ಹರಾಜು ಪ್ರಕ್ರಿಯೆಗೆ ದಿನಾಂಕ ನಿಗದಿಪಡಿಸಿರುವ ನಿರ್ಣಯವನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿ ಪಪಂ ಸದಸ್ಯರು ಹೆಚ್ಚುವರಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಸೆ.13ರಂದು ಪಪಂ ಸಾಮಾನ್ಯ ಸಭೆ ಆಡಳಿತಾಧಿಕಾರಿಯಾದ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಪಪಂ ಸಭಾಂಗಣದಲ್ಲಿ ನಡೆದಿತ್ತು. ಈ ಸಭೆಯಲ್ಲಿ ಪಟ್ಟಣದ ವಾಣಿಜ್ಯ ಮಳಿಗೆಗಳ ಹರಾಜಿಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಲಾಯಿತು. ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ವ್ಯಾಪಾರ ಮಾಡುತ್ತಿರುವವರನ್ನೇ ಕೆಲವೊಂದು ಷರತ್ತುಗಳನ್ನು ವಿಧಿಸಿ ಮುಂದುವರೆಸಲು ಸರ್ಕಾರಕ್ಕೆ ಪತ್ರ ಬರೆದು ಅಭಿಪ್ರಾಯ ಕೋರುವಂತೆ ತೀರ್ಮಾನಿಸಲಾಗಿತ್ತು. ಈ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚೆ ನಡೆಸುವಂತೆ ನಿರ್ಧಾರ ಕೈಗೊಳ್ಳಲಾಗಿತ್ತು.

ಆದರೆ, ಅಧಿಕಾರಿಗಳು ಇತ್ತೀಚೆಗೆ ಮಳಿಗೆಗಳ ಹರಾಜು ಪ್ರಕಟಣೆ ನೀಡಿದ್ದಾರೆ. ಅಂದಿನ ಸಾಮಾನ್ಯ ಸಭೆಯಲ್ಲಿ ಸದಸ್ಯರು ಹರಾಜು ನಡೆಸುವಂತೆ ನಿರ್ಣಯ ಮಾಡಿರುವುದಿಲ್ಲ. ಮತ್ತೊಮ್ಮೆ ಸಭೆ ನಡೆಸದೆ ಅಧಿಕಾರಿಗಳೇ ಏಕಮುಖವಾಗಿ ಹರಾಜು ನಡೆಸುವ ನಿರ್ಣಯ ದಾಖಲಿಸಿದ್ದಾರೆ ಎಂದು ಸದಸ್ಯರು ಮನವಿಯಲ್ಲಿ ಆರೋಪಿಸಿದರು.

ನ.17 ಮತ್ತು 22ರಂದು ಸಭೆ ಕರೆದು ವಿನಾಕಾರಣ ಮುಂದೂಡಲಾಗಿದೆ. ಇದರಿಂದ ತಪ್ಪಾಗಿ ನಮೂದಿಸಿರುವ ನಿರ್ಣಯದ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಸಿಕ್ಕಿಲ್ಲ. ಇದೀಗ ಹರಾಜು ಪ್ರಕ್ರಿಯೆಗೆ ಮುಂದಾಗಿರುವುದರಿಂದ ಸಾರ್ವಜನಿಕ ವಲಯದಲ್ಲಿ ಪಪಂ ಸದಸ್ಯರ ಬಗ್ಗೆ ತಪ್ಪು ಅಭಿಪ್ರಾಯ ವ್ಯಕ್ತವಾಗುತ್ತಿದೆ. ಆದ್ದರಿಂದ ಆ ನಿರ್ಣಯವನ್ನು ರದ್ದುಪಡಿಸಿ, ಹರಾಜು ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು ಮತ್ತು ತಕ್ಷಣ ಸಾಮಾನ್ಯ ಸಭೆ ಕರೆಯುವಂತೆ ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಒತ್ತಾಯಿಸಿದರು.

ಡಿ.15ರಿಂದ ಗ್ರಾಮವಾರು ಸರ್ವೆ

ಮಡಿಕೇರಿ, ಡಿ.13– ರಾಜ್ಯದ ಐತಿಹಾಸಿಕ ಸ್ಮಾರಕಗಳ ಸರ್ವೆ ಕಾರ್ಯ ಕೈಗೊಂಡಿದ್ದು, 2023–24ನೇ ಸಾಲಿನ ವಿರಾಜಪೇಟೆ ಮತ್ತು ಪೊನ್ನಂಪೇಟೆ ತಾಲೂಕುಗಳನ್ನು ಆಯ್ಕೆ ಮಾಡಲಾಗಿದ್ದು, ಸರ್ವೆ ಕಾರ್ಯ ಡಿ.15ರಿಂದ ಫೆ.14ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್ ಬಿ.ಪಿ.ರೇಖಾ ತಿಳಿಸಿದ್ದಾರೆ.

ರಾಷ್ಟ್ರಮಟ್ಟದ ಹಾಕಿ ಪಂದ್ಯಾವಳಿಗೆ ಆಯ್ಕೆ



ಮಡಿಕೇರಿ, ಡಿ.13– ಇತ್ತೀಚೆಗೆ ಗದಗದ ಮಹಾತ್ಮಾ ಗಾಂಧಿ ಹಾಕಿ ಕ್ರೀಡಾಂಗಣದಲ್ಲಿ ನಡೆದ 2023–24ನೇ ಸಾಲಿನ ಪದವಿಪೂರ್ವ ಕಾಲೇಜಿನ ರಾಜ್ಯ ಮಟ್ಟದ ಹಾಕಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ ತಂಡ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದೆ. ಪಂಜಾಬ್‌ನ ಜಲಂಧರ್‌ನಲ್ಲಿ ನಡೆಯುವ ರಾಷ್ಟ್ರಮಟ್ಟದ ಹಾಕಿ ಪಂದ್ಯಾವಳಿಗೆ ಕಾಲೇಜಿನ 18 ಬಾಲಕಿಯರ ತಂಡ ಆಯ್ಕೆಯಾಗಿದೆ ಎಂದು ಪ್ರಾಂಶುಪಾಲ ವಿಜಯ್ ತಿಳಿಸಿದ್ದಾರೆ. ಬಾಲಕಿಯರ ಸಾಧನೆಗೆ ಉಪನ್ಯಾಸಕರು, ಸಿಬ್ಬಂದಿ ಅಭಿನಂದಿಸಿದ್ದಾರೆ.

ಎಡಮಕ್ಕಿ ಅಯ್ಯಪ್ಪಸ್ವಾಮಿ ದೇವಾಲಯ ವಾರ್ಷಿಕೋತ್ಸವ

ವಿರಾಜಪೇಟೆ, ಡಿ.13–ವಿರಾಜಪೇಟೆ ಬಳಿಯ ಹೆಗ್ಗಳ ಗ್ರಾಮದ ಎಡಮಕ್ಕಿ ಶ್ರೀ ಅಯ್ಯಪ್ಪಸ್ವಾಮಿ ದೇವಾಲಯದ ವಾರ್ಷಿಕ ಮಹೋತ್ಸವ ಹಾಗೂ ದೀಪಾರಾಧನೆ ಪೂಜಾ ಕಾರ್ಯ ಎರಡು ದಿನ ವಿಜೃಂಭಣೆಯಿಂದ ನಡೆಯಿತು.

ಮಹೋತ್ಸವದ ಅಂಗವಾಗಿ ಗಣಪತಿ ಹೋಮ, ಧ್ವಜಾರೋಹಣ ನೆರವೇರಿಸಲಾಯಿತು. ಬಳಿಕ ಅಯ್ಯಪ್ಪಸ್ವಾಮಿಗೆ ವಿಶೇಷ ಪೂಜೆ, ದೀಪಾರಾಧನೆ ಹಾಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ದೇವಾಲಯದಲ್ಲಿ ದೀಪಾರಾಧನೆ ನಂತರ ಎಡಮಕ್ಕಿ ಸಾರ್ವಜನಿಕ ಮೈದಾನದಿಂದ ತಾಲಪ್ಪೊಲಿ ಮೆರವಣಿಗೆ ನಡೆಯಿತು. ಮಾನಂದವಾಡಿಯ ಶ್ರೀ ಭಗವತಿ ಚಂಡೆ ವಾದ್ಯಸೇವೆ, ಸ್ಥಳೀಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಮಹೇಶ್ ಮಹಿ ಕೂರ್ಗ್ ಅವರಿಂದ ಸಿಡಿಮದ್ದು ಪ್ರದರ್ಶನ ನಡೆಯಿತು.

ಮುಖ್ಯತಂತ್ರಿ ಬ್ರಹ್ಮಶ್ರೀ ಮುಳ್ಳಪಲ್ಲಿ ಕೃಷ್ಣನ್ ನಂಬೂದಿರಿ, ಅರ್ಚಕರಾದ ವೇಣುಗೋಪಾಲ್ ಭಟ್ ನೇತೃತ್ವದಲ್ಲಿ ಪೂಜಾ ಕಾರ್ಯ ನಡೆಯಿತು. ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಹಾಗೂ ನೂರಾರು ಭಕ್ತರು ನೆರೆದಿದ್ದರು.

ನೀಹಾ ನಿಧನ



ಕುಶಾಲನಗರ, ಡಿ.13– ಪಟ್ಟಣದ ಫಾತಿಮಾ ಪ್ರೌಢಶಾಲೆಯ ವಿದ್ಯಾರ್ಥಿ ಹಾಗೂ ಮುಳ್ಳುಸೋಗೆ ಗ್ರಾಮದ ನಾಸಿರ್ ಹಾಗೂ ನಸೀರಾ ದಂಪತಿಯ ಪುತ್ರಿ ನೀಹಾ(14) ಅನಾರೋಗ್ಯದಿಂದ ಬುಧವಾರ ನಿಧನರಾದರು. ಮೃತ ಬಾಲಕಿ ತಂದೆ-ತಾಯಿ ಇಬ್ಬರು ಸಹೋದರಿಯರನ್ನು ಅಗಲಿದ್ದಾಳೆ. ಮುಳ್ಳುಸೋಗೆ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಶಾಲೆಯ ಸಂಚಾಲಕರು, ಮುಖ್ಯ ಶಿಕ್ಷಕರು, ಶಿಕ್ಷಕರು, ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ.

ಸೈಕಲ್ ಮೂಲಕ ಪರಿಸರ ಜಾಗೃತಿ



ಸಿದ್ದಾಪುರ, ಡಿ.13– ಕಳೆದ ಹತ್ತು ತಿಂಗಳಿಂದ ಪರಿಸರ ಸಂರಕ್ಷಣೆಗಾಗಿ ದೇಶದ ವಿವಿಧೆಡೆ ಸೈಕಲ್ ಪ್ರವಾಸ ಕೈಗೊಂಡಿವ ಮಹಾರಾಷ್ಟ್ರದ ರೂಪೇಶ್ ರಾಯಿ ಅವರು ವಿರಾಜಪೇಟೆ ತಾಲೂಕಿನ ಸಿದ್ದಾಪುರ ಗ್ರಾಮ ಪಂಚಾಯಿತಿ ಸಹಕಾರದೊಂದಿಗೆ ಇಲ್ಲಿನ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಪರಿಸರ ಜಾಗೃತಿ ಮೂಡಿಸಿ, ನಂತರ ಸಂತ ಅನ್ನಮ್ಮ ಶಾಲೆಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಕಳೆದ ಫೆ.18ರಂದು ಮಹಾಶಿವರಾತ್ರಿ ದಿನ ದೆಹಲಿಯ ನೋಯ್ಡಾದಿಂದ ಹೀರೋ ಸೈಕಲ್‌ನೊಂದಿಗೆ ಪ್ರವಾಸ ಪ್ರಾರಂಭಿಸಿರುವ ರೂಪೇಶ್ ರಾಯಿ, ಮಹಾರಾಷ್ಟ್ರ, ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್, ತಮಿಳುನಾಡು, ಕೇರಳ, ಗೋವಾ ಮುಗಿಸಿ, ಇದೀಗ ಕರ್ನಾಟಕದ ಕೊಡಗು ಜಿಲ್ಲೆ ಪ್ರವೇಶಿಸಿದ್ದಾರೆ.

ಶಾಲಾ–ಕಾಲೇಜು, ಸಾರ್ವಜನಿಕರು ಸೇರಿದಂತೆ ಮೂರು ಲಕ್ಷಕ್ಕೂ ಹೆಚ್ಚು ಜನರನ್ನು ನೇರವಾಗಿ ಭೇಟಿ ಮಾಡಿ, ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ. ಇದೇ ವೇಳೆ ಕೊಡಗಿನ ಜನರ ಪರಿಸರ ಪ್ರೀತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ರೂಪೇಶ್ ರಾಯಿ ದೇಶದಲ್ಲಿ ಒಟ್ಟು 12 ಸಾವಿರ ಕಿ.ಮೀ. ಸೈಕಲ್ ಪ್ರವಾಸ ಕೈಗೊಂಡಿದ್ದು, ಕೊಡಗಿನಿಂದ ಹಾಸನ ಮಾರ್ಗವಾಗಿ ಸಾಗಿ ಜ.26ರಂದು ಮಹಾರಾಷ್ಟ್ರದ ಅಣ್ಣಾ ಹಜಾರೆ ಗ್ರಾಮದಲ್ಲಿ ಪ್ರವಾಸ ಅಂತ್ಯಗೊಳಿಸಲಿದ್ದಾರೆ. ಇವರು ಮಹಾರಾಷ್ಟ್ರದಲ್ಲಿ ನೆಲೆಸಿರುವ ವಾರಣಾಸಿ ಮೂಲದ ರೂಪೇಶ್ ರಾಯಿ, ಉತ್ತರಾಖಂಡದ ಬಾಕ್ರಿಚಾಪ್ ಆಗ್ರೋ ಟೂರಿಸಂ ಮತ್ತು ನ್ಯಾಚುರಲ್ ಪ್ರಾಡಕ್ಟ್‌ನ ಮಾಲೀಕರಾಗಿದ್ದಾರೆ.

ಡಿ.31ಕ್ಕೆ ಜಿಲ್ಲಾಮಟ್ಟದ ವಾಲಿಬಾಲ್

ಗೋಣಿಕೊಪ್ಪ, ಡಿ.13–ಚೌಡೇಶ್ವರಿ ಯುವಕ ಸಂಘದ ವತಿಯಿಂದ ಡಿ.31ರಂದು ತಿತಿಮತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿನಾಯಕ ನಗರದ ಮೈದಾನದಲ್ಲಿ ಜಿಲ್ಲಾಮಟ್ಟದ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಶ್ರೀನಿವಾಸ್ ತಿಳಿಸಿದರು.

ಅಂದು ಬೆಳಗ್ಗೆ 10 ಗಂಟೆಗೆ ಪಂದ್ಯ ಆರಂಭವಾಗಲಿದ್ದು, ಸುಮಾರು 20 ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ. ಪಂದ್ಯಾವಳಿಯಲ್ಲಿ ಜಿಲ್ಲೆಯ ಆಟಗಾರರಿಗೆ ಮಾತ್ರ ಅವಕಾಶವಿದ್ದು, ಆಟಗಾರರು ಆಧಾರ್ ಕಾರ್ಡ್ ನೀಡಬೇಕು. ವಿಜೇತ 4 ತಂಡಗಳಿಗೆ ಬಹುಮಾನ ನೀಡಲಾಗುವುದು. ಮಾಹಿತಿಗೆ ಮೊ.ಸಂ: 9741203113 ಅಥವಾ ಮೊ.ಸಂ: 8296513337 ಅನ್ನು ಸಂಪರ್ಕಿಸಬಹುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಅಪ್ರೋಸ್, ಸಹ ಕಾರ್ಯದರ್ಶಿ ಮುಸ್ತಫಾ, ಖಜಾಂಚಿ ರವಿಶಂಕರ್, ಸದಸ್ಯ ಬಷೀರ್ ಇದ್ದರು.

ಗೂಡ್ಸ್ ವಾಹನ ಪಲ್ಟಿ: 20ಕ್ಕೂ ಹೆಚ್ಚು ಮೇಕೆ, ಕುರಿ ಸಾವು



ಕೊಳ್ಳೇಗಾಲ, ಡಿ.13–ಚಾಲಕನ ನಿಯಂತ್ರಣ ತಪ್ಪಿ ಗೂಡ್ಸ್ ವಾಹನವೊಂದು ಪಲ್ಟಿ ಹೊಡೆದು 20ಕ್ಕೂ ಹೆಚ್ಚು ಕುರಿ ಮತ್ತು ಮೇಕೆಗಳು ಸಾವಿಗೀಡಾಗಿರುವ ಘಟನೆ ಬುಧವಾರ ತಾಲೂಕಿನ ಸತ್ತೇಗಾಲ ಗ್ರಾಮ ಸಮೀಪ ಜರುಗಿದೆ.

ಬಿಜಾಪುರದಿಂದ ಪ್ರಜ್ವಲ್ ಎಂಬ ಮಾಲೀಕ 85ಕ್ಕೂ ಹೆಚ್ಚು ಮೇಕೆ ಹಾಗೂ ಕುರಿಗಳನ್ನು ಮಾರಾಟಕ್ಕೆ ತೆಗೆದುಕೊಂಡು ಬರುತ್ತಿದ್ದ. ಆದರೆ, ತಾಲೂಕಿನ ಸತ್ತೇಗಾಲ ಗ್ರಾಮದ ಸಮೀಪ ಚಾಲಕನ ನಿಯಂತ್ರಣ ತಪ್ಪಿ ಗೂಡ್ಸ್ ವಾಹನ ಪಲ್ಟಿ ಹೊಡೆದಿದೆ. ಸದ್ಯ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದು, 20ಕ್ಕೂ ಹೆಚ್ಚು ಕುರಿ ಮತ್ತು ಮೇಕೆಗಳು ಮೃತಪಟ್ಟಿವೆ.

ತಕ್ಷಣ ಬಸ್ ನಿಲ್ದಾಣದಲ್ಲಿದ್ದವರು ಹಾಗೂ ಸತ್ತೇಗಾಲ ಗ್ರಾಮಸ್ಥರು ವಾಹನವನ್ನು ಮೇಲೆತ್ತಿ ಉಳಿದ ಕುರಿ ಮತ್ತು ಮೇಕೆಗಳನ್ನು ಪಾರು ಮಾಡಿದ್ದಾರೆ. ಇನ್ನು ಹತ್ತಾರು ಮೇಕೆಗಳು ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿವೆ ಎನ್ನಲಾಗಿದೆ.

ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್ಐ ಮತ್ತು ಸಿಬ್ಬಂದಿ ಭೇಟಿ ನೀಡಿ, ಸ್ಥಳ ಪರಿಶೀಲಿಸಿ ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಲೋಕ್ ಅದಾಲತ್‌ನಲ್ಲಿ 17,647 ಪ್ರಕರಣ ಇತ್ಯರ್ಥ

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ನ್ಯಾಯಾಧೀಶೆ ಬಿ.ಎಸ್.ಭಾರತಿ ಮಾಹಿತಿ



ಚಾಮರಾಜನಗರ, ಡಿ.13–ಸರ್ವರಿಗೂ ನ್ಯಾಯ ಒದಗಿಸುವ ಪರಿಕಲ್ಪನೆಯಡಿ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಈ ಬಾರಿ ನಡೆದ ಮೆಗಾ ಲೋಕ್ ಅದಾಲತ್‌ನಲ್ಲಿ 17,647 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯ ಆವರಣದ ವ್ಯಾಜ್ಯಪೂರ್ವ ಪರಿಹಾರ ಕೇಂದ್ರದಲ್ಲಿ ಬುಧವಾರ ಲೋಕ್ ಅದಾಲತ್ ಸಂಬಂಧ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಸಾಮಾನ್ಯರ ಅನುಕೂಲಕ್ಕಾಗಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದನ್ವಯ ಜಿಲ್ಲಾದ್ಯಂತ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿತ್ತು. ಎಲ್ಲಾ ಬಗೆಯ ಸಿವಿಲ್ ಹಾಗೂ ರಾಜಿಯಾಗಬಲ್ಲ ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಇನ್ನಿತರೆ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಪರಿಹಾರ ಕಂಡುಕೊಳ್ಳುವ ಸಲುವಾಗಿ ಏರ್ಪಡಿಸಲಾಗಿದ್ದ ಅದಾಲತ್‌ನಲ್ಲಿ ಈ ಬಾರಿ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಬಾರಿ ಅದಾಲತ್‌ಗೆ ಜನರಿಂದ ನಿರೀಕ್ಷೆಗಿಂತ ಹೆಚ್ಚಿನ ಸ್ಪಂದನೆ ಸಿಕ್ಕಿದೆ. ವಕೀಲರು, ಕಕ್ಷಿದಾರರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಪೊಲೀಸ್, ಕಂದಾಯ, ಕಾರ್ಮಿಕ, ಅಬಕಾರಿ ಸೇರಿದಂತೆ ವಿವಿಧ ಇಲಾಖೆಗಳು, ಬ್ಯಾಂಕ್‌ಗಳ ಸಹಕಾರವೇ ಅದಾಲತ್ ಯಶಸ್ಸಿಗೆ ಕಾರಣವಾಗಿದೆ. 10–15 ವರ್ಷಗಳಿಂದ ಇತ್ಯರ್ಥವಾಗದೇ ಬಾಕಿ ಇದ್ದ ಹಲವು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ ಅಲ್ಲದೆ ಪ್ರಕರಣಗಳು ನ್ಯಾಯಾಲಯಗಳಲ್ಲಿ ದಾಖಲಾಗುವ ಮೊದಲೇ ವ್ಯಾಜ್ಯಪೂರ್ವ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವಿಲೇವಾರಿಯಾಗಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ಇದರಿಂದ ಜನರ ಸಮಯ ಹಾಗೂ ಹಣ ಉಳಿತಾಯವಾಗಿದೆ ನ್ಯಾಯಾಲಯಗಳಿಗೂ ಪ್ರಕರಣಗಳ ಹೊರೆ ತಗ್ಗಿದೆ ಎಂದು ತಿಳಿಸಿದರು.

ನ್ಯಾಯಾಲಯದಲ್ಲಿ ಬಾಕಿ 3493 ಪ್ರಕರಣ ಹಾಗೂ 17,023 ವ್ಯಾಜ್ಯಪೂರ್ವ ಪ್ರಕರಣಗಳನ್ನು ಈ ಬಾರಿ ಕೈಗೆತ್ತಿಕೊಳ್ಳಲಾಗಿತ್ತು. ಈ ಪೈಕಿ ನ್ಯಾಯಾಲಯದ 2289 ಹಾಗೂ 15,358 ವ್ಯಾಜ್ಯಪೂರ್ವ ಪ್ರಕರಣ ಸೇರಿದಂತೆ ಒಟ್ಟು 17,647 ಪ್ರಕರಣ ಪೂರ್ಣಗೊಂಡಿವೆ. ಚಾಮರಾಜನಗರ ನ್ಯಾಯಾಲಯದಲ್ಲಿದ್ದ 703, ಯಳಂದೂರು 251, ಕೊಳ್ಳೇಗಾಲ 1101 ಹಾಗೂ ಗುಂಡ್ಲುಪೇಟೆ ನ್ಯಾಯಾಲಯದಲ್ಲಿ 234 ಪ್ರಕರಣಗಳು ಹಾಗೂ ಚಾಮರಾಜನಗರದ ನ್ಯಾಯಾಲಯದಲ್ಲಿದ್ದ 9408, ಯಳಂದೂರು 847, ಕೊಳ್ಳೇಗಾಲ 3631, ಗುಂಡ್ಲುಪೇಟೆ ನ್ಯಾಯಾಲಯದಲ್ಲಿದ್ದ 1472 ವ್ಯಾಜ್ಯಪೂರ್ವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸಲಾಗಿದೆ. ಈ ಎಲ್ಲಾ ಪ್ರಕರಣಗಳಲ್ಲಿ ಸಾಲ ಮರುಪಾವತಿ, ದಂಡ ಹಾಗೂ ಇತರೆ ಸೇರಿದಂತೆ 9,46,33,358 ರೂ. ಇತ್ಯರ್ಥಗೊಂಡಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ಪ್ರಧಾನ ಕಾರ್ಯದರ್ಶಿ ಎನ್.ಕೆ.ವಿರೂಪಾಕ್ಷಸ್ವಾಮಿ ಹಾಜರಿದ್ದರು.

100 ದಿನ ಪೂರೈಸಿದ ಕಾವೇರಿ ಚಳವಳಿ



ಚಾಮರಾಜನಗರ, ಡಿ.13–ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು, ಬುಧವಾರ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸುವ ಮೂಲಕ 100 ದಿನ ಪೂರೈಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾವೇರಿ ಚಳವಳಿ ಶುರುವಾಗಿ ಇಂದಿಗೆ 100 ದಿನ ಪೂರೈಸಲಾಗಿದೆ. ಚಾಮರಾಜನಗರದ ಇತಿಹಾಸದಲ್ಲೇ ಸತತವಾಗಿ ಯಾವುದೇ ಹೋರಾಟ ನಡೆದಿಲ್ಲ. ಬುಧವಾರ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಶಾಮಿಯಾನ ಹಾಕಿ ಬೆಳಗ್ಗೆಯಿಂದ ಸಂಜೆ ತನಕ ಹೋರಾಟ ನಡೆಸಲಾಗಿದೆ. ಈ ಹೋರಾಟದಲ್ಲಿ ಕನ್ನಡಪರ ಸಂಘಟನೆಗಳ ಮುಖಂಡರು ಭಾಗವಹಿಸಿದ್ದು, ಒಂದು ವಿನೂತನ ಹೋರಾಟ ಮಾಡಲಾಗಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು. ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ಚಾ.ವೆಂ.ರಾಜ್‌ಗೋಪಾಲ್, ಮಹೇಶ್‌ಗೌಡ, ಗು.ಪುರುಷೋತ್ತಮ್, ತಾಂಡವಮೂರ್ತಿ, ಹೊಮ್ಮ ಲೋಕೇಶ್, ವೀರಭದ್ರ ಮಂಜು, ಪ್ರಕಾಶ್ ಇತರರು ಭಾಗವಹಿಸಿದ್ದರು.

ಡ್ರಗ್ಸ್ ಮಾರಾಟಕ್ಕೆ ಯತ್ನ: ಆರೋಪಿ ಬಂಧನ

ಚಾಮರಾಜನಗರ, ಡಿ.13– ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿಯನ್ನು ಪೊಲೀಸರು ಸೋಮವಾರ ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ರಾಮನಗರದ ಪ್ರಜ್ವಲ್ ಅಲಿಯಾಸ್ ಪ್ರಜ್ಜು(22) ಬಂಧಿತ ಆರೋಪಿ. ಈತನಿಂದ 5.14 ಗ್ರಾಂ ನಷ್ಟು ಸುಮಾರು 60 ಸಾವಿರ ರೂ. ಮೌಲ್ಯದ ಡ್ರಗ್ಸ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈತ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, ಕಾಲೇಜು ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರಾಟ ಮಾಡಲು ನಗರಕ್ಕೆ ತಂದಿದ್ದ. ಈ ವೇಳೆ ಪೊಲೀಸರು ದಾಳಿ ನಡೆಸಿ, ಬಂಧಿಸಿ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ಈ ಸಂಬಂಧ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಸೆನ್ ಠಾಣೆಯ ಪಿಎಸ್ಐ ಎಸ್.ಎಲ್. ಸಾಗರ್, ಎಎಸ್ಐ ಮಹದೇವಸ್ವಾಮಿ, ಮುಖ್ಯಪೇದೆಗಳಾದ ಮಹೇಶ್, ಸುಬ್ರಹ್ಮಣ್ಯ, ಪೇದೆಗಳಾದ ಜಗದೀಶ್, ರಾಜು, ಮಂಜುನಾಥ್ ಇದ್ದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿಶೇಷಚೇತನ ಮಕ್ಕಳಿಗೆ ಭತ್ಯೆ ಹಾಗೂ ವಿದ್ಯಾರ್ಥಿವೇತನವನ್ನು ಮುಖ್ಯ ಶಿಕ್ಷಕಿ ಕಮಲಮ್ಮ, ಎಸ್‌ಡಿಎಂಸಿ ಸದಸ್ಯರಾದ ಪುಟ್ಟರಾಜು, ಮಾದೇಶ, ಕುಮಾರ್ ವಿತರಿಸಿದರು.

ನಗರದಲ್ಲಿ ಸ್ವೀಪ್ ಕಾರ್ಯಕ್ರಮಕ್ಕೆ ಚಾಲನೆ



ಚಾಮರಾಜನಗರ, ಡಿ.13– ಜಿಲ್ಲಾ ಪಂಚಾಯಿತಿಯ ಎನ್‌ಆರ್‌ಎಲ್‌ಎಂ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಕೃಷಿ ಸಖಿ ಮತ್ತು ವನ ಸಖಿಯರಿಂದ 'ಒಂದು ಗಿಡ ಮಕ್ಕಳ ತೋಟಕ್ಕಾಗಿ–ಒಂದು ಮತ ದೇಶದ ಹಿತಕ್ಕಾಗಿ' ಎಂಬ ಘೋಷವಾಕ್ಯದೊಂದಿಗೆ ನಗರದ ಬುಧವಾರ ಜಿಪಂ ಶಿಶುಪಾಲನಾ ಕೇಂದ್ರದಲ್ಲಿ ಪೌಷ್ಟಿಕ ತೋಟ ನಿರ್ಮಾಣದ ಸ್ವೀಪ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಅಂಗವಾಗಿ ಜಿಲ್ಲಾ ಚುನಾವಣಾಧಿಕಾರಿ ಕಾರ್ಯಾಲಯ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಸಹಯೋಗದಲ್ಲಿ ಕಾರ್ಯಕ್ರಮಕ್ಕೆ ಜಿಪಂ ಉಪಕಾರ್ಯದರ್ಶಿ ಹಾಗೂ ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿ ಪಿ.ಲಕ್ಷ್ಮಿ ಗಿಡ ನೆಡುವ ಮೂಲಕ ಚಾಲನೆ ನೀಡಿದರು. ಇದೇ ವೇಳೆ ಮಾತನಾಡಿದ ಲಕ್ಷ್ಮೀ, ಕೃಷಿ ಸಖಿ ಮತ್ತು ವನ ಸಖಿಯರು ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ 18 ವರ್ಷ ತುಂಬಿದ ಪ್ರತಿಯೊಬ್ಬರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳುವಂತೆ ಜಾಗೃತಿ ಮೂಡಿಸಬೇಕು ಹಾಗೂ ಮತಗಟ್ಟೆ ಅಧಿಕಾರಿಗಳಿಗೆ 18 ವರ್ಷ ಮೇಲ್ಪಟ್ಟವರ ದಾಖಲಾತಿಗಳನ್ನು ನೀಡಿ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸಲು ಮತ್ತು ಸಾರ್ವಜನಿಕರಿಗೂ ಅರಿವು ಮೂಡಿಸುವಂತೆ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಇತರರು ಇದ್ದರು.

ಹೋಟೆಲ್‌ಗಳಲ್ಲಿ ಗೃಹ ಬಳಕೆಯ 5 ಸಿಲಿಂಡರ್ ವಶ



ಕೊಳ್ಳೇಗಾಲ, ಡಿ.13–ಹೋಟೆಲ್ ಹಾಗೂ ಬೇಕರಿಗಳಲ್ಲಿ ನಿಯಮ ಉಲ್ಲಂಘಿಸಿ, ಬಳಸುತ್ತಿದ್ದ ಗೃಹ ಬಳಕೆಯ 5 ಸಿಲಿಂಡರ್‌ಗಳನ್ನು ಆಹಾರ ಇಲಾಖೆ ಅಧಿಕಾರಿಗಳು ಬುಧವಾರ ವಶಪಡಿಸಿಕೊಂಡಿದ್ದಾರೆ.

ಮಾಹಿತಿ ಮೇರೆಗೆ ತಾಲೂಕಿನ ವಿವಿಧೆಡೆ ದಿಢೀರ್ ದಾಳಿ ನಡೆಸಿ ಅಧಿಕಾರಿಗಳು, ಬೆಳ್ಳಿ ಕಾಂಡಿಮೆಂಟ್ಸ್, ಮದುವನಹಳ್ಳಿ ಟೀ ಸ್ಟಾಲ್, ಶಂಭುಲಿಂಗೇಶ್ವರ ಕೂಲ್ ಪಾಯಿಂಟ್, ಇಂಡಿಯನ್ ಹೋಟೆಲ್, ದೊಡ್ಡಿಂದುವಾಡಿಯ ಟೀ ಸ್ಟಾಲ್, ಕಾಮಗೆರೆ ಗ್ರಾಮದ ಮಾದೇಶ್ವರ ಬೇಕರಿಗಳಲ್ಲಿ ಗೃಹ ಬಳಕೆಗೆ ಸಿಲಿಂಡರ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಪರಂಗಿ ಮಾದಶೆಟ್ಟಿ ನಿಧನ



ಚಾಮರಾಜನಗರ, ಡಿ.13–ತಾಲೂಕಿನ ಹರದನಹಳ್ಳಿ (ಬಂಡಿಗೆರೆ) ನಿವಾಸಿ ಹಾಗೂ ಮುಖಂಡ ಪರಂಗಿ ಮಾದಶೆಟ್ಟಿ (80) ಅನಾರೋಗ್ಯದಿಂದ ಮಂಗಳವಾರ ಮಧ್ಯರಾತ್ರಿ ನಿಧನರಾದರು. ಮೃತರು ಪತ್ನಿ, ಆರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮರಿ ಮೊಮ್ಮಕ್ಕಳನ್ನು ಅಗಲಿದ್ದಾರೆ. ಮೃತರ ತೋಟದಲ್ಲಿ ಬುಧವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸುಂದರಮ್ಮ ಕೃಷಿ ದತ್ತಿ ಪ್ರಶಸ್ತಿಗೆ ರೈತರಿಂದ ಅರ್ಜಿ ಆಹ್ವಾನ

ಯಳಂದೂರು, ಡಿ.13–ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ರೈತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ತಾಲೂಕಿನ ದುಗ್ಗಹಟ್ಟಿ ಗ್ರಾಮದ ಸುಂದರಮ್ಮ ದುಗ್ಗಹಟ್ಟಿ ವೀರಭದ್ರಪ್ಪ ಪ್ರತಿಷ್ಠಾನ ವತಿಯಿಂದ ಕೃಷಿ ದತ್ತಿ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಫೆ.6ರಿಂದ 11ರ ವರೆಗೆ ಸುತ್ತೂರಿನಲ್ಲಿ ನಡೆಯುವ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಗೆ ತಾಲೂಕುವಾರು ಬೆಳಗಳನ್ನು ನಿಗದಿಪಡಿಸಲಾಗಿದ್ದು, ನಂಜನಗೂಡು ತಾಲೂಕಿಗೆ ಭತ್ತ, ಗುಂಡ್ಲುಪೇಟೆಗೆ ತರಕಾರಿ, ಬೀನ್ಸ್, ಚಾಮರಾಜನಗರ ತಾಲೂಕಿಗೆ ಟೊಮ್ಯಾಟೋ, ಯಳಂದೂರು ತಾಲೂಕಿಗೆ ಬಾಳೆ, ಕೊಳ್ಳೇಗಾಲ ತಾಲೂಕಿಗೆ ಕಬ್ಬು ಹಾಗೂ ಹನೂರು ತಾಲೂಕಿಗೆ ಮುಸುಕಿನ ಜೋಳ ಬೆಳೆಗಳನ್ನು ನಿಗದಿಪಡಿಸಲಾಗಿದೆ. ಆಸಕ್ತ ರೈತರು ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ಕೇಂದ್ರ, ಸಮೀಪದ ರೈತರ ಸಂಪರ್ಕ ಕೇಂದ್ರ ಅಥವಾ ತೋಟಗಾರಿಕೆ ಇಲಾಖೆಯಲ್ಲಿ ಜ.15ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಮೊ.ಸಂ: 9448978836 ಅನ್ನು ಸಂಪರ್ಕಿಸಬಹುದು.

ಛತ್ತೀಸ್‌ಗಢ ಮುಖ್ಯಮಂತ್ರಿಯಾಗಿ ವಿಷ್ಣು ದೇವ್ ಸಾಯಿ ಪ್ರಮಾಣ ವಚನ ಸ್ವೀಕಾರ



ರಾಯ್ಪುರ, ಡಿ.13– ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಹಾಗೂ ಕುಂಕುರಿ ಕ್ಷೇತ್ರದ ಶಾಸಕ ವಿಷ್ಣು ದೇವ್ ಸಾಯಿ ಅವರು ಛತ್ತೀಸ್‌ಗಢದ ನೂತನ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯ ಬಿಜೆಪಿ ಮುಖ್ಯಸ್ಥ ಅರುಣ್ ಸಾವೊ ಮತ್ತು ಶಾಸಕ ವಿಜಯ್ ಶರ್ಮಾ ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ಛತ್ತೀಸ್‌ಗಢದ ರಾಜ್ಯಪಾಲ ಬಿಸ್ವಭೂಷಣ ಹರಿಚಂದನ್ ಅವರು ಸಾಯಿ ಮತ್ತು ಇಬ್ಬರು ಉಪಮುಖ್ಯಮಂತ್ರಿಗಳಿಗೆ ಪ್ರಮಾಣ ವಚನ ಬೋಧಿಸಿದರು. ವಿಜ್ಞಾನ ಕಾಲೇಜು ಮೈದಾನದಲ್ಲಿ ನಡೆದ ಅದ್ಧೂರಿ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ, ಕೇಂದ್ರ ಸಚಿವರಾದ ಅಮಿತ್ ಶಾ ಮತ್ತು ನಿತಿನ್ ಗಡ್ಕರಿ ಮತ್ತು ಕೆಲವು ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಟೆಲಿಮಾರ್ಕೆಟಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ:12,000/- ರಿಂದ 15,000/-
ಸಂಪರ್ಕಿಸಿ:
96114 77707
76768 41708

Hotel Sagar Residency
64/1&2, Ashoka Road, Mysuru
WANTED
Male for Reception
to work in night shift.
Interested contact:
Mob: 9448044440

30x40 ಸೈಟ್ ದಟ್ಟಗಳ್ಳಿ
20x30 ಸೈಟ್ ದಟ್ಟಗಳ್ಳಿ
30x50 ಶಂಕರ ಲೇಔಟ್
40x60 ಜ್ಞಾನಗಂಗ ಲೇಔಟ್
ಹೊಸ ಮನೆ–ಹಳೆ ಮನೆ ಸೈಟ್
ಎಲ್ಲಾ ಬಡಾವಣೆಗಳಲ್ಲಿ ಮಾರುವವರು ಕೊಳ್ಳುವವರು ಸಂಪರ್ಕಿಸಿ:
ಶ್ರೀ ಬನಶಂಕರಿ ರಿಯಲ್ ಎಸ್ಟೇಟ್
9945042875

ತಕ್ಷಣ ಬೇಕಾಗಿದ್ದಾರೆ
ಕಡಕೊಳ, ತಾಂಡ್ಯ, ಹಿಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ : 18500/-(26 days)
ವಯೋಮಿತಿ : 50 ವರ್ಷದ ಒಳಗೆ
ESI ಮತ್ತು PF ಸೌಲಭ್ಯವಿದೆ.
9620667819,9538567819

WANTED
ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
ಸಂಬಳ: 10,000+Incentive
ಆಸಕ್ತಿ ಇದ್ದವರು ಸಂಪರ್ಕಿಸಿ:
9845028614

SAMAGRA SUPER STORE
(Super Market)
A Venture of Bharat Bhuvi Ventures Ltd
WE ARE HIRING!!!
Supervisors
Billing Executive
Customer Sales Executive
Interview date: 16-12-2023
9606030930

ಸೆಕ್ಯೂರಿಟಿ ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಶಿಕ್ಷಣ ಸಂಸ್ಥೆಯೊಂದರಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
7022849856
9110851597

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

HOUSE FOR LEASE
2 BHK house, ground floor, East face, semi-furnished with Solar & UPS @ JP Nagar Ring Road (Outer).
9880290857

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು ಮತ್ತು ಹೆಲ್ಪರ್‌ಗಳು, ಸೆಕ್ಯೂರಿಟಿಗಳು ಬೇಕಾಗಿದ್ದಾರೆ.
ESI & PF ವಾರದ ರಜೆ
7795285485
8105249880

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
12 Hour Duty
ಹೌಸ್ ಕೀಪಿಂಗ್
8 Hour Duty
ಬನ್ನಿಮಂಟಪ ಸುತ್ತಾಮುತ್ತಾ ಪ್ರದೇಶದಲ್ಲಿ
9035367083
8123769346

WANTED TEACHERS
English Medium
IDEAL SCHOOL
YELWALA
TCH, BA, BE.d,
Only lady Teachers apply
9740423410
9900593211

ಬೇಕಾಗಿದ್ದಾರೆ
ಅಕೌಂಟೆಂಟ್ (ಟ್ಯಾಲಿ) ಮತ್ತು ಆಫೀಸ್ ಅಸಿಸ್ಟೆಂಟ್
ಭೇಟಿಯ ಸಮಯ:
11.00-3.00pm
ಪುರುಷರಿಗೆ ಆದ್ಯತೆ
9448020262
9900117009

CHANGE OF NAME
I, Ashwini Kumar Paramanand Hemdev S/o Paramanand G Hemdev, R/at No. 101/A, 6th Main, Brindavan Extension, 1st stage, Mysore- 570020 have changed my name From Ashwini Kumar Paramanand Hemdev to Adwaith P. Hemdev vide affidavit sworn before Notary Rajeshwari Mysore on 05-12-2023
Sd/- Adwaith P. Hemdev

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

CHANGE OF NAME
I, Smt. H.Jayamma, W/o. Sri. T.K. Bhasker residing at # 136, Thenkkalakoppal Village, Hussainpura (PO) Bilikere Hobli, Hunsur Tq-571103 have changed my name from Smt. Suguna to H. Jayamma on my own free will vide affidavit dated 12.12.2023 sworn in before Notary C.R. Seetharam. Hereafter In future in all records, deeds dealings and transactions I will be identified as H.Jayamma
Sd/- H.Jayamma

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ನಿವೇಶನ ಮಾರಾಟಕ್ಕಿದೆ
ಮುಡಾ ಅನುಮೋದಿತ ಗುರುರಾಜ ಬಡಾವಣೆ ಸಿದ್ಧಾರ್ಥ ನಗರ, ಮೈಸೂರು. ಪೂರ್ವ ದಿಕ್ಕಿನ ಪೂರ್ವ ಪಶ್ಚಿಮ 50 ಅಡಿ ಉತ್ತರ ದಕ್ಷಿಣ 40 ಅಡಿ ಅಳತೆಯ ನಿವೇಶನ
9900655615
9880479678

ಹನ್ಸಿಕ ಗೌಡ ಪ್ರಾಪರ್ಟೀಸ್
1) ಸನ್ ಸಿಟಿ ಲೇಔಟ್ 30x50 ಪೂರ್ವ & ಉತ್ತರ ದಿಕ್ಕು 18 ಲಕ್ಷ
2) ಸ್ಕೈಟಾಪ್ ಲೇಔಟ್ 30x40ಪೂರ್ವ ದಿಕ್ಕು 20 ಲಕ್ಷ
3) ಪ್ಲಾಟಿನಂ ಲೇಔಟ್ 30x40 ಪೂರ್ವ ದಿಕ್ಕು 16 ಲಕ್ಷ
ಇಲವಾಲ ಸುತ್ತ ಮುತ್ತ ನಿವೇಶನಗಳು ಮಾರಾಟಕ್ಕಿದೆ. ಸಂಪರ್ಕಿಸಿ
8553540950

ಮನೆ ಕಟ್ಟಿಸುವವರ ಗಮನಕ್ಕೆ
ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟವುಳ್ಳ ಸಾಮಾಗ್ರಿಗಳೊಂದಿಗೆ ಚದುರಡಿಗೆ Rs. 1670/- ರಂತೆ ಕಟ್ಟಿಕೊಡಲಾಗುವುದು. ಮುಂಗಡ ಹಣ ಪಾವತಿ ಮಾಡುವಂತಿಲ್ಲ. ಸಾಲದ ಸೌಲಭ್ಯ ಒದಗಿಸಲಾಗುವುದು.
Mob: 94821-27279

WANTED
KIDSPACE PLAY ARENA,
ವಿಜಯನಗರ 3ನೇ ಹಂತದಲ್ಲಿರುವ ಕಂಪನಿಗೆ
1) Receptionist
2) Attender (10th pass)
Female candidates only living in and around Vijayanagar 3rd Stage, Mysore. Contact:
Mob: 9900402149

ಜಾಗ ಮಾರಾಟಕ್ಕಿದೆ
ಮುಡಾ ಅನುಮೋದಿತ
ಉತ್ತರಾಭಿಮುಖವಾಗಿ 15300 ಚ.ಅಡಿ, 30 ಅಡಿ ರಸ್ತೆಯಲ್ಲಿ 80 ಅಡಿ ರಸ್ತೆಗೆ ಪ್ರಸ್ತಾಪಿಸ ಲಾಗಿದೆ, ಸುವರ್ಣನಗರ ಬಳಿ, ಬೋಗಾದಿ–ಗದ್ದಿಗೆ ರಸ್ತೆ ಯಿಂದ ಆದಿತ್ಯ ವೃತ್ತಕ್ಕೆ ಸಂಪರ್ಕ ಕಲ್ಪಿಸಲಾಗಿದೆ. ಸಿಟಿಯಿಂದ 9 ಕಿ.ಮೀ. ಬ್ಯಾಂಕ್ ಲೋನ್ ಸೌಲಭ್ಯವಿದೆ. ಕರೆ ಮಾಡಿ.
Mob: 79751 34287

ಕೆಲಸಕ್ಕೆ ಬೇಕಾಗಿದ್ದಾರೆ
1) ದೋಸೆ ಭಟ್ಟರು
2) ಕೌಂಟರ್ ಮತ್ತು ಪಾರ್ಸೆಲ್‌ಗೆ
3) ಕಾಫಿ ಮತ್ತು ಟೀ ಕೌಂಟರ್‌ಗೆ
4 ರುಬ್ಬುವುದಕ್ಕೆ
5) ಅಡುಗೆ ಭಟ್ಟರು
6) ಇಡ್ಲಿ, ವಡೆ ಹಾಕುವುದು.
7) ಕ್ಲೀನಿಂಗ್ ಹೆಂಗಸರು / ಗಂಡಸರು.
9986205777, 9916256503

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150 +
Data Entry Operator
ಸಂಬಳ 10,000 +5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ನಿರ್ವಹಿಸಲು ಪುರುಷರು ITI (Fitter) ಹಾಗೂ Helpers ಬೇಕಾಗಿದ್ದಾರೆ. ಒಳ್ಳೆಯ ವೇತನ ಹಾಗೂ ಇ.ಎಸ್.ಐ. ಪಿ.ಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
6361201110
6360469984

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಕಂಪನಿಯಲ್ಲಿ ಕೆಲಸ ಮಾಡಲು ಫೀಲ್ಡ್ ಆಫೀಸರ್ – 2 ಹುದ್ದೆ, ಸೆಕ್ಯೂರಿಟಿ ಸೂಪರ್‌ವೈಸರ್–4 ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
8971367078
9740480171

ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಬಾಯ್ಸ್ ಮತ್ತು ಸೆಕ್ಯೂರಿಟಿ ಗಾರ್ಡ್
ಸೆಂಟ್ ಫಿಲೋಮಿನಾಸ್ ಚರ್ಚ್ ಹತ್ತಿರ, ಅಶೋಕ ರಸ್ತೆ, ಮೈಸೂರಿನಲ್ಲಿರುವ 30 ರೂಂಗಳುಳ್ಳ ಪ್ರತಿಷ್ಠಿತ ಹೋಟೆಲ್ (ಲಾಡ್ಜ್)ಗೆ ಹೋಟೆಲ್ ಉದ್ಯಮದಲ್ಲಿ ಅನುಭವವುಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ:
9845682777, 9538651845

ಸಿಬ್ಬಂದಿ ಬೇಕಾಗಿದ್ದಾರೆ
ಸೇಲ್ಸ್ ಗರ್ಲ್ಸ್ ಜ್ಯುವೆಲರಿ
ಅಕೌಂಟೆಂಟ್ ಹುಡುಗಿಯರು
ವಾಟರ್ ಬಾಟಲ್ ಪ್ಯಾಕಿಂಗ್ ಮಾಡಲು ಹುಡುಗಿಯರು
ಫೀಲ್ಡ್ ಸ್ಟಾಫ್ ಹುಡುಗಿಯರು
ಡ್ರೈವರ್. ಮೈಸೂರು–ಶಾಂತಿನಗರ
9164160000, 9847993300

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

1st Floor To-Let
ಬಾಡಿಗೆಗೆ ದೊರೆಯುತ್ತದೆ
Office purpose, Bank, Computer Class, Spoken English, Coaching Centre space available (1200 sq.ft.). Siddartha Nagar, Kamanagate, T.N. Pura Main Road, B.D.S. Complex, Mysore.
7353682106, 9482139665

ಮನೆ ಕೆಲಸಕ್ಕೆ
ನಮ್ಮಲ್ಲೇ ಉಳಿದುಕೊಂಡು ಅಡುಗೆ ಹಾಗೂ ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ (ವಯಸ್ಸು 40ರ ಒಳಗೆ), ಉತ್ತಮ ಸಂಬಳ ದೊರೆಯುತ್ತದೆ. ಮೈಸೂರು.
Mob: 9449780098

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಲಕ್ಷ್ಮಿಕಾಂತನಗರದ ಕಛೇರಿಯಲ್ಲಿ ಕೆಲಸ ಮಾಡಲು ಟೆಲಿಕಾಲರ್ಸ್ (ಯುವತಿಯರು) ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC, PUC, Degree
ವಯೋಮಿತಿ: 18-32
ಸಂಬಳ: 8000 ರಿಂದ 12000
7899369558
7338009488

PROPERTY FOR RENT
Commercial property 1200 sqft 2nd Floor Srirama Street Near Karnataka Bank Ramanuja Road, Mysore Suitable for any Office, Tutorials, Call Centers, Gym. Contact:
9449854450

FOR RENT
1000 sq.ft. commercial space and 3 BHK house for rent 1st floor with lift and parking facility. Arvind Nagar Main Road, Opp. to Arvind Hospital, Mysore.
9448307234, 9483534870

Unique Opportunity
Exclusively for retired officials of State Government / Central Government / Banking Sectors / Public and Private Sectors and housemakers. We have an unique opportunity (approved by Ministry of Finance, Government of India). To be occupied and keep you engaged an opportunity to earn attractive incentives. One call can change your life. For details call:
9845458130, 8861918556

HOUSE FOR LEASE
Newly built 2 BHK independent house, fully furnished with solar @ Lalithadri Nagar, Near Ring Road, Behind Indian Oil Petrol Bunk.
Mob: 9964414484

PART TIME JOBS
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ)
9148733213

100% TEAK WOOD FACTORY FINISH DOORS
@ DEPOT RATES

10 YEARS WARRANTY
www.ssbuildmart.com
9901291267
9845426862

ತಕ್ಷಣ ಬೇಕಾಗಿದ್ದಾರೆ
RTO, ಬಲ್ಲಾಳ್, ಜಯನಗರ, ಅಪೋಲೋ ಆಸ್ಪತ್ರೆ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು
ಸಂಬಳ : 18500/-
ವಯೋಮಿತಿ : 50 ವರ್ಷದ ಒಳಗೆ
ESI ಮತ್ತು PF ಊಟ ತಿಂಡಿ ವ್ಯವಸ್ಥೆ ಇರುತ್ತದೆ
9620777819,9620667819

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ (ಹೂಟಗಳ್ಳಿ, ಬನ್ನಿಮಂಟಪ, ವರುಣ)
2) ಸೆಕ್ಯೂರಿಟಿ ಗಾರ್ಡ್ಸ್ (ಬನ್ನಿಮಂಟಪ, ಜೆ.ಪಿ.ನಗರ, ಸುತ್ತೂರು)
3) ಗಾರ್ಡ್‌ನ್ ಕಟ್ಟರ್– (ಮೇಟಗಳ್ಳಿ)
ESI ಮತ್ತು PF ಸೌಲಭ್ಯವಿರುತ್ತದೆ
9739166772

SITES FOR SALE
30 x 40 - 33 Lakhs,
20 x 40 - 22 Lakhs,
Near Gurur Bus Stop, Ramabainagar, Mysore. DTCP approved (Corporation limits)
1.5 Kms from JP Nagar Ring Road
8660105902

SITES FOR SALE
Royal Hills Layout,
MUDA Approved Sites
30 x 50 - 50 Lakhs
Near JSS/Police Layout,
TNarasipura Road, Mysuru.
1.5 Kms from Ring Road
9900363084/8660105902

HOUSE FOR SALE
at Vijayanagar
3 BHK Duplex New House, MUDA, E/F Door,
Near Marimallappa School,
Price - 84 Lakhs/1.55 Cr
8660105902

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

ಮನೆಯಿಂದಲೇ ಕೆಲಸ
ಗೃಹಿಣಿಯರು, ವಯಸ್ಕಾದವರು, ವಿದ್ಯಾರ್ಥಿಗಳಿಗೆ ವಯಸ್ಸಿನ ಮಿತಿ ಇಲ್ಲ, ಇಲ್ಲಿದೆ ಸುವರ್ಣಾವಕಾಶ. ಡಾಟಾ ಎಂಟ್ರಿ, ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ ಮತ್ತು ನಿಮ್ಮ ಮೊಬೈಲ್ ಬಳಸಿ ಗಳಿಸಿ ತಿಂಗಳಿಗೆ 15,000 ದಿಂದ 20,000 ವರೆಗೆ. ಕರೆ ಮಾಡಿ.
Mob: 6361134968

ಪಾರ್ಟ್ ಟೈಂ ಜಾಬ್
ಯೂಟ್ಯೂಬ್ ಚಾನೆಲ್‌ಗೆ ಕ್ಯಾಮರಾ ಇರುವ ಕ್ಯಾಮರಾ ಮ್ಯಾನ್ ಮತ್ತು ಸ್ಪಷ್ಟವಾಗಿ ಕನ್ನಡ ಮಾತನಾಡುವ ನಿರೂಪಕಿಯರು ಬೇಕಾಗಿದ್ದಾರೆ.
ಕೆಲಸ ಪ್ರತಿ ಭಾನುವಾರ ಮಾತ್ರ
7625012341

ಕೆಲಸಕ್ಕೆ ಬೇಕಾಗಿದ್ದಾರೆ
(ಪಾರ್ಟ್ ಟೈಮ್)
ಹುದ್ದೆಯ ಹೆಸರು: ಸಪೋರ್ಟಿಂಗ್ ಸ್ಟಾಫ್
ವಿದ್ಯಾರ್ಹತೆ : 10 Fail/12th fail
ವಯೋಮಿತಿ: 21 ವರ್ಷ ಮೇಲ್ಪಟ್ಟವರು
ಸಂಪರ್ಕಿಸುವ ವೇಳೆ:
ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ
8971387209
9008997080

ಅನುಬಂಧ ಮ್ಯಾರೇಜಸ್
1) ಲಿಂಗಾಯತ BE ವಿದೇಶದಲ್ಲಿರುವ ವಧುಗೆ
2) ಲಿಂಗಾಯತ MBA ವಿದೇಶದಲ್ಲಿರುವ ವರನಿಗೆ
3) ಲಿಂಗಾಯತ ಬೆಂಗಳೂರು ಸುಂದರ ಶ್ರೀಮಂತ ಬಿಜಿನೆಸ್ ವರನಿಗೆ
4) SCBE Mtech ಸರ್ಕಾರಿ ನೌಕರಿ ಡ್ರೈವರ್ಸ್ ವಧುವಿಗೆ
5) ಬ್ರಾಹ್ಮಣ MBA ಸರ್ಕಾರಿ ಅಧಿಕಾರಿ 8 ಲಕ್ಷ ತಿಂಗಳಿಗೆ ವರನಿಗೆ Cast Nobar
6) ಲಿಂಗಾಯತ MBDS & MD ವಧುವಿಗೆ ಸೂಕ್ತ ವಧುವರರು ಬೇಕು
6361740552

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಹೃದಯಭಾಗದಲ್ಲಿರುವ ಲಾಡ್ಜ್‌ಗೆ ರೂಂಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಮಾರ್ನಿಂಗ್ ಕಾಲೇಜಿನಲ್ಲಿ ಓದಿಕೊಂಡು ಇರುವ ಹುಡುಗರಿಗೂ ಅವಕಾಶ ಇದೆ.
9663991888
9739742344

ಮನೆ ಮಾರಾಟಕ್ಕಿದೆ
ನಾಲ್ಕು ಅಂತಸ್ತಿನ ಹೊಸ ಮನೆ ಅಳತೆ 30x40 ಕಾರ್ನರ್ ನಾಲಾ ಬೀದಿ, ಚಾಮರಾಜ ಡಬಲ್ ರಸ್ತೆ ಹತ್ತಿರ, ಮೈಸೂರು. ಬೆಲೆ: 2.75 ಕೋಟಿ ಬ್ಯಾಂಕ್ ಲೋನ್ ಇದೆ.
8861133817

ಬೇಕಾಗಿದ್ದಾರೆ
ಗೂಡ್ ವಾಹನ ಓಡಿಸಲು ಡ್ರೈವರ್‌ಗಳು ಬೇಕಾಗಿದ್ದಾರೆ.
ವಾಹನ –
Boleropickup
Heavy Vehicle
Move my Goods
9019029036

JOB VACANCY
For Diploma in Electrical Engineering OR ITI in Electrical Engg+Valid Supervisory License or BE/ BTECH in Electrical Engg.
Experience- 3 Years for Diploma / 8 Years for ITI
9845700557

HOUSE FOR SALE
25x30 ಡ್ಯೂಪ್ಲೆಕ್ಸ್ ಮನೆ ಗಂಗೋತ್ರಿ ಬಡಾವಣೆ ಮೈಸೂರಿನಲ್ಲಿ 60 ಲಕ್ಷಗಳಿಗೆ ಮಾರಾಟಕ್ಕಿದೆ
(Owner) Contact:
7411110087

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 16000 ರಿಂದ 20000 ವರೆಗೆ
6366141518,9845010281

COMMERCIAL SPACE FOR RENT
Ground Floor 1800 sq Super Market, Bank, Government Office showroom, Diabetic Centre, Kuvempunagar
9845671554

ಸೈಟು ಮಾರಾಟಕ್ಕಿದೆ
ಹುಣಸೂರು ನಗರದಲ್ಲಿ ಎರಡು ಕಾರ್ನರ್ ಸೈಟುಗಳು ಮಾರಾಟಕ್ಕಿದೆ. ಪ್ರತಿ ಸೈಟಿನ ಬೆಲೆ 5 ಲಕ್ಷ ರೂ.
ಅಳತೆ 30x40
ಸಂಪರ್ಕಿಸಿ: ಎಸ್.ಭಾಗ್ಯಮ್ಮ
8073466887

COMMERCIAL SPACE FOR RENT
Ground Floor, 1st Floor, 2nd Floor, Super Market, Bank, Automobile, Study Centre, Government Office
Shardadevi Nagar
9900585954

WANTED
1) Electrical Panel Wiremen
2) Welders
3) Helpers
7259016512
7259016509

Wanted Immediately
* Female Telecaller - 10 Nos.
* Female Telecaller - 5 Nos.
8548880010

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತದೆ. ಬೇಕಾಗುವ ದಾಖಲಾತಿಗಳು: 1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್‌ಬುಕ್. ಸ್ಥಳ: 1ನೇ ಮಹಡಿ, ಶಾರದಾ ಪ್ಲಾಟಿನಾ, ಗಡಿಯಾರದ ಸರ್ಕಲ್, ಗಾಂಧಿ ಸರ್ಕಲ್ ಎದುರು, ಮೈಸೂರು. ಸಮಯ: ಬೆಳಿಗ್ಗೆ 11.00. ದಿನಾಂಕ: 16–12–2023. Followed by Lunch
9448376423,9886883858

ಮನೆ ಮಾರಾಟಕ್ಕಿದೆ
30x40 ಕಾರ್ನರ್, Ground 1st & 2nd ಟೀಚರ್ ಲೇಔಟ್, ರಾಜ್‌ಕುಮಾರ್ ರಸ್ತೆ, ಪಾರ್ಕ್ ಎದುರು, With Bore
32x40, Ground 1st & 2nd ಆಲನಹಳ್ಳಿ, ಲೇಔಟ್, ಸಿದ್ಧಾರ್ಥನಗರ ಹತ್ತಿರ
6363624003

WANTED SITES & OLD HOUSES
@ Dattagalli, Kuvempunagar, Saraswathipuram, Yelwala, Vijayanagar & Surrounding
Quick Registration
9538839926

ನಿವೃತ್ತರಾದವರಿಗೆ ಉದ್ಯೋಗ ಅವಕಾಶದ ಸೆಮಿನಾರ್
ಕೇಂದ್ರ/ರಾಜ್ಯ/ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ನಿವೃತ್ತರಾದವರಿಗೆ ಉದ್ಯೋಗ ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. ವಿದ್ಯಾರ್ಹತೆ: SSLC above Any Degree. ವಯಸ್ಸು 30 ವರ್ಷ ಮೇಲ್ಪಟ್ಟು. ಸೆಮಿನಾರ್ ನಡೆಯುವ ಸ್ಥಳ: ಶಾರದ ಪ್ಲಾಜಾ 1ನೇ ಮಹಡಿ, ದೊಡ್ಡಗಡಿಯಾರದ ಎದುರು, ಮೈಸೂರು–01. ದಿನಾಂಕ: 16–12–2023, ಸಮಯ: 11 ಗಂಟೆಗೆ, ದಾಖಲಾತಿಗಳು: ಆಧಾರ್, ವಿದ್ಯಾರ್ಹತೆ, ಬ್ಯಾಂಕ್ ಪಾಸ್ ಬುಕ್ (1ನೇ ಪೇಜ್), 4) ಪಾನ್ ಕಾರ್ಡ್, 5) ಫೋಟೋ Followed by Lunch
9449068132,7022034200

ಸೈಟು ಮಾರಾಟಕ್ಕಿದೆ
ಟಿ.ನರಸೀಪುರ ಮೇನ್ ರಸ್ತೆ, ವರಕೂಡು ಗೇಟ್ ಹತ್ತಿರ, ಪೂರ್ವ ದಿಕ್ಕು ಬಾಗಿಲು
30x37.5, Rs. 16 ಲಕ್ಷ
Ready Registration
7676077678

ಬ್ಯೂಟಿಷಿಯನ್ ಬೇಕಾಗಿದ್ದಾರೆ
Model Look
ಬ್ಯೂಟಿಪಾರ್ಲರ್, ಜೆ.ಪಿ.ನಗರ
8105086220

ಕೆಲಸಕ್ಕೆ ಬೇಕಾಗಿದ್ದಾರೆ
Car Wash ಮಾಡಲು ಅನುಭವವಿರುವ ಅಥವಾ ಇಲ್ಲದ ಹುಡುಗರು ಬೇಕಾಗಿದೆ. ಆಕರ್ಷಕ ಸಂಬಳ ನೀಡಲಾಗುವುದು. ವಸತಿ ಸೌಲಭ್ಯವಿರುತ್ತದೆ.
ಸ್ಥಳ: ತ್ರಿವೇಣಿ ಸರ್ಕಲ್ ಹತ್ತಿರ, ಡಾ|| ರಾಜ್‌ಕುಮಾರ್ ರಸ್ತೆ, ಶಕ್ತಿನಗರ
8861221755

MATCH MAKERS, BRIDE/GROOM
ಮದುವೆಗೆ ವಧು/ವರರ ಆಯ್ಕೆಗೆ
ಎಲ್ಲಾ ಜಾತಿಯ Govt Job, Private job, ಸ್ವಂತ ಉದ್ದಿಮೆ/ ಬ್ಯುಸಿನೆಸ್/ ಪ್ರಗತಿಪರ ರೈತರು, ಇತರೆ, ನಮ್ಮ ಕಚೇರಿಯಲ್ಲಿ ಲಕ್ಷಾಂತರ ವಧುವರರಿದ್ದಾರೆ. 1st Marriage ಡೈವೋರ್ಸಿಗಳು, ವಿಧವೆ/ವಿಧುರರ Life Partner ಗಾಗಿ, ಡಾಕ್ಟರ್/ಇಂಜಿನಿಯರ್, ಎಲ್ಲಾ ಡಿಗ್ರಿ/ಎಲ್ಲಾ ವಿದ್ಯಾಭ್ಯಾಸದವರು ನೇರ ಭೇಟಿ ನೀಡಿ 1) ಮುಸ್ಲಿಂ Govt job Age 30 ಮುಸ್ಲಿಂ ವರ ಬೇಕು. 2) ಎಲ್ಲಾ ಜಾತಿಯ 600 ಸ್ವತಂತ್ರ ವಧುಗಳಿಗೆ ವರಬೇಕು. ಬಡವರ ವಧುಗಳಿಗೆ ಉಚಿತ+ಮದುವೆ+ಉದ್ಯೋಗ+ವಸತಿಗಾಗಿ ನೇರಭೇಟಿ ನೀಡಿ
7975728012

ಮನೆ ಭೋಗ್ಯಕ್ಕೆ
ಜೆಪಿ ನಗರ
ರೂ.8 ಲಕ್ಷಕ್ಕೆ
9663563587
6362210810

ಮನೆ ಬಾಡಿಗೆಗೆ ಇದೆ
2 BHK (Attached)
(ಒಂದೂ ರೂಂ), ಹಾಲ್ ಕಿಚನ್, ಗ್ರೌಂಡ್ ಫ್ಲೋರ್‌ನಲ್ಲಿ, ಬನುಮಯ್ಯ ರಸ್ತೆ, 3ನೇ ಕ್ರಾಸ್, ಕೆ.ಆರ್.ಮೊಹಲ್ಲಾ ದಳವಾಯಿ ಸ್ಕೂಲ್ ಹತ್ತಿರ (ಸಸ್ಯಾಹಾರಿಗಳಿಗೆ ಮಾತ್ರ)
9448247580

ಬೇಕಾಗಿದ್ದಾರೆ
ನೂತನವಾಗಿ ಪ್ರಾರಂಭವಾಗುತ್ತಿರುವ ರೆಸ್ಟೋರೆಂಟ್‌ಗೆ ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ಎಲ್ಲಾ ತರಹದ ಕೆಲಸಕ್ಕೆ ಬೇಕಾಗಿದ್ದಾರೆ.
9535568637

TELECALLERS
Male/Female, Field Executives, Fresher/ Experienced Required for Bank Collections
Location: Near Sharadadevi Nagar Circle, New Kanthraj Urs Road, Mysore-570022
9886622849,7022328169

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಒಂದನೇ ಪುಟದಿಂದ

ಕಲರ್ ಗ್ಯಾಸ್ ಸಿಡಿಸಿ ರಂಪಾಟ

ಸಚಿವರು ಹಾಗೂ ಸಂಸದರು ಭಯಭೀತರಾಗಿ ಓಡಲಾರಂಭಿಸಿದರು. ಈ ಮಧ್ಯೆ ಧೈರ್ಯ ಮಾಡಿದ ಕೆಲವು ಸಂಸದರು, ಆಸನಗಳ ಮಧ್ಯೆ ಜಿಗಿಯುತ್ತಿದ್ದ ಉತ್ತರ ಪ್ರದೇಶದ ಸಾಗರ್ ಶರ್ಮಾನನ್ನು 'ಹಿಡಿಯಿರಿ... ಹಿಡಿಯಿರಿ...' ಎಂದು ಕೂಗುತ್ತಾ ಆತನನ್ನು ಬೆನ್ನತ್ತಿ ಹಿಡಿದು ಹಿಗ್ಗಾ-ಮುಗ್ಗಾ ಥಳಿಸಿದರು. ಇದೇ ವೇಳೆ ಸಂಸತ್ ಮಾರ್ಷಲ್‌ಗಳು ಬಂದು ಇಬ್ಬರು ದುಷ್ಕರ್ಮಿಗಳನ್ನು ಹಿಡಿದು ಹೊರಗೆ ಕರೆದೊಯ್ದರು.

ಸಂಸತ್‌ನಲ್ಲಿ ಮೇಜುಗಳ ಮೇಲೆ ಜಿಗಿದವನನ್ನು ಉತ್ತರಪ್ರದೇಶದ ಆಟೋ ಚಾಲಕ ಸಾಗರ್ ಶರ್ಮಾ ಹಾಗೂ ಬಣ್ಣದ ಹೊಗೆ ಸಿಡಿಸಿದವರನ್ನು ಮೈಸೂರು ವಿಜಯ ನಗರ ನಿವಾಸಿಯಾದ, ಇಂಜಿನಿಯರಿಂಗ್ ವ್ಯಾಸಂಗ ಮಾಡಿರುವ ಮನೋರಂಜನ್. ಸಂಸತ್‌ನ ಹೊರಗೆ ಟ್ರಾನ್ಸ್‌ಪೋರ್ಟ್ ಭವನದ ಬಳಿ ಬಣ್ಣದ ಹೊಗೆ ಸಿಡಿಸಿ ಘೋಷಣೆ ಕೂಗಿದ ಮಹಾರಾಷ್ಟ್ರದ ಲಾತೂರ್ ನಿವಾಸಿ ಅಮೋಲ್ ಶಿಂಧೆ ಹಾಗೂ ಹರಿಯಾಣದ ಹಿಸಾರ್ ಮೂಲದ ಮಹಿಳೆ ನೀಲಂ ಎಂದು ಗುರುತಿಸಲಾಗಿದೆ. ಈ ನಾಲ್ವರನ್ನು ಸಂಸತ್ ಸ್ಟ್ರೀಟ್ ಪೊಲೀಸರ ವಶಕ್ಕೆ ಒಪ್ಪಿಸಲಾಯಿತು. ಇವರನ್ನು ವಶಕ್ಕೆ ಪಡೆದಿರುವ ಭಯೋತ್ಪಾದನಾ ನಿಗ್ರಹ ದಳದ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ. ಮನೋರಂಜನ್ ಕಲರ್ ಗ್ಯಾಸ್ ಟಿನ್‌ಗಳನ್ನು ತನ್ನ ಶೂನಲ್ಲಿ ಅಡಗಿಸಿಕೊಂಡಿದ್ದ ಎಂಬುದನ್ನು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಸಂಸತ್ ಪ್ರವೇಶಿಸಿ ಆತಂಕ ಸೃಷ್ಟಿಸಿದ ಸಾಗರ್ ಶರ್ಮಾ ಮತ್ತು ಮನೋರಂಜನ್ ಅವರುಗಳು ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ಅವರಿಂದ ಪ್ರೇಕ್ಷಕರ ಗ್ಯಾಲರಿಯ ಪಾಸ್ ಪಡೆದು ಸಂಸತ್ ಪ್ರವೇಶಿಸಿದ್ದಾರೆ ಎಂಬುದು ಖಚಿತವಾಗಿದೆ. ಸಹಜವಾಗಿಯೇ ಎಲ್ಲಾ ಸಂಸದರೂ ತಮ್ಮ ಕ್ಷೇತ್ರದಿಂದ ಬರುವವರಿಗೆ ಸಂಸದ್ ಭವನ ವೀಕ್ಷಿಸಲು ಪಾಸ್‌ಗಳನ್ನು ನೀಡುತ್ತಾರೆ. ಪಾಸ್ ಇದ್ದರೂ ಕೂಡ ಸಂಸತ್ ಪ್ರವೇಶಿಸಬೇಕಾದರೆ 5 ರಿಂದ 6 ಹಂತದ ತಪಾಸಣೆಗಳು ನಡೆಯುತ್ತವೆ. ಸಂಸದರಾದವರೂ ಕೂಡ ಸಂಸತ್ ಪ್ರವೇಶಿಸಬೇಕಾದರೆ ಯಾವುದೇ ವಸ್ತುವನ್ನು ಕೊಂಡೊಯ್ಯುವ ಹಾಗಿಲ್ಲ. ಪೆನ್, ಮೊಬೈಲ್, ಕನಿಷ್ಠ ಪಕ್ಷ ತುಂಡು ಕಾಗದವನ್ನೂ ಸಂಸತ್ ಒಳಗೆ ಬಿಡುವುದಿಲ್ಲ. ಇಷ್ಟು ಕಟ್ಟುನಿಟ್ಟಿನ ಭದ್ರತೆ ಇರುವ ಸಂಸತ್‌ಗೆ ಪ್ರವೇಶಿಸಿದ ಸಾಗರ್ ಶರ್ಮಾ ಮತ್ತು ಮನೋರಂಜನ್, ಬಣ್ಣದ ಹೊಗೆ ಕ್ಯಾನ್‌ಗಳನ್ನು ಕೊಂಡೊಯ್ದಿರುವುದು ಇಲ್ಲಿನ ಭದ್ರತಾ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಸಂಸತ್‌ನಲ್ಲಿ ಮಧ್ಯಾಹ್ನ 1.01ರ ವೇಳೆಯಲ್ಲಿ ಸೃಷ್ಟಿಯಾದ ಈ ಘಟನೆ ನಂತರ ಸುಮಾರು 45 ನಿಮಿಷ ಕಳೆದು ಮತ್ತೆ ಸಂಸತ್ ಕಲಾಪ ಆರಂಭವಾಯಿತು. ಈ ವೇಳೆ ಸಂಸತ್‌ನ ಸ್ಪೀಕರ್ ಓಂ ಬಿರ್ಲಾ ಅವರು ಮಾತನಾಡಿ, ಇಂದಿನ ಘಟನೆ ಬಗ್ಗೆ ವಿವರಿಸುವುದರ ಜೊತೆಗೆ ಭದ್ರತಾ ಲೋಪದ ಬಗ್ಗೆ ತನಿಖೆ ನಡೆಯಲಿದೆ. ಘಟನೆ ಕುರಿತು ಪ್ರತ್ಯೇಕ ತನಿಖೆ ನಡೆಸುವಂತೆ ದೆಹಲಿ ಪೊಲೀಸರಿಗೂ ನಿರ್ದೇಶಿಸಲಾಗುವುದು. ಸಂಸತ್ ಒಳಗೆ ಸಿಡಿಸಿದ ಹಳದಿ ಬಣ್ಣದ ಹೊಗೆ ಅಪಾಯಕಾರಿ ಅಲ್ಲ ಎಂದು ಪೊಲೀಸರು ಪ್ರಾಥಮಿಕ ಹಂತದ ತನಿಖೆ ನಡೆಸಿ ಹೇಳಿದ್ದಾರೆ. ಸಂಸತ್‌ನ ಗಮನ ಸೆಳೆಯುವ ಸಲುವಾಗಿ ಈ ಕೃತ್ಯವನ್ನು ಎಸಗಿರುವ ಸಾಧ್ಯತೆ ಬಗ್ಗೆಯೂ ಕೂಡ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ಇತ್ತೀಚೆಗೆ ಘೋಷಿತ ಭಯೋತ್ಪಾದಕ ಗುರು ಪತ್ವಂತ್ ಸಿಂಗ್ ಪನ್ನು, ಸಂಸತ್ ಮೇಲೆ ದಾಳಿ ನಡೆಸುವುದಾಗಿ ಬೆದರಿಕೆ ವೀಡಿಯೋ ಹರಿಬಿಟ್ಟಿರುವ ಬಗ್ಗೆ ಕೆಲವು ಸಂಸದರು ಪ್ರಸ್ತಾಪಿಸಿದರಾದರೂ, ಸಭಾಧ್ಯಕ್ಷರು ಅದರ ಬಗ್ಗೆ ಈಗ ಚರ್ಚೆ ಬೇಡ ಎಂದು ತಿಳಿಸಿ ಸಭೆ ಮುಂದುವರೆಸಿದರು. ಸಂಸತ್‌ನಲ್ಲಿ ಇಂದು ನಡೆದ ಘಟನೆ ಬಗ್ಗೆ ರಾಜ್ಯಸಭೆಯಲ್ಲೂ ಚರ್ಚೆ ನಡೆಯಿತು. ಗೃಹ ಸಚಿವ ಅಮಿತ್ ಶಾ ಅವರು ಘಟನೆ ಬಗ್ಗೆ ಮಾಹಿತಿ ನೀಡಬೇಕೆಂದು ವಿಪಕ್ಷಗಳ ಸದಸ್ಯರು ಪಟ್ಟು ಹಿಡಿದರು.

ಕಲರ್ ಗ್ಯಾಸ್ ಅಪಾಯಕಾರಿಯಲ್ಲ

ಹೊಗೆ ಅಪಾಯಕಾರಿಯೇ? ಅದರಲ್ಲಿ ವಿಷ ಅನಿಲ ಏನಾದರೂ ತುಂಬಿತ್ತೇ? ಎಂದು ಆತಂಕದಿಂದಲೇ ಸಂಸದರ ನಡುವೆ ಚರ್ಚೆ ನಡೆಯುತ್ತಿತ್ತು. ಈ ಹೊಗೆ ಬಗ್ಗೆ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿ, ಅದು ಅಪಾಯಕಾರಿಯಾಗಿರಲಿಲ್ಲ ಎಂದು ತಿಳಿಸಿದ್ದಾರೆ. ದುಷ್ಕರ್ಮಿಗಳು ಇಂದು ಸಿಡಿಸಿದ ಬಣ್ಣದ ಹೊಗೆ ಕ್ಯಾನ್‌ಗಳು ಸಾಧಾರಣವಾಗಿ ಅಂಗಡಿಗಳಲ್ಲಿ ದೊರೆಯುತ್ತವೆ. ಈ ಬಣ್ಣದ ಹೊಗೆಯ ಬಳಕೆ ವ್ಯಾಪಕವಾಗಿ ಸಮಾರಂಭಗಳಲ್ಲಿ ನಡೆಯುತ್ತವೆ. ಕ್ರೀಡೆಗಳಲ್ಲಿ, ಫೋಟೋ ಶೂಟ್‌ಗಳಲ್ಲಿ, ಹುಟ್ಟುಹಬ್ಬ ಹಾಗೂ ಮದುವೆ ಸಮಾರಂಭಗಳಲ್ಲೂ ಬಳಸುವಂತಹ ಬಣ್ಣದ ಹೊಗೆಯನ್ನು ದುಷ್ಕರ್ಮಿಗಳು ಸಂಸತ್‌ನಲ್ಲಿ ಬಳಸಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ.

ಮಗನೇ ಆಗಿರಲಿ ಗಲ್ಲಿಗೇರಿಸಬೇಕು...!

ಮಾಧ್ಯಮಗಳಿಂದ ಮಗನ ಕೃತ್ಯದ ಬಗ್ಗೆ ಮಾಹಿತಿ ಸಿಕ್ಕಿದ ಮೇಲೆ ಆತಂಕ ಉಂಟಾಯಿತು. ಆತ ಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡುವ ಮನೋಭಾವ ಹೊಂದಿದ್ದ ಎಂದರು.

ಕೆಟ್ಟದ್ದು ಮಾಡಿದ್ದರೆ ನನ್ನ ಮಗನೇ ಅಲ್ಲ: ಅವನ ಪಾಡಿಗೆ ಹೋಗುತ್ತಿದ್ದ ಬರುತ್ತಿದ್ದ. ದೆಹಲಿಗೂ ಏನೋ ಕೆಲಸ ಇದೆ ಎಂದು ಆಗಾಗ್ಗೆ ಹೋಗುತ್ತಿದ್ದ. ಮೊನ್ನೆ ಹೋಗುವಾಗ ಬೆಂಗಳೂರಿಗೆ ಹೋಗುತ್ತಿದ್ದೇನೆ ಎಂದು ಹೇಳಿದ್ದ. ವಯಸ್ಸಾಯಿತು ಮದುವೆ ಮಾಡಿಕೊ ಎಂದು ಹೇಳುತ್ತಿದ್ದೆ. ಸಮಾಜ ಸೇವೆ ಮಾಡಬೇಕು, ನೊಂದ ವ್ಯಕ್ತಿಗಳಿಗೆ ಒಳ್ಳೆಯದು ಮಾಡಬೇಕು ಎನ್ನುತ್ತಿದ್ದ. ಪುಸ್ತಕಗಳೇ ಅವನಿಗೆ ಆದರ್ಶ. ಓಡಾಡಿಕೊಂಡಿದ್ದ ಹಿನ್ನೆಲೆಯಲ್ಲಿ ನಾವು ಕರೆ ಮಾಡಲು ಹೋಗಲಿಲ್ಲ. ಕೆಟ್ಟದ್ದು ಮಾಡಿದ್ದರೆ ಖಂಡಿಸುತ್ತೇನೆ. ಸಮಾಜಕ್ಕೆ ಅನ್ಯಾಯ ಮಾಡಿದ್ದರೆ ಅವನು ನನ್ನ ಮಗನೇ ಅಲ್ಲ, ಗಲ್ಲಿಗೇರಿಸಲಿ ಎಂದು ಪುನರುಚ್ಚರಿಸಿದರು. ಅವನಲ್ಲಿ ಸಮಾಜಕ್ಕೆ ಒಳ್ಳೆಯದು ಮಾಡಬೇಕೆಂಬ ಹಂಬಲ ಇತ್ತು. ದುಡಿದು ತಿನ್ನಬೇಕು ಎಂದು ಬುದ್ಧಿ ಹೇಳುತ್ತಿದ್ದೆ. ನಮ್ಮದು ರೈತ ಕುಟುಂಬವಾಗಿದ್ದು, ನಮ್ಮ ಕುಟುಂಬದಲ್ಲಿ ಯಾರೂ ಯಾವುದೇ ಸಮಾಜಘಾತುಕ ಕೃತ್ಯಗಳಲ್ಲಿ ಭಾಗಿಯಾಗಿಲ್ಲ. ನಾವು ಮೂಲತಃ ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನವರು. ಅಲ್ಲಿ ನಮ್ಮ ತೋಟವಿದೆ. ಮಗನ ಶಿಕ್ಷಣಕ್ಕಾಗಿ ಮೈಸೂರಿಗೆ ಬಂದು ನೆಲೆಸಿದೆವು. ಮೈಸೂರಿಗೆ ಬಂದು 15 ವರ್ಷಗಳಾಗಿವೆ. ಮೈಸೂರಿನ ಸಂತ ಜೋಸೆಫ್ ಶಾಲೆಯಲ್ಲಿ ಪ್ರೌಢ ಶಿಕ್ಷಣ ಮತ್ತು ಮರಿಮಲ್ಲಪ್ಪ ಕಾಲೇಜಿನಲ್ಲಿ ಪದವಿಪೂರ್ವ ಶಿಕ್ಷಣ ಪೂರೈಸಿದ್ದಾನೆ. ಬಳಿಕ ಬೆಂಗಳೂರಿನ ಬಿಐಟಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿಯನ್ನು 2013-14ರಲ್ಲಿ ಮುಗಿಸಿದ ಎಂದು ಮಾಹಿತಿ ನೀಡಿದರು.

ಮಗನಿಗಾಗಿ ಸ್ವಯಂ ಉದ್ಯೋಗ ವ್ಯವಸ್ಥೆ: ಅವನಿಗಾಗಿ ನನ್ನ ಜಮೀನಿನಲ್ಲಿ ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ವ್ಯವಸ್ಥೆಗಳನ್ನು ಮಾಡಿಕೊಟ್ಟಿದ್ದೇನೆ. ಆಗಾಗ್ಗೆ ಅಲ್ಲಿ ಹೋಗಿ ನೋಡಿಕೊಳ್ಳುತ್ತಲೂ ಇದ್ದ. ಬೇರೆಲ್ಲಿಯೂ ಹೋಗದೇ ಮನೆಯಲ್ಲೇ ಇರುತ್ತಿದ್ದ. ಇದರ ಹೊರತಾಗಿ ಬೆಂಗಳೂರಿಗೆ ಹೋಗುತ್ತಿದ್ದ. ಸಮಾಜಕ್ಕೆ ಒಳ್ಳೆಯದು ಮಾಡಬೇಕೆಂಬ ಭಾವನೆ ಆತನಲ್ಲಿತ್ತು. ಯಾವುದೇ ಪಕ್ಷದಲ್ಲಿ ಗುರುತಿಸಿಕೊಂಡಿರಲಿಲ್ಲ. ಜೀವನದಲ್ಲಿ ಎಂದೂ ನಿಮಗೆ ಕೆಟ್ಟ ಹೆಸರು ತರುವುದಿಲ್ಲ ಎಂದು ಹೇಳುತ್ತಿದ್ದ. ಒಳ್ಳೆಯದನ್ನೇ ಮಾಡುತ್ತೇನೆ ಎನ್ನುತ್ತಿದ್ದ ಎಂದು ಹೇಳಿದರು.

ಅವನ ಖರ್ಚು ಶೂನ್ಯ: ಅವನ ಖರ್ಚು ಶೂನ್ಯ ಯಾವುದಾದರೂ ಊರಿಗೆ ಹೋಗಬೇಕಾದರೆ ನನ್ನ ಬಳಿ ಹಣ ಕೇಳಿ ಪಡೆಯುತ್ತಿದ್ದ. ಯಾವುದೇ ಕೆಟ್ಟ ಅಭ್ಯಾಸ ಇರಲಿಲ್ಲ. ಇಡೀ ವಿಜಯನಗರದಲ್ಲಿ ಒಬ್ಬರಿಗೂ ತೊಂದರೆ ಕೊಟ್ಟವನಲ್ಲ. ಒಳ್ಳೆಯ ಹುಡುಗ, ಸಮಾಜಕ್ಕೆ ಒಳ್ಳೆಯದು ಮಾಡಬೇಕೆಂಬ ತುಡಿತ ಅವನಲ್ಲಿತ್ತು. ಮಹನೀಯರ ಕುರಿತ ಪುಸ್ತಕಗಳನ್ನು ಓದುತ್ತಿದ್ದ. ನನ್ನ ಪುತ್ರನೇ ಇರಲಿ ಯಾರೇ ಇರಲಿ ಕೃತ್ಯ ಖಂಡನೀಯ ಎಂದರು.

ಪಾಸ್ ಬಗ್ಗೆ ಮಾಹಿತಿಯಿಲ್ಲ: ನಾವು ಪ್ರತಾಪ್ ಸಿಂಹ ಅವರ ಮತದಾರರಾಗಿದ್ದು, ಅವರಿಗೆ ನಾವು ಆತ್ಮೀಯರು. ಹಾಗಾಗಿ ಇದರ ಆಧಾರದಲ್ಲಿ ಸಂಸತ್ ಪ್ರವೇಶಕ್ಕೆ ಪಾಸ್ ಪಡೆದುಕೊಂಡಿದ್ದಾನೇನೋ ಗೊತ್ತಿಲ್ಲ. ಈ ಬಗ್ಗೆ ಹೆಚ್ಚಿನ ಮಾಹಿತಿ ನನ್ನ ಬಳಿ ಇಲ್ಲ ಎಂದು ದೇವರಾಜೇಗೌಡ ತಿಳಿಸಿದರು.

ಪೊಲೀಸರ ಪರಿಶೀಲನೆ

ದಿಗ್ಭ್ರಮೆ ವ್ಯಕ್ತಪಡಿಸಿದರು. ವಿಜಯನಗರದ ಎರಡನೇ ಹಂತದ 15ನೇ ಮೇನ್‌ನ 3ನೇ ಕ್ರಾಸಿನಲ್ಲಿ ಮನೋರಂಜನ್ ಮನೆ ಇದ್ದು, ವಿಷಯ ತಿಳಿಯುತ್ತಿದ್ದಂತೆ ಬುಧವಾರ ಮಧ್ಯಾಹ್ನ ಮನೋರಂಜನ್ ಮನೆಗೆ ಭೇಟಿ ನೀಡಿದ ಹಿರಿಯ ಪೊಲೀಸ್ ಅಧಿಕಾರಿಗಳು, ಪೋಷಕರಿಂದ ಮನೋರಂಜನ್ ಬಗ್ಗೆ ಮಾಹಿತಿ ಪಡೆದರು.

ವಿಜಯನಗರ ಉಪವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್, ವಿಜಯನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್ ಸೇರಿದಂತೆ ಆಂತರಿಕ ಭದ್ರತಾ ವಿಭಾಗದ ಅಧಿಕಾರಿಗಳು, ರಾಜ್ಯ ಗುಪ್ತ ವಾರ್ತೆ ವಿಭಾಗದ ಅಧಿಕಾರಿಗಳು, ಕೇಂದ್ರ ಗುಪ್ತಚರ ಇಲಾಖೆ ಅಧಿಕಾರಿಗಳು ಪ್ರಕರಣ ಸಂಬಂಧ ನಿಗಾ ವಹಿಸಿದ್ದಾರೆ.

ಮನೆಯ ಎರಡನೇ ಅಂತಸ್ತಿನ ಮನೋರಂಜನ್ ಕೊಠಡಿ ಪರಿಶೀಲಿಸಿದ ವೇಳೆ ಕ್ರಾಂತಿಕಾರಿಗಳ ಬಗೆಗಿನ ಪುಸ್ತಕಗಳು ಇರುವುದು ಕಂಡು ಬಂದಿದೆ. ನೆರೆ ಮನೆಯ ನಿವಾಸಿಗಳಿಂದಲೂ ಪೊಲೀಸರು ಅನೇಕ ಮಾಹಿತಿ ಕಲೆ ಹಾಕಿದರು.

ಹಾಸನ ಮೂಲ: ಮನೋರಂಜನ್ ತಂದೆ ದೇವರಾಜೇಗೌಡ ಅವರು ಮೂಲತಃ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕು ರಾಮನಾಥಪುರ ಹೋಬಳಿಯ ಮಲ್ಲಾಪುರ ಗ್ರಾಮದವರು. ದೇವರಾಜೇಗೌಡ ಕೃಷಿಕರಾಗಿದ್ದು, ಮಕ್ಕಳ ಶಿಕ್ಷಣಕ್ಕಾಗಿ ಮೈಸೂರಿನ ವಿಜಯನಗರದಲ್ಲಿ ಸ್ವಂತ ಮನೆ ನಿರ್ಮಿಸಿಕೊಂಡು ವಾಸವಾಗಿದ್ದಾರೆ. ಮೊದಲ ಅಂತಸ್ತಿನಲ್ಲಿ ದೇವರಾಜೇಗೌಡ ಕುಟುಂಬ ವಾಸವಾಗಿದ್ದು, ನೆಲ ಮತ್ತು ಎರಡನೇ ಅಂತಸ್ತಿನ ಮನೆಗಳನ್ನು ಬಾಡಿಗೆಗೆ ನೀಡಿದ್ದಾರೆ.

ತಾಯಿ ಕಣ್ಣೀರು: ಪದೇ ಪದೆ ಏನೇನೋ ಕೇಳಬೇಡಿ ಎಂದು ಮನೋರಂಜನ್ ತಾಯಿ ಶೈಲಜಾ ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದ ಮಾಧ್ಯಮದವರ ಎದುರು ಕಣ್ಣೀರಿಟ್ಟರು. ನಾನು ಹಾರ್ಟ್ ಪೇಷೆಂಟ್. ಕಳೆದ 2 ದಿನಗಳ ಹಿಂದೆ ಫೋನ್‌ನಲ್ಲಿ ಮಗನೊಂದಿಗೆ ಮಾತನಾಡಿದ್ದೆ. ಆತ ಅವಿವಾಹಿತ. ಈಗಾಗಲೇ ನನ್ನ ಪತಿ ಎಲ್ಲಾ ಮಾತನಾಡಿದ್ದಾರೆ. ಬಾಣಂತಿ, ಮಗು ಮನೆಯಲ್ಲಿದ್ದಾರೆ. ಮಗನ ಈ ಕೆಲಸ ಗೊತ್ತಾಗಿ ಬೇಸರದಲ್ಲಿದ್ದೇವೆ. ಟಿವಿ ನೋಡಿದಾಗಲೇ ಗೊತ್ತಾಗಿದ್ದು. ಅವನಿಗೆ ಹೆಚ್ಚಾಗಿ ಸ್ನೇಹಿತರೇ ಇಲ್ಲ. ಮೈಸೂರಿನಿಂದ ಮೂರು ದಿನಗಳ ಹಿಂದೆ ಬೆಂಗಳೂರಿಗೆ ಹೋಗುವುದಾಗಿ ಹೋದ. ನಮಗೆ ಒಬ್ಬನೇ ಮಗ, ಒಬ್ಬಳೇ ಮಗಳು. ಸುಮಾರು ವರ್ಷಗಳಿಂದ ಅವನು ಓಟನ್ನೇ ಮಾಡಿಲ್ಲ ಎಂದು ಕೆಲ ಪ್ರಶ್ನೆಗಳಿಗೆ ಉತ್ತರಿಸಿ, ಹೆಚ್ಚು ಮಾತನಾಡಲು ನಿರಾಕರಿಸಿದರು.

ಐಎಎಸ್,ಐಪಿಎಸ್ ಪರೀಕ್ಷೆ ಬರೆಯುವವರು ಮುಂದಿಟ್ಟ ಹೆಜ್ಜೆ ಹಿಂದಿಡಬಾರದು

ಪರೀಕ್ಷಾರ್ಥಿಗಳಿಗೆ ಐಎಎಸ್ ಅಧಿಕಾರಿ ಲಕ್ಷ್ಮಿ ಪ್ರಿಯಾ ಟಿಪ್ಸ್



ಮೈಸೂರು, ಡಿ.13(ಬಿಎಲ್‌ಯು)-ಐಎಎಸ್, ಐಪಿಎಸ್ ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗಿಯಾಗುವವರು ಗುರಿ ಮುಟ್ಟುವ ತನಕ ಹಿಂದೆ ಸರಿಯಬಾರದು ಎಂದು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ನಿರ್ದೇಶಕಿ ಕೆ.ಲಕ್ಷ್ಮಿ ಪ್ರಿಯಾ ಸಲಹೆ ನೀಡಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಐಎಎಸ್ ಹಾಗೂ ಕೆಎಎಸ್ ಪರೀಕ್ಷಾ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಬಹಳಷ್ಟು ವಿದ್ಯಾರ್ಥಿಗಳು ಐಎಎಸ್,ಐಪಿಎಸ್ ಸೇರಿದಂತೆ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗಿಯಾಗುತ್ತಾರೆ. ಆದರೆ ಪರಿಶ್ರಮ ಪಡಬೇಕು, ಇದು ನಮಗೆ ಕಬ್ಬಿಣದ ಕಡಲೆ ಎಂದು ತೀರ್ಮಾನಿಸಿ ಅರ್ಧಕ್ಕೆ ಬಂದು ಹಿಂದಕ್ಕೆ ಸರಿಯುತ್ತಾರೆ ಎಂದರು. ಯುಪಿಎಸ್‌ಸಿ ಪರೀಕ್ಷೆಯಲ್ಲಿ 10 ಲಕ್ಷ ಜನರು ಪರೀಕ್ಷೆ ಬರೆದರೆ, ಸಾವಿರ ಅಭ್ಯರ್ಥಿಗಳು ಆಯ್ಕೆಯಾಗುತ್ತಾರೆ.

10 ಲಕ್ಷ ಜನರಲ್ಲಿ ನಾವು ಆಯ್ಕೆಯಾಗುವುದು ಕಷ್ಟ ಎಂಬ ನಿರ್ಧಾರಕ್ಕೆ ಬರಬಾರದು. ಮುಂದಿಟ್ಟ ಹೆಜ್ಜೆ ಹಿಂದಿಡದೆ ಪರಿಶ್ರಮದಿಂದ ಗುರಿ ಮುಟ್ಟುತ್ತೇನೆ ಎಂಬ ಸವಾಲು ಸ್ವೀಕಾರ ಮಾಡಬೇಕು ಎಂದು ಲಕ್ಷ್ಮಿ ಪ್ರಿಯಾ ಪರೀಕ್ಷಾರ್ಥಿಗಳನ್ನು ಹುರಿದುಂಬಿಸಿದರು. ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರಿಗೆ ಕಠಿಣ ಪರಿಶ್ರಮ ಮುಖ್ಯ. ಓದು ಹಾಗೂ ಮಾಹಿತಿ ಸಂಗ್ರಹದಲ್ಲಿ ಶಿಸ್ತು ಹಾಗೂ ಬದ್ಧತೆ ಮುಖ್ಯ. ಇದನ್ನು ಪಾಲಿಸದ ಹೊರತು ನಿಗದಿತ ಗುರಿ ಮುಟ್ಟಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗಿಯಾಗುವವರು ಮೊದಲು ಪಠ್ಯ ಅಧ್ಯಯನ ಹಾಗೂ ಹಿಂದಿನ ವರ್ಷದ ಪ್ರಶ್ನೆ ಪತ್ರಿಕೆಗಳ ಬಗ್ಗೆ ಅಧ್ಯಯನ ಮಾಡಬೇಕು ಎಂದು ಹೇಳಿದರು. ಇಂಗ್ಲಿಷ್ ಬಗ್ಗೆ ತಿಳುವಳಿಕೆ ಇಲ್ಲವೆಂದು ಸ್ಪರ್ಧಾತ್ಮಕ ಪರೀಕ್ಷೆಯಿಂದ ಹಿಂದೆ ಸರಿಯಬಾರದು. ಯುಪಿಎಸ್‌ಸಿ ತಮಗಿಚ್ಛಿಸಿದ ಯಾವುದೇ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶವಿದೆ. ಇದರಿಂದ ಇಂಗ್ಲಿಷ್ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲವೆಂದು ಕೀಳರಿಮೆ ಬೇಡ. ಆದರೆ ಇಂಗ್ಲಿಷ್ ಬಗ್ಗೆ ಕನಿಷ್ಟ ಜ್ಞಾನ ತಿಳಿದಿರಬೇಕು ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇತ್ತೀಚೆಗೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುತ್ತಿದ್ದಾರೆ. ಇತ್ತೀಚಿನ ಅಂಕಿ-ಅಂಶದ ಪ್ರಕಾರ 180 ಅಭ್ಯರ್ಥಿಗಳ ಆಯ್ಕೆಯಲ್ಲಿ 53 ಮಹಿಳೆಯರು ಆಯ್ಕೆಗೊಂಡಿದ್ದಾರೆ. ಇದರಿಂದ ಮಹಿಳೆಯರು ತಮ್ಮ ಬಗ್ಗೆ ಕೀಳರಿಮೆ ತೋರದೆ ಪುರುಷರಷ್ಟೇ ಸಮಾನವಾಗಿ ನಿಲ್ಲುತ್ತೇವೆ ಎಂಬ ಛಲದಿಂದ, ಪರಿಶ್ರಮದಿಂದ ಓದಿ ಸ್ಪರ್ಧಾತ್ಮಕ ಪರೀಕ್ಷೆಗೆ ಆಯ್ಕೆಯಾಗಬೇಕು ಎಂದು ಹೇಳಿದರು.

ಐಎಎಸ್, ಐಪಿಎಸ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳನ್ನು ಒಂದೇ ದಿನದಲ್ಲಿ ಅಧ್ಯಯನ ಮಾಡಲು ಸಾಧ್ಯವಿಲ್ಲ. ಒಂದೇ ಬಾರಿಗೆ ಓದಿದರೆ ಗೊಂದಲ ಉಂಟಾಗಿ ನೆನಪಿಗೆ ಬರುವುದಿಲ್ಲ. ಆದ ಕಾರಣ ನಿಧಾನವಾಗಿ ಮನದಟ್ಟಾಗುವಂತೆ ಪುಸ್ತಕಗಳನ್ನು ಓದಬೇಕು. ಪುಸ್ತಕಗಳ ಜೊತೆಗೆ ಆನ್‌ಲೈನ್‌ನಲ್ಲಿ ದೊರೆಯುವ ಮಾಹಿತಿಯನ್ನು ಕಲೆ ಹಾಕಬೇಕು ಎಂದು ಲಕ್ಷ್ಮಿ ಪ್ರಿಯಾ ಸಲಹೆ ನೀಡಿದರು.

ನಿಮ್ಮ ಬಗ್ಗೆ ಯಾರು ಏನು ಮಾತನಾಡಿದರೂ, ಕಾಲೆಳೆದರೂ ತಲೆಕೆಡಿಸಿಕೊಳ್ಳಬೇಡಿ, ಪ್ರತಿದಿನ ಹೊಸತನ್ನು ಕಲಿತು ಗುರಿ ಮುಟ್ಟುವತ್ತ ಸಾಗಿ ಎಂದು ಧೈರ್ಯ ತುಂಬಿದ ಲಕ್ಷ್ಮಿ ಪ್ರಿಯಾ, ಅಂಧನೊಬ್ಬ ಐಎಎಫ್‌ಗೆ ಆಯ್ಕೆಯಾಗಿ ಈಗ ಮಲೇಷಿಯಾದಲ್ಲಿ ಕೆಲಸ ಮಾಡುತ್ತಿದ್ದಾರೆ. ಕಡು ಬಡತನದಿಂದ ಬಂದವರು ಈಗ ಐಎಎಸ್ ಅಧಿಕಾರಿಗಳಾಗಿದ್ದಾರೆ. ಇದರಿಂದ ಬದುಕಿನ ಸವಾಲು ಸ್ವೀಕರಿಸಿ ಗುರಿ ಮುಟ್ಟಲು ಪರಿಶ್ರಮಿಸಿ ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಪ್ರತಿಯೊಬ್ಬರು ಮೊದಲು ಗುರಿಯನ್ನು ನಿರ್ಧರಿಸಿಕೊಳ್ಳಿ, ಇದರಲ್ಲಿ ನಾನು ಯಶಸ್ವಿಯಾಗುತ್ತೇನೆ ಎಂದು ನಿಮಗೆ ಮನವರಿಕೆಯಾದ ಮೇಲೆ ಅದೇ ಹಾದಿಯಲ್ಲಿ ಸಾಗಿ. ಆದರೆ ಬಹಳಷ್ಟು ಜನರು ಗುರಿ ನಿರ್ಧರಿಸುವಲ್ಲಿ ವಿಫಲರಾಗುತ್ತಾರೆ. ಇದರಿಂದ ಅವರ ಭವಿಷ್ಯದ ಬದುಕು ವಿಫಲತೆಗಳಿಂದ ಕೂಡಿರುತ್ತದೆ ಎಂದರು.

ಸಮಯ ವ್ಯರ್ಥ ಮಾಡದೆ ಓದುವ ಹವ್ಯಾಸ ಬೆಳೆಸಿಕೊಳ್ಳಿ. ನಿಮ್ಮ ಪ್ರಯತ್ನದಲ್ಲಿ ಸೋಲಾದರೆ ಎದೆಗುಂದದೆ ಅದನ್ನೇ ಸವಾಲಾಗಿ ಸ್ವೀಕರಿಸಿ ಮುಂದಿನ ಪ್ರಯತ್ನದಲ್ಲಿ ಯಶಸ್ವಿ ಗಳಿಸಿ. ನಿಮ್ಮ ಬಗ್ಗೆ ಯಾರಾದರೂ ಕೀಳಾಗಿ ಮಾತನಾಡಿದರೆ ಕಿವಿಗೆ ಹಾಕಿಕೊಳ್ಳದೆ ನಿರಂತರ ಪರಿಶ್ರಮದಲ್ಲಿ ತಲ್ಲೀನರಾಗಿ ಎಂದು ಹೇಳಿದರು.

ನನಗೆ ಚಿಕ್ಕ ವಯಸ್ಸಿನಿಂದ ಐಪಿಎಸ್ ಅಧಿಕಾರಿಯಾಗುವ ಆಸೆ ಇತ್ತು. ನೀನು ಯಾವ ವೃತ್ತಿಗೆ ಸೇರುತ್ತೀಯಾ ಎಂದು ಕೇಳಿದರೆ ಐಪಿಎಸ್ ಅಧಿಕಾರಿಯಾಗುತ್ತೇನೆ ಎಂದು ಯಾವಾಗಲೂ ಹೇಳುತ್ತಿದ್ದೆ. ಕಾಲೇಜು ಮುಗಿದ ನಂತರ ರಜೆಯಲ್ಲಿ ಜರ್ಮನ್ ಭಾಷೆ ಕಲಿಕೆ ಸೇರಿದಂತೆ ಇತರೆ ಚಟುವಟಿಕೆಯಲ್ಲಿ ತೊಡಗುತ್ತಿದ್ದೆ ಎಂದು ಸೀಮಾ ಲಾಟ್ಕರ್ ತಮ್ಮ ಅನುಭವ ಹಂಚಿಕೊಂಡರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ. ಕೆ.ಬಿ.ಪ್ರವೀಣ್, ಕಾರ್ಯಕ್ರಮ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿಷ್ಣು ಸ್ಮಾರಕ ಉಳಿವಿಗಾಗಿ ಜಾಗೃತಿ ಮೂಡಿಸಲು 'ಸಿಂಹ ಘರ್ಜನೆ' ರಥಕ್ಕೆ ಚಾಲನೆ



ಮೈಸೂರು, ಡಿ.13(ಜಿಎ)-ನಟ ವಿಷ್ಣುವರ್ಧನ್ ಸ್ಮಾರಕದ ಉಳಿವಿಗಾಗಿ ಅಭಿಮಾನಿಗಳಿಗೆ ಜಾಗೃತಿ ಮೂಡಿಸಲು ನಗರದ 101 ಗಣಪತಿ ದೇವಾಲಯದಿಂದ ಬುಧವಾರ ಅಭಿಮಾನಿ ಜಾಗೃತ ಯಾತ್ರೆಯ ಸಿಂಹ ಘರ್ಜನೆ ರಥಕ್ಕೆ ಚಾಲನೆ ದೊರೆಯಿತು.

ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿರುವ ನಟ ವಿಷ್ಣುವರ್ಧನ್ ಸ್ಮಾರಕವನ್ನು ಉಳಿಸಿಕೊಳ್ಳಬೇಕೆಂದು ಡಾ.ವಿಷ್ಣುಸೇನಾ ಸಮಿತಿ ವತಿಯಿಂದ ಡಿ.17ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಬೃಹತ್ ಪ್ರತಿಭಟನೆಗೆ ಅಭಿಮಾನಿಗಳನ್ನು ಜಾಗೃತಗೊಳಿಸಲು ರಾಜ್ಯಾದ್ಯಂತ ಅಭಿಮಾನಿಗಳನ್ನು ಸಂಘಟಿಸಲು ಸಮಿತಿ ಸಿಂಹ ಘರ್ಜನೆ ರಥಕ್ಕೆ ಚಾಲನೆ ನೀಡಿದೆ.

ಈ ಕುರಿತು ಸಮಿತಿಯ ಜಿಲ್ಲಾಧ್ಯಕ್ಷ ಲೋಕೇಶ್ ಮಾತನಾಡಿ, ಇಂದಿನಿಂದ ನಾಲ್ಕು ದಿನಗಳ ಕಾಲ ಮೈಸೂರು ಜಿಲ್ಲೆಯಾದ್ಯಂತ 700 ಕಿಮೀ ಸಂಚರಿಸಿ, ನಂತರ ಡಿ.17ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಲಾಗಿದೆ. ಸ್ಮಾರಕ ಎಲ್ಲಿ ಬೇಕಾದರು ಮಾಡಬಹುದು. ಆದರೆ ವಿಷ್ಣುವರ್ಧನ್ ಅಭಿಮಾನಿಗಳಿಗೆ ಅಭಿಮಾನ್ ಸ್ಟುಡಿಯೋನೆ ನಿಜಕ್ಕೂ ಪುಣ್ಯಭೂಮಿ. ಅಂತ್ಯಸಂಸ್ಕಾರ ನಡೆದ ಸ್ಥಳವನ್ನು ನಾವು ಬಿಟ್ಟು ಕೊಡಲು ಸಾಧ್ಯವಿಲ್ಲ. ಅಂದಿನ ಪ್ರತಿಭಟನೆಗೆ ಲಕ್ಷಾಂತರ ಅಭಿಮಾನಿಗಳು ಆಗಮಿಸಲಿದ್ದಾರೆ. ನಮ್ಮ ಹೋರಾಟ ಏನಿದ್ದರು ಪುಣ್ಯ ಭೂಮಿಗಾಗಿ ಎಂದು ತಿಳಿಸಿದರು.



ಮೈಸೂರಿನ ವಿದ್ಯಾವರ್ಧಕ ಪಿಯು ಕಾಲೇಜು ವತಿಯಿಂದ ಆಯೋಜಿಸಲಾಗಿದ್ದ 2023-24ನೇ ಸಾಲಿನ ದಿವಂಗತ ಎಚ್.ಕೆಂಪೇಗೌಡ, ದಿವಂಗತ ಆರ್.ನಂಜಯ್ಯ ಮತ್ತು ದಿವಂಗತ ಎಚ್.ಟಿ.ನರಸೇಗೌಡ ಸ್ಮಾರಕ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಪಿಯು ಕಾಲೇಜು ಬಾಲಕರ ಕಬಡ್ಡಿ ತಂಡವು ಪ್ರಥಮ ಸ್ಥಾನವನ್ನು ತಮ್ಮದಾಗಿಸಿಕೊಂಡಿತು.

ಕೃಷಿ ಭಾಗ್ಯ ಯೋಜನೆ ಶೀಘ್ರದಲ್ಲೇ ಅನುಷ್ಠಾನ



ಬೆಳಗಾವಿ, ಡಿ.13(ಕೆಎಂಶಿ)-ಕೃಷಿ ಭಾಗ್ಯ ಯೋಜನೆ ಶೀಘ್ರದಲ್ಲೇ ಅನುಷ್ಠಾನಗೊಳ್ಳಲಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಸಿ.ಎನ್.ಬಾಲಕೃಷ್ಣ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಯೋಜನೆಗೆ ಮರುಚಾಲನೆ ನೀಡಲಾಗಿದೆ, ಇಲಾಖೆ ನಿರ್ಧಾರಕ್ಕೆ ಸಂಪುಟದ ಒಪ್ಪಿಗೆಯೂ ದೊರೆತಿದೆ ಎಂದರು. ಕೃಷಿ ಭಾಗ್ಯ ಯೋಜನೆ ಲಾಭ ಪಡೆಯಲು ರೈತರಿಗಾಗಿ ಮಾರ್ಗಸೂಚಿ ಹೊರಡಿಸಲಾಗಿದ್ದು, ಇದರ ಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಿದರು. ರಾಜ್ಯದಲ್ಲಿನ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಪ್ರಸಕ್ತ ತಿಂಗಳಾಂತ್ಯದೊಳಗೆ ಬೆಳೆ ವಿಮೆ ಹಣ ಪಾವತಿಯಾಗಲಿದೆ ಎಂದರು. ಶರಣು ಸಲಗಾರ ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಈ ವರ್ಷ ಬರ ಹಿಂದೆಂದಿಗಿಂತಲೂ ತೀವ್ರವಾಗಿದೆ, ಪ್ರಸ್ತುತ ಸಾಲಿನ ಬೆಳೆ ಕುವಾವು ಸಮೀಕ್ಷೆ ಪೂರ್ಣಗೊಂಡಿದ್ದು, ಉಳಿದ ರೈತರಿಗೂ ವಿಮೆ ಹಣ ಶೀಘ್ರ ತಲುಪಲಿದೆ ಎಂದರು.

ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಕಲ್ಪಿಸಲು ಆದಷ್ಟು ಕ್ರಮ



ಬೆಳಗಾವಿ, ಡಿ.13(ಕೆಎಂಶಿ)- ರಾಜ್ಯದಲ್ಲಿ ಸಾಧ್ಯವಾದಷ್ಟು ಕಡೆಗಳಲ್ಲಿ ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿಧಾನಸಭೆಗಿಂದು ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಷಡಕ್ಷರಿ.ಕೆ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ 4 ಸಾವಿರ ಸರ್ಕಾರಿ ನಿವೇಶನಗಳಿಗೆ ಅಂಗನವಾಡಿ ಹೆಸರು ಹಾಕಿಸಲಾಗಿದೆ, ನಿವೇಶನ ದೊರೆತ ತಕ್ಷಣ ಅಗತ್ಯವಿರುವೆಡೆ ಸ್ವಂತ ಕಟ್ಟಡ ನಿರ್ಮಾಣ ಮಾಡಲಾಗುವುದು ಎಂದರು.

ಸಾರ್ವಜನಿಕ ಸೌಲಭ್ಯಕ್ಕೆ ಮೀಸಲಿಟ್ಟಿರುವ ನಿವೇಶನಗಳನ್ನು ಅಂಗನವಾಡಿ ಕಟ್ಟಡಕ್ಕೆ ಬಳಸುವ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು. ಶರಣಗೌಡ ಕಂದಕೂರು ಅವರ ಪ್ರತ್ಯೇಕ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬಾಲ್ಯವಿವಾಹ ಪದ್ಧತಿಯನ್ನು ಬೇರು ಸಮೇತ ಕಿತ್ತು ಹಾಕಲು ಇಲಾಖೆ ಸನ್ನದ್ಧವಾಗಿದೆ ಎಂದರು.

ಬಾಲ್ಯವಿವಾಹ ಪ್ರಕರಣಗಳನ್ನು ಮುಚ್ಚಿ ಹಾಕಲು ಯಾರಿಂದಲೂ ಸಾಧ್ಯವಿಲ್ಲ, ರಾಜ್ಯದಲ್ಲಿ ಈಗ ಅತ್ಯಂತ ಪ್ರಬಲವಾದ ಕಾನೂನು ಇದೆ, ನಿರ್ದಿಷ್ಟ ಪ್ರಕರಣಗಳನ್ನು ಗಮನಕ್ಕೆ ತಂದರೆ ತಕ್ಷಣ ಕ್ರಮ ಕೈಗೊಳ್ಳಲಾಗುವುದು. ಮಕ್ಕಳ ಹಕ್ಕುಗಳ ರಕ್ಷಣೆಗೆ ವಿವಿಧ ನಿಯಮಗಳಡಿ ಕೆಲಸ ಮಾಡಲಾಗುತ್ತಿದೆ, ಅನುಷ್ಠಾನದಲ್ಲಿನ ಕೊರತೆಗಳನ್ನು ಸರ್ಕಾರ ಗಮನಿಸಿದೆ, ಅವುಗಳನ್ನು ಪರಿಹರಿಸಿ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಲು ಇಲಾಖೆ ಮುಂದಾಗಿದೆ. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗವು ದಾಖಲಾಗುವ ನಿರ್ದಿಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುತ್ತದೆ ಎಂದರು.

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಪ್ರತಿಮೆ ವಿವಾದ: ಸೌಹಾರ್ದಯುತವಾಗಿ ಬಗೆಹರಿಯಲಿ



ಮೈಸೂರು, ಡಿ.13(ಜಿಎ)-ಜಿಲ್ಲಾಡಳಿತದ ನಿರ್ಲಕ್ಷ್ಯದಿಂದ ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ ಪ್ರತಿಮೆ ರಾತ್ರೋರಾತ್ರಿ ಸ್ಥಾಪಿಸಲಾಗಿದೆ. ಇದರಿಂದ ಮೈಸೂರಿನ ರಾಜ ಪರಂಪರೆ ಹಾಗೂ ಗುರು ಪರಂಪರೆಗಳ ನಡುವೇ ಸಂಘರ್ಷ ಉಂಟಾಗುತ್ತಿದ್ದು, ಇದನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಪ್ರತಿಮೆ ಎರಡು ವರ್ಷಗಳ ಹಿಂದೆ ಸದರಿ ಜಾಗದಲ್ಲಿ ಸ್ಥಾಪನೆ ಆಗಬೇಕಿತ್ತು. ಆದರೆ, ಕೆಲವು ವಿವಾದಗಳಿಂದ ನ್ಯಾಯಾಲಯದ ತಡೆಯಿಂದಾಗಿ ಪ್ರತಿಮೆ ಸ್ಥಾಪನೆ ವಿಳಂಬವಾಗಿದೆ. ಈಗ ಜಿಲ್ಲಾಡಳಿತದ ನಿರ್ಲಕ್ಷ್ಯದಿಂದ ರಾತ್ರೋರಾತ್ರಿ ಪ್ರತಿಮೆ ಪ್ರತಿಷ್ಠಾಪಿಸಿ, ತಪ್ಪು ನಡೆದು ಹೋಗಿದೆ. ಇದರಿಂದಾಗಿ ಸಂಘರ್ಷ ಉಂಟಾಗಿ ನಗರಕ್ಕೆ ಅಪಕೀರ್ತಿ ಬರಲಿದೆ. ನಮಗೆ ರಾಜ ಪರಂಪರೆ ಹಾಗೂ ಗುರು ಪರಂಪರೆಯ ಎರಡರ ಮೇಲೂ ಗೌರವವಿದೆ. ಹೀಗಾಗಿ ಎರಡು ಸಮುದಾಯ ಕುಳಿತು ಚರ್ಚಿಸಿ ಒಮ್ಮತದ ತೀರ್ಮಾನ ಮಾಡಿಕೊಳ್ಳಬೇಕು. ಈಗ ಪ್ರತಿಮೆ ತೆಗೆಸಿದರೆ ಗುರು ಪರಂಪರೆಗೆ ಅಪಮಾನ ಮಾಡಿದಂತೆ ಆಗಲಿದೆ. ಹೀಗಾಗಿ ನ್ಯಾಯಾಲಯದ ಮುಂದಿನ ಆದೇಶದಂತೆ ಪ್ರತಿಮೆ ವಿವಾದ ಬಗೆಹರಿಸಿಕೊಳ್ಳಲಿ ಎಂದರು.

ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಮಾಜಿ ಸದಸ್ಯ ಎಚ್.ಎಸ್ ಪ್ರಕಾಶ್, ರವಿನಂದನ್, ಯೋಗೇಶ್ ಉಪ್ಪಾರ್, ಆರ್.ಕೆ.ರವಿ ಉಪಸ್ಥಿತರಿದ್ದರು.

ಕನ್ನಡದ ಮಕ್ಕಳಿಗೇ ಕನ್ನಡ ಕಲಿಸುವ ದುಸ್ಥಿತಿ

-ಸಾಹಿತಿ ಬನ್ನೂರು ರಾಜು ಬೇಸರ

ಮೈಸೂರು, ಡಿ.13- ನಾಡ ಮಕ್ಕಳಿಗೇ ಕನ್ನಡ ಭಾಷೆಯನ್ನು ಇಂದು ಕಲಿಸಬೇಕಾದ ಪರಿಸ್ಥಿತಿಯಿದ್ದು, ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬ ಕವಿ ಕುವೆಂಪು ವಾಣಿಯಂತೆ ನಾವು ಎಲ್ಲೇ ಇದ್ದರೂ, ಹೇಗೇ ಇದ್ದರೂ ಕನ್ನಡಿಗರಾಗಿ ನಾವಿದ್ದಲ್ಲಿಯೇ ಮರೆಯದೆ ಕನ್ನಡವನ್ನು ಕಟ್ಟುವ ಕೆಲಸ ಮಾಡಬೇಕೆಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ತಾಲೂಕಿನ ಜಯಪುರ ಹೋಬಳಿ ಹಾರೋಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೈಸೂರಿನ ಸೇವಾ ಸಂಸ್ಥೆಗಳಾದ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ ಸಂಯುಕ್ತವಾಗಿ ಆಯೋಜಿಸಿದ್ದ ನಾಡು ನುಡಿ ಸಂಭ್ರಮ ಸಮಾರಂಭವನ್ನು ಕನ್ನಡ ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಬಹುತೇಕ ಕಾನ್ವೆಂಟ್ ಮಕ್ಕಳಿಗೆ ಕನ್ನಡ ಬಾರದೆ ಪರೀಕ್ಷೆಗಳಲ್ಲಿ ಕನ್ನಡ ವಿಷಯದಲ್ಲೇ ಹೆಚ್ಚಾಗಿ ಫೇಲ್ ಆಗುತ್ತಿದ್ದು ಇವತ್ತು ಕನ್ನಡದ ಮಕ್ಕಳಿಗೇ ಕನ್ನಡ ಕಲಿಸುವ ದುಸ್ಥಿತಿ ಬಂದಿದೆ ಎಂದರು.

ಪೋಷಕರ ಇಂಗ್ಲೀಷ್ ವ್ಯಾಮೋಹದ ಭ್ರಮೆಯಿಂದ ಕಾನ್ವೆಂಟ್ ಸೇರುವ ಕನ್ನಡದ ಮಕ್ಕಳು



ಅತ್ತ ಇಂಗ್ಲೀಷನ್ನೂ ಸರಿಯಾಗಿ ಕಲಿಯದೆ ಇತ್ತ ಕನ್ನಡವೂ ಸರಿಯಾಗಿ ಬಾರದೆ ಎಡಬಿಡಂಗಿಯಾಗಿ ತ್ರಿಶಂಕುಸ್ಥಿತಿ ಅನುಭವಿಸುವಂತಾಗಿದೆ. ಅಷ್ಟೇ ಅಲ್ಲ, ಕೊನೆಗೆ ತಮ್ಮ ತಾಯಿ ಭಾಷೆ ಕನ್ನಡವನ್ನೇ ಕಲಿಯದೆ ಸಂಪೂರ್ಣವಾಗಿ ಮರೆತು ಬಿಡುವ ಅಪಾಯವಿದೆ. ಹಾಗಾಗಿ ಮಕ್ಕಳು ಕನ್ನಡದ ಜೊತೆಗೆ ಇಂಗ್ಲೀಷ್ ಕಲಿಯುವುದು ಸರಿ, ಆದರೆ ಅವರು ತಮ್ಮ ರಕ್ತಗತವಾದ ಮಾತೃ ಭಾಷೆ ಕನ್ನಡವನ್ನು ಮರೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ಪೋಷಕರದ್ದಾಗಬೇಕು. ನಮ್ಮ ಕನ್ನಡ ಅತ್ಯಂತ ಶಕ್ತಿಶಾಲಿ ಭಾಷೆ. ಇದನ್ನು ಹೆಚ್ಚೆಚ್ಚು ಬಳಸಿದಷ್ಟೂ ಅದು ಇನ್ನಷ್ಟು ಸಮೃದ್ಧವಾಗಿ, ಬಲಾಢ್ಯವಾಗಿ ಬೆಳೆಯುತ್ತಾ ಹೋಗುತ್ತದೆ. ಹಾಗಾಗಿ ಈ ದಿಸೆಯಲ್ಲಿ ಪ್ರತಿಯೊಬ್ಬ ಕನ್ನಡಿಗರೂ ನಿರಂತರವಾಗಿ ಕನ್ನಡ ಬಳಸುವ ಸಂಕಲ್ಪ ಮಾಡಿ ಕನ್ನಡವನ್ನು ಮತ್ತಷ್ಟೂ ಬೆಳೆಸಿ, ಉಳಿಸುವ ಕೆಲಸವನ್ನು ಮಾಡಬೇಕಾಗಿದೆ ಎಂದು ತಿಳಿಸಿದರು.

ಪ್ರೌಢಶಾಲೆಯ ಮುಖ್ಯ ಶಿಕ್ಷಕ ರಂಗಸ್ವಾಮಿ ಶೆಟ್ಟಿ ಮಾತನಾಡಿ, 'ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ ಬಾಯ್ ಹೊಲಿಸಾಕುದ್ರುನೂ ಮೂಗ್ನಲ್ಲಿ ಕನ್ನಡ ಪದವಾಡ್ತೀನಿ' ಎನ್ನುವ ಕವಿ ಜಿ.ಪಿ.ರಾಜರತ್ನಂ ಅವರ ಕನ್ನಡ ಪದಗಳು ಎಲ್ಲರಿಗೂ ಮಾದರಿಯಾಗಬೇಕು. ಹಾಗೆಯೇ ಇಂತಹ ಅನನ್ಯ ಕನ್ನಡ ಅಭಿಮಾನದ ಕವಿ ಮಹನೀಯರ, ಸಾಹಿತಿಗಳ ಸಾಹಿತ್ಯವನ್ನು ಓದಿ ಕನ್ನಡ ಚರಿತ್ರೆಯ ಬಗ್ಗೆ ತಿಳಿದುಕೊಂಡು ತಾವೂ ಸಹ ಅವರಂತಾಗಬೇಕೆಂದು ವಿದ್ಯಾರ್ಥಿಗಳಿಗೆ ಹಿತವಚನ ಹೇಳಿದರು. ಕಲಾವಿದೆ ಹಾಗೂ ಲೇಖಕಿ ಡಾ.ಜಮುನಾರಾಣಿ ಮಿರ್ಲೆ ಅವರು ನೀತಿ ಕತೆಗಳನ್ನು ಹೇಳಿ ಮನರಂಜಿಸಿದರು. ಹಾಗೆಯೇ ಕಾವೇರಿ ಬಳಗದ ಅಧ್ಯಕ್ಷೆ ಹಾಗೂ ವಿಶ್ರಾಂತ ಶಿಕ್ಷಕಿ ಎನ್.ಕೆ. ಕಾವೇರಿಯಮ್ಮ ಅವರು ಕನ್ನಡ ಗೀತಾಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಆರಂಭದಲ್ಲಿ ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ನಿವೃತ್ತ ಶಿಕ್ಷಕ ಎ.ಸಂಗಪ್ಪ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ವಿಶ್ರಾಂತ ಶಿಕ್ಷಕ ಮತ್ತು ಸಂಸ್ಕೃತಿ ಚಿಂತಕ ರಾಜು ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಹೆಚ್.ಎಸ್.ಗಿರೀಶ್ ಹುರ, ಶಿಕ್ಷಕಿಯರಾದ ಟಿ.ಬಲ್ಕೀಸ್, ಕೆ.ಎಸ್.ಉಮಾ, ಬಿ.ಕೆ.ಕವಿತಾ, ಎನ್.ಜ್ಯೋತಿ, ಎಸ್.ಶ್ರೀಲತಾ, ಎಂ.ಪಿ.ಶಾಂಭವಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ



ಮಿತ ನೀರಿನಲ್ಲಿ ಭತ್ತದ ಹೇರಳ ಇಳುವರಿ!

ತಿ.ನರಸೀಪುರ ತಾಲೂಕು ಮಾಡ್ರಹಳ್ಳಿಯ ಮಾದರಿ ರೈತ ಕೈಲಾಸಮೂರ್ತಿ

ಶೇ.90ರಷ್ಟು ನೀರು ಉಳಿತಾಯ, ರಸಗೊಬ್ಬರ ಬಳಕೆಯಿಲ್ಲ, ಬೆರಳೆಣಿಕೆ ಕಾರ್ಮಿಕರ ಬಳಕೆ

ಹೆಚ್ಚು ಸೂರ್ಯನ ಶಾಖ ಮತ್ತು ಕಡಿಮೆ ನೀರನ್ನು ಬಳಸಿಕೊಂಡು ಸಹಜ ಕೃಷಿ ಮಾಡಿ. ಪರಿಸರ ಮತ್ತು ಪ್ರಕೃತಿ ಸಂಪತ್ತನ್ನು ಉಳಿಸುವ ಕೆಲಸ ಮಾಡಲಾಗುತ್ತಿದೆ. ಬೆಳೆದ ಆಹಾರ ಪದಾರ್ಥವನ್ನು ಸಂಸ್ಕರಿಸಲು ಸಹ ಸೂರ್ಯನ ಶಕ್ತಿಯನ್ನು ಬಳಸುತ್ತಿದ್ದೇನೆ, ಸಾಮಾನ್ಯವಾಗಿ ಭತ್ತ ಬೆಳೆಯಬೇಕಾದರೆ ಗದ್ದೆಯಲ್ಲಿ ಸದಾ ನೀರು ನಿಂತಿರಬೇಕು ಎಂಬ ಭಾವನೆ ರೈತರಲ್ಲಿದೆ. ಹೆಚ್ಚು ನೀರು ಬಳಸದೆ ಅತ್ಯಂತ ಕಡಿಮೆ ನೀರು ಬಳಸುವ ಮೂಲಕ ಉತ್ತಮ ಇಳುವರಿ ತೆಗೆದಿದ್ದೇನೆ. –ಕೈಲಾಸ್‌ಮೂರ್ತಿ

ತಿ.ನರಸೀಪುರ, ಡಿ.13– (ಕುಮಾರ) ಕಡಿಮೆ ನೀರನ್ನು ಬಳಸಿ ಸಹಜ ಕೃಷಿಯ ಮೂಲಕ ಯಾವುದೇ ರಸಗೊಬ್ಬರ ಉಪಯೋಗಿಸದೆ ಹೆಚ್ಚುವರಿ ಭತ್ತವನ್ನು ಬೆಳೆಯುವ ಮೂಲಕ ತಿ.ನರಸೀಪುರ ತಾಲೂಕಿನ ಮಾಡ್ರಹಳ್ಳಿಯ ಕೃಷಿಕ ಎಂ.ಕೆ.ಕೈಲಾಸಮೂರ್ತಿ ಮಾದರಿ ರೈತರಾಗಿ ಹೊರ ಹೊಮ್ಮಿ ಸಾಧನೆ ಮಾಡಿದ್ದಾರೆ.


ನಿವೃತ್ತ ಬ್ಯಾಂಕ್ ಉದ್ಯೋಗಿಯಾಗಿರುವ ಕೈಲಾಸ್‌ಮೂರ್ತಿಯವರು ಮೂಲತಃ ತಿ.ನರಸೀಪುರ ತಾಲೂಕಿನ ಮಾಡ್ರಹಳ್ಳಿಯ ನಿವಾಸಿ. ಇವರು ಕಡಿಮೆ ಪ್ರಮಾಣದ ನೀರು ಬಳಸಿ ಯಾವುದೇ ರಾಸಾಯನಿಕ ಗೊಬ್ಬರವನ್ನು ಬಳಸದೆ ಒಂದು ಎಕರೆಗೆ 25 ರಿಂದ 30 ಕ್ವಿಂಟಾಲ್ ಭತ್ತವನ್ನು ಬೆಳೆಯುವ ಮೂಲಕ ತಾಲೂಕಿನ ಇತರ ರೈತರಿಗೆ ಕಡಿಮೆ ನೀರು ಬಳಸಿ ಉತ್ತಮ ಇಳುವರಿಯ ಭತ್ತ ಬೆಳೆಯಬಹುದು ಎಂದು ತೋರಿಸಿಕೊಟ್ಟಿದ್ದಾರೆ.

ಆರ್‌ಎನ್‌ಆರ್ ತಳಿ ಭತ್ತವನ್ನು ಬರಗಾಲದಲ್ಲೂ ಬೆಳೆಯುವ ಮೂಲಕ ತಾವು ಬೆಳೆದ ಭತ್ತವನ್ನು ಮಾರುಕಟ್ಟೆಯಲ್ಲಿ ಮಾರದೆ ನೇರವಾಗಿ ಗ್ರಾಹಕರಿಗೆ ಕಡಿಮೆ ಪಾಲಿಶ್ ಮಾಡಿ ಉತ್ತಮ ಪೌಷ್ಟಿಕಾಂಶದ ಅಕ್ಕಿಯನ್ನು ಸಿದ್ಧಪಡಿಸಿ ಮಾರುಕಟ್ಟೆ ಬೆಲೆಗಿಂತ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ. ಮಾಡ್ರಹಳ್ಳಿ ಗ್ರಾಮದಲ್ಲಿರುವ ತಮ್ಮ 4 ಎಕರೆ ಜಮೀನಿನಲ್ಲಿ ಆರ್‌ಎನ್‌ಆರ್ ತಳಿ ಭತ್ತವನ್ನು ಶೇ.90ರಷ್ಟು ನೀರನ್ನು ಉಳಿತಾಯ ಮಾಡಿ, ಕಡಿಮೆ ಕಾರ್ಮಿಕರ ಬಳಸಿಕೊಂಡು ಮಣ್ಣಿನ ಜೀವ ವೈವಿಧ್ಯತೆ ಕಾಪಾಡಿಕೊಂಡು ಕೃಷಿ ಮಾಡುತ್ತಿದ್ದಾರೆ. ಮಳೆ ಬಾರದ ವೇಳೆ ಜಲಾಶಯಗಳಲ್ಲಿ ನೀರಿಲ್ಲದ ಸಂದರ್ಭದಲ್ಲಿ ಕಟ್ಟು ಪದ್ಧತಿಯ ಮೂಲಕ ನೀರನ್ನು ಹರಿಸಲಾಗುತ್ತದೆ. ಈ ಕಟ್ಟು ನೀರು ಬಳಸಿಯೇ ಉತ್ತಮ ಇಳುವರಿ ಭತ್ತವನ್ನು ಬೆಳೆಯಬಹುದು ಎಂದು ತಿಳಿಸಿದ ಕೈಲಾಸ್‌ಮೂರ್ತಿ, ರೈತರು ನೀರಾವರಿ ಇಲಾಖೆ ಮತ್ತು ಕೃಷಿ ಇಲಾಖೆ ಜೊತೆ ಸಂಪರ್ಕ ವಿಟ್ಟುಕೊಂಡು ನೀರು ಮತ್ತು ವಾತಾವರಣದ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದರಿಂದ ರೈತನ ಶ್ರಮ ಕಮ್ಮಿಯಾಗಿ ಹೆಚ್ಚು ಭೂಮಿಯನ್ನು ಸಾಗುವಳಿ ಮಾಡಬಹುದು. ಕಡಿಮೆ ಖರ್ಚಿನಲ್ಲಿ ಪ್ರತಿ ಎಕರೆಗೆ 25 ರಿಂದ 30 ಕ್ವಿಂಟಾಲ್ ಭತ್ತವನ್ನು ಬೆಳೆಯುವ ಮಾದರಿಯನ್ನು ಇಲಾಖೆಯವರು ಖುದ್ದು ಜಮೀನಿಗೆ ಭೇಟಿ ನೀಡಿ, ಈ ಬೆಳೆಯ ಬಗ್ಗೆ ರೈತರಲ್ಲಿ ಅರಿವು ಮೂಡಿಸಿ ಬರ ಪರಿಸ್ಥಿತಿಯನ್ನು ನಿಭಾಯಿಸಲು ಸಹಕರಿಸಬೇಕೆಂದು ಅವರು ಇದೇ ವೇಳೆ ಮನವಿ ಮಾಡಿದ್ದಾರೆ.

ಸಹಜ ಕೃಷಿಯಿಂದ ಮಣ್ಣಿನ ಜೀವ ವೈವಿಧ್ಯತೆ ರಕ್ಷಣೆ, ಬೆರಳೆಣಿಕೆಯ ಕಾರ್ಮಿಕರ ಬಳಕೆ, ಮಣ್ಣಿನ ಫಲವತ್ತತೆ ಹೆಚ್ಚಿಸುವುದು, ಜಮೀನಿನಲ್ಲಿ ಕಾರ್ಮಿಕರು ಮತ್ತು ನೈಟ್ರಿಕ್ ಆಕ್ಸೈಡ್ ಉತ್ಪತ್ತಿಯಾಗುವುದಿಲ್ಲ. ಕಳೆ ನಾಶಕ ಅವಶ್ಯಕತೆ ಇರುವುದಿಲ್ಲ. ನೀರಿನ ಉಳಿತಾಯವಾಗಲಿದೆ. ವರ್ಷದಲ್ಲಿ ಮೂರು ಬೆಳೆ ಬೆಳೆಯ ಬಹುದಾಗಿದೆ.

ನೀರು ಉಳಿತಾಯವಾಗುವುದರಿಂದ ವರ್ಷದಲ್ಲಿ ಮೂರು ಬೆಳೆ ಬೆಳೆಯಬಹುದು. ಇದರಿಂದ ರೈತರ ಸ್ಥಿತಿ ದುಪ್ಪಟ್ಟಾಗಲಿದೆ ಆದ್ದರಿಂದ ಇಲಾಖೆಯವರು ಮುಂದೆ ಬಂದು ಈ ಮಾದರಿಯಲ್ಲಿ ರೈತರು ಬೆಳೆ ಬೆಳೆಯುವಂತೆ ಮಾಡಬೇಕೆಂದರು, ಮುಂದಿನ ದಿನಗಳಲ್ಲಿ ಚಳಿಗಾಲದಲ್ಲಿ ಸಾಸಿವೆ, ಮುಂಗಾರಿನಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯುವ ಉದ್ದೇಶ ಹೊಂದಿರುವುದಾಗಿ ಅವರು ತಿಳಿಸಿದರು. ಅಧಿಕಾರಿಗಳು ನಾನು ಬೆಳೆಯುತ್ತಿರುವ ಬೆಳೆಯ ಪ್ರದೇಶಕ್ಕೆ ಭೇಟಿ ನೀಡಿ ಮಾಹಿತಿ ಪಡೆದು ಬರ ಪರಿಸ್ಥಿತಿಯನ್ನು ಎದುರಿಸಲು ಬೆಳೆಯ ಮಾದರಿಯ ಬದಲಾವಣೆ ತರುವ ನಿಟ್ಟಿನಲ್ಲಿ ಯೋಜನೆ ರೂಪಿಸುವಂತೆ ಕೈಲಾಶ್‌ಮೂರ್ತಿ ಮನವಿ ಮಾಡಿದ್ದಾರೆ.





ಕೈಲಾಸ್‌ಮೂರ್ತಿಯವರು, ತಮ್ಮ ಜಮೀನಿನಲ್ಲಿ ಪುತ್ರ ಕೀರ್ತಿ ಹಾಗೂ ಬೆರಳೆಣಿಕೆಯಷ್ಟು ಕೆಲಸಗಾರರ ಮೂಲಕ ಭೂಮಿಯ ಫಲವತ್ತತೆಯನ್ನೂ ಕಾಪಾಡಿಕೊಂಡು ಭತ್ತದ ಉತ್ತಮ ಇಳುವರಿಯನ್ನು ಪಡೆಯುತ್ತಿದ್ದಾರೆ. ಎಲ್ಲಾ ರೈತರು ಈ ಪದ್ಧತಿಯನ್ನು ಅನುಸರಿಸಿ ಉತ್ತಮ ಲಾಭ ಪಡೆಯಬಹುದು ಎಂಬುದು ಅವರ ಭರವಸೆಯ ಮಾತು.

4 ತಿಂಗಳಲ್ಲಿ 8 ಬಾರಿ ಮಾತ್ರ ನೀರನ್ನು ಬಳಸುತ್ತಾರೆ, ವಿಷನ್ ಮೂಲಕವೇ ಕಳೆಯನ್ನು ತೆಗೆಯುತ್ತಾರೆ, ಶೇಕಡ 90ರಷ್ಟು ನೀರು ಮತ್ತು ಕೃಷಿ ಕಾರ್ಮಿಕರನ್ನು ಉಳಿತಾಯ ಮಾಡುವ ಮೂಲಕ ರಾಸಾಯನಿಕ ರಹಿತ ಭತ್ತವನ್ನು ಬೆಳೆಯುವ ಮೂಲಕ, ಮಾದರಿಯಾಗಿದ್ದಾರೆ.

ಸರಗೂರು ಬಳಿಯ ಹಂಚೀಪುರದಲ್ಲಿ ಹುಲಿ ಪ್ರತ್ಯಕ್ಷ

ಆಗಾಗ ರೈತರಿಗೆ ದರ್ಶನ ನೀಡುತ್ತಿದ್ದರೂ, ಇದುವರೆಗೆ ಸಿಸಿ ಕ್ಯಾಮರಾ ಕಣ್ಣಿಗೆ ಬಿದ್ದಿಲ್ಲ

ಸರಗೂರು, ಡಿ.13– ಜಿಂಕೆ ಸೇರಿದಂತೆ ಕೆಲವು ಸಾಧು ಪ್ರಾಣಿಗಳು ಕೆಲವೊಮ್ಮೆ ನಾಡಿನತ್ತ ಬರುವುದುಂಟು. ಅವುಗಳನ್ನು ರಕ್ಷಿಸಿ ಅರಣ್ಯ ಇಲಾಖೆಗೆ ಒಪ್ಪಿಸಿರುವ ಸಂದರ್ಭಗಳೂ ಉಂಟು. ಆದರೆ ಇತ್ತೀಚಿನ ದಿನಗಳಲ್ಲಿ ಚಿರತೆ ಮತ್ತು ಹುಲಿಗಳು ನಾಡಿನತ್ತ ಲಗ್ಗೆ ಇಟ್ಟು ಜನ–ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿರುವುದು ಆತಂಕವನ್ನುಂಟು ಮಾಡಿದೆ.



ತಾಲೂಕಿನ ಹಂಚೀಪುರದ ಆಸುಪಾಸು ಹುಲಿ ಓಡಾಡುತ್ತಿದ್ದು, ಅದರ ಹೆಜ್ಜೆ ಗುರುತುಗಳು ಪತ್ತೆಯಾಗಿದೆ. ಆದರೆ ಅರಣ್ಯ ಇಲಾಖೆ ಅಳವಡಿಸಿರುವ ಸಿಸಿ ಟಿವಿ ಕ್ಯಾಮರಾ ಕಣ್ಣಿಗೆ ಮಾತ್ರ ಬೀಳದೆ ಇರುವುದು ಆಶ್ಚರ್ಯ ಮೂಡಿಸಿದೆ. ತಮ್ಮ ಜಮೀನಿನತ್ತ ಬರುವಾಗ ಶೇಷಣ್ಣ ಎಂಬುವರ ಕಣ್ಣಿಗೆ ಹುಲಿ ಕಾಣಿಸಿಕೊಂಡಿದೆ. ಇದರಿಂದ ಅವರು ಗಾಬರಿಗೊಂಡಿದ್ದಾರೆ. ಇದಕ್ಕೆ ಮೊದಲೂ ಹಂಚೀಪುರದ ಮಲ್ಲಿಕಾರ್ಜನಪ್ಪನವರು ಹಸುಗಳನ್ನು ಮೇಯಿಸಲು ಜಮೀನಿಗೆ ಬಂದ ಸಂದರ್ಭದಲ್ಲಿ ಹುಲಿ ಕಾಣಿಸಿಕೊಂಡಿದೆ. ಕೆರೆಯೊಂದರ ಬಳಿಯ ಆಲದಮರದ ಕೆಳಗೆ ಹುಲಿ ಮಲಗಿದ್ದ ದೃಶ್ಯ ಇವರ ಕಣ್ಣಿಗೆ ಬಿದ್ದಿದೆ. ಅಷ್ಟರಲ್ಲೇ ಹುಲಿಗೆ ಎಚ್ಚರವಾಗಿ ಘರ್ಜಿಸಿದೆ. ಮಲ್ಲಿಕಾರ್ಜನಪ್ಪ ಹೆದರಿ ಓಡಿ ದ್ದಾರೆ. ಹಸುಗಳು ಬೆದರಿ ದಿಕ್ಕಾಪಾಲಾಗಿ ಓಡಿ ಹೋಗಿವೆ. ಹುಲಿ ಕಂಡ ವಿಚಾರ ವನ್ನು ಅರಣ್ಯ ಇಲಾಖೆ ಆರ್‌ಎಫ್‌ಓ ಅವರಿಗೆ ತಿಳಿಸಲಾಗಿದೆ. ಕೆಲವು ದಿನಗಳ ನಂತರ ಅನುಪ್ರಸಾದ್ ಎಂಬುವರು ದನ ಮೇಯಿಸಲು ಹೋಗಿದ್ದ ಸಂದರ್ಭದಲ್ಲಿ ಹುಲಿಯನ್ನು ಕಂಡು ಹೆದರಿ ಓಡಿ ಮೊಬೈಲ್ ಮೂಲಕ ಅರಣ್ಯ ಇಲಾಖೆಗೆ ಸುದ್ದಿ ಮುಟ್ಟಿಸಿದ್ದಾರೆ.

ತಕ್ಷಣವೇ ಅಧಿಕಾರಿಗಳು ಅರಣ್ಯ ಇಲಾಖೆ ರೇಂಜರ್‌ಗಳನ್ನು ಸ್ಥಳಕ್ಕೆ ಕಳಿಸಿದ್ದಾರೆ, ಅಷ್ಟರಲ್ಲಿ ಹುಲಿ ನಾಪತ್ತೆಯಾಗಿದೆ. ಪಟಾಕಿಗಳನ್ನು ಸಿಡಿಸಲಾಯಿತಾದರೂ ಹುಲಿಯ ಸುಳಿವು ಪತ್ತೆಯಾಗಲಿಲ್ಲ. ಮತ್ತೆ ಕೆಲವು ದಿನಗಳ ಅಂತರದಲ್ಲೇ ಮಗದೊಮ್ಮೆ ರೈತ ಅನುಪ್ರಸಾದ್ ಹಾಗೂ ಗೋಪಾಲಯ್ಯ, ನಿಂಗಯ್ಯ ಎಂಬುವರು ತಮ್ಮ ಜಮೀನುಗಳತ್ತ ತೆರಳಿದ್ದಾಗ ಹುಲಿಯನ್ನು ಕಂಡಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅಂದು ಕಾಣಿಸಿಕೊಂಡಿದ್ದ ಕಡೆಗಳಲ್ಲಿ ಸಿಸಿ ಕ್ಯಾಮರಗಳನ್ನು ಅಳವಡಿಸಲಾಯಿತು. ಆದರೂ ಕ್ಯಾಮರಾ ಕಣ್ಣಿಗೆ ಹುಲಿ ಬಿದ್ದಿಲ್ಲ. ಹಲವಾರು ಫಸಲುಗಳನ್ನು ಬೆಳೆದಿರುವ ರೈತರು ತಮ್ಮ ಜಮೀನುಗಳಿಗೆ ತೆರಳುವುದೇ ಈಗ ಕಷ್ಟವಾಗಿದೆ.

ಬೋನುಗಳನ್ನು ಅಳವಡಿಸಿ ಹುಲಿಯನ್ನು ಸೆರೆ ಹಿಡಿಯುವ ಪ್ರಯತ್ನ ಅರಣ್ಯ ಇಲಾಖೆಯಿಂದ ಶೀಘ್ರವೇ ನಡೆಯಬೇಕಿದೆ.



ಕೃಷಿಯ ಜೊತೆ ಹಸು ಸಾಕಾಣಿಕೆಯಿಂದ ಜೀವನ ನಿರ್ವಹಣೆ ಮಾಡುತ್ತಿದ್ದೇವೆ. ಬೆಳಗ್ಗೆ ಹಾಗೂ ಸಂಜೆ ಹಾಲು ಕರೆದು ಸರಗೂರು ಪಟ್ಟಣದಲ್ಲಿರುವ ಹಾಲು ಉತ್ಪಾದಕರ ಸಂಘಕ್ಕೆ ಹೋಗಿ ಹಾಕಿ ಬರಬೇಕಾಗಿದೆ, ನಮ್ಮ ಜಮೀನಿಗೆ ಹುಲಿ ಬಂದು ಹೋಗಿರುವುದು ಈಗ ಭಯವನ್ನುಂಟು ಮಾಡಿದೆ. ನಮ್ಮ ಹಸುಗಳ ರಕ್ಷಣೆ ಮಾಡುವುದಾದರೂ ಹೇಗೆ. ಅರಣ್ಯ ಇಲಾಖೆಯ ಬೋನಿಗೂ ಬೀಳದೆ ಸಿ.ಸಿ. ಕ್ಯಾಮರಕ್ಕೂ ಹುಲಿ ಕಾಣಿಸದೆ ರೈತರಿಗೆ ಕಾಣಿಸಿಕೊಳ್ಳುತ್ತಿರುವುದರಿಂದ ಪ್ರಾಣಭಯದ ತೊಂದರೆ ಕಾಡುತ್ತಿದ್ದು ಹುಲಿ ಹಿಡಿಯುವ ಕಾರ್ಯ ಚುರುಕಾಗಿ ಮಾಡಬೇಕು. – ರೈತ ಗಿರೀಶ್

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಜಪಾನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮರೀಚಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಕಂಜೂರಿಂಗ್ ಕಣ್ಣಪ್ಪನ್ (ತ)	4 ಪ್ರದರ್ಶನಗಳು
ಸಂಗಂ	
ಸ್ನೇಹರ್ಷಿ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜಪಾನ್ (ತ)	4 ಪ್ರದರ್ಶನಗಳು
ಪ್ರಭಾ	
ಪಾಲಿಟಿಕ್ಸ್ ಕಲ್ಯಾಣ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.25ಕ್ಕೆ, ಮ.2.20ಕ್ಕೆ, ಸಂ.6.15ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ವೊಂಕ (ಇಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.15ಕ್ಕೆ, ರಾ.7.10ಕ್ಕೆ, ಹಾಯ್ ನಾನ (ತೆ): ರಾ.10.05ಕ್ಕೆ,
ಸ್ಕ್ರೀನ್ 3	ಕೈವ (ಕ): ಬೆ.10.20ಕ್ಕೆ, ಸ್ನೇಹರ್ಷಿ (ಕ): ಮ.1.30ಕ್ಕೆ, ಅನಿಮಲ್ (ಹಿಂ): ಮ.3.55ಕ್ಕೆ, ರಾ.7.40ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಕೈವ (ಕ): ಮ.1.20ಕ್ಕೆ, ರಾ.10ಕ್ಕೆ

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಕೈವ (ಕ): ಬೆ.10.20ಕ್ಕೆ, ಅನಿಮಲ್ (ಹಿಂ): ಮ.1.20ಕ್ಕೆ, ಸಂ.5.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಹಾಯ್ ನಾನ (ತೆ): ಮ.12.40ಕ್ಕೆ, ಸಂ.6.55ಕ್ಕೆ, ಕೈವ (ಕ): ಮ.3.55ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.15ಕ್ಕೆ, ಅನಿಮಲ್ (ಹಿಂ): ಸಂ.4.25ಕ್ಕೆ, ರಾ.8.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, 12th ಫೇಲ್ (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಲೋಕಾಯುಕ್ತ ಸಮ್ಮುಖದಲ್ಲಿ ದೂರುಗಳ ಸುರಿಮಳೆ

ಕಟ್ಟುನಿಟ್ಟಿನ ಕ್ರಮಕೈಗೊಂಡು ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚನೆ



ಹುಣಸೂರು, ಡಿ.13– ಮೈಸೂರು ಲೋಕಾಯುಕ್ತ ಎಸ್ಪಿ ಅವರ ನೇತೃತ್ವದಲ್ಲಿ ಇಂದು ನಗರಸಭಾ ಸಭಾಂಗಣದಲ್ಲಿ ನಡೆದ ಅಧಿಕಾರಿಗಳ ಸಭೆ ಮತ್ತು ಸಾರ್ವಜನಿಕರಿಂದ ದೂರು ಸ್ವೀಕಾರ ಕಾರ್ಯಕ್ರಮದಲ್ಲಿ ದೂರುಗಳು ಕೇಳಿ ಬಂದವು. ಕಂದಾಯ ಇಲಾಖೆ, ನಗರಸಭೆ ಹಾಗೂ ಪಂಚಾಯತ್ ರಾಜ್ ಇಲಾಖೆಗಳ ಸಂಬಂಧ ಸಾಕಷ್ಟು ದೂರುಗಳು ಕೇಳಿ ಬಂದವು.

ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾದ ಸಭೆಯಲ್ಲಿ ಮೊದಲಿಗೆ ಸಾರ್ವಜನಿಕರಿಂದ ದೂರುಗಳ ಸ್ವೀಕರಿಸಲಾಯಿತು. ನಗರಸಭೆಗೆ ಸಂಬಂಧಿಸಿದಂತೆ 100ಕ್ಕೂ ಹೆಚ್ಚು ದೂರು, ಕಂದಾಯ ಇಲಾಖೆ ಸಂಬಂದಿಸಿದಂತೆ 10, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ 10, ಎ.ಡಿ.ಎಲ್.ಆರ್ ಒಂದು, ಮೀನುಗಾರಿಕೆಗೆ ಒಂದು, ಅಬಕಾರಿ ಇಲಾಖೆಗೆ ಒಂದು, ಚೆಸ್ಕಾಂಗೆ ಒಂದು ಹಾಗೂ ಪೊಲೀಸ್ ಇಲಾಖೆಗೆ ಒಂದು ಸೇರಿದಂತೆ ದೂರುಗಳು ಬಂದಿದ್ದು ಲೋಕಾಯುಕ್ತ ಅಧಿಕಾರಿಗಳು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಒಂದು ವಾರದಲ್ಲಿ ಸಮಸ್ಯೆಗಳನ್ನು ಬಗೆಹರಿಸಬೇಕು ಹಾಗೂ ನಮಗೆ ವರದಿ ಮಾಡಬೇಕು ಎಂದು ತಾಕೀತು ಮಾಡಿದರು.

ನಗರದ ಕಲ್ಪತರು ವೃತ್ತದ ಬಳಿ ಇರುವ ಪಾರ್ಕ್ ಜಾಗವನ್ನು ಖಾಸಗಿಯವರು ರಾತ್ರೋರಾತ್ರಿ ಕಾಂಪೌಂಡ್ ಹಾಕಿಕೊಂಡು ಮಳಿಗೆಗಳನ್ನು ನಿರ್ಮಿಸಿದ್ದು, ಈ ಬಗ್ಗೆ ಕ್ರಮ ಕೈಗೊಂಡು ಸಾರ್ವಜನಿಕ ಆಸ್ತಿಯನ್ನು ಉಳಿಸಬೇಕೆಂದು ನಗರಸಭೆಯ ಸದಸ್ಯರೆಲ್ಲ ಲೋಕಾಯುಕ್ತರಲ್ಲಿ ಮನವಿ ಮಾಡಿಕೊಂಡರು. ಈ ಸಂಬಂದ ನಗರಸಭೆಯ ಪ್ರಭಾರ ಪೌರಾಯುಕ್ತ ಶರ್ಮಿಳಾ ಅವರಿಗೆ ಈ ಬಗ್ಗೆ ಪರಿಶಿಲನೆ ಮಾಡಿ ಒಂದು ವಾರದಲ್ಲಿ ನಮಗೆ ವರದಿ ಮಾಡಬೇಕು ಎಂದು ಲೋಕಾಯುಕ್ತ ಎಸ್‌ಪಿ ಸೂಚಿಸಿದರು.

ಬಿಳಿಕೆರೆ ಸಮೀಪದ ಮನುಗನಹಳ್ಳಿ ಗೇಟ್ ಬಳಿ ಸುಮಾರು 20 ಕುಟುಂಬಗಳು 30–35 ವರ್ಷಗಳಿಂದ ಮಣ್ಣಿನ ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದು, ಈ ಅಸಹಾಯಕ ಪೌರ ಕಾರ್ಮಿಕರಿಗೆ ಈವರೆವಿಗೂ ಮನೆಗಳ ಹಕ್ಕು ಪತ್ರವಾಗಲಿ, ಸ್ವಾಧೀನ ಪತ್ರವಾಗಲಿ ನೀಡಿಲ್ಲ. ಅಸಹಾಯಕ ಪೌರಕಾರ್ಮಿಕರಿಗೆ ಹಕ್ಕುಪತ್ರವನ್ನು ನೀಡಬೇಕು ಎಂದು ದಸಂಸ(ಡಿ.ಜಿ.ಸಾಗರ್ ಬಣದ) ಜಿಲಾ ಸಂಘಟನಾ ಸಂಚಾಲಕ ಕೊಳಗಟ್ಟ ಕೃಷ್ಣ ಲೋಕಾಯುಕ್ತರಲ್ಲಿ ಮನವಿ ಮಾಡಿದರು. ಈ ಸಂಬಂಧ ಲೋಕಾಯುಕ್ತರು ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಮನು ಅವರಿಗೆ ಒಂದು ವಾರದಲ್ಲಿ ಕ್ರಮ ಕೈಗೊಂಡು ವರದಿ ಮಾಡಬೇಕು ಎಂದು ಸೂಚಿಸಿದರು.

ಸರ್ವೆ ಇಲಾಖೆಯಲ್ಲಿ ಸಾರ್ವಜನಿಕರಿಗೆ ದಾಖಲಾತಿ ನೀಡಲು ಕೊಡಲು ಅಧಿಕಾರಿಗಳು ವರ್ಷಗಟ್ಟಲೆ ಅಲೆದಾಡಿಸುತ್ತಿದ್ದಾರೆ ಎಂದು ಸೋಮನಾಯಕ ದೂರಿದರು.

ಸಭೆಯಲ್ಲಿ ಸಾರ್ವಜನಿಕರು ಮತ್ತು ಜನಪ್ರತಿನಿಧಿಗಳು ಇದೇ ರೀತಿಯ ದೂರುಗಳನ್ನು, ಹೇಳಿ, ಸಮಸ್ಯೆಗಳನ್ನು ಅನಾವರಣಗೊಳಿಸಿದರು.

ಈ ವರ್ಷ ಬಾಲ್ಯವಿವಾಹದ ಬಗ್ಗೆ 17 ದೂರುಗಳು ಬಂದಿದ್ದು, 6 ಪ್ರಕರಣಗಳ ಬಗ್ಗೆ ಪ್ರಕರಣ ದಾಖಲಿಸಿದ್ದು 11 ಪ್ರಕರಣಗಳನ್ನು ವಿವಿಧ ಕಾರಣಗಳಿಂದ ತಡೆಹಿಡಿಯಲಾಗಿದೆ ಎಂದು ತಾಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ರಶ್ಮಿ ಅವರು ಲೋಕಾಯುಕ್ತರಿಗೆ ತಿಳಿಸಿದರು.

ಲೋಕಾಯುಕ್ತ ಎಸ್.ಪಿ ಸುರೇಶ್ ಬಾಬು, ಡಿವೈಎಸ್‌ಪಿ ಎಸ್.ಕೆ.ಮಲ್ಲೇಶ್, ಕೃಷ್ಣಯ್ಯ, ಇನ್ಸ್‌ಪೆಕ್ಟರ್‌ಗಳಾದ ಉಮೇಶ್, ರವಿಕುಮಾರ್, ಬಿ.ಎ.ರೂಪಶ್ರೀ, ತಹಸಿಲ್ದಾರ್ ಮಂಜುನಾಥ್, ಇಓ ಮನು, ಪ್ರಭಾರ ಪೌರಾಯುಕ್ತರಾದ ಶರ್ಮಿಳಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ ಚಿರತೆಗೆ ಹಸು ಬಲಿ



ತಿ.ನರಸೀಪುರ, ಡಿ.13– ಮೇವು ತಿನ್ನುತ್ತಿದ್ದ ಹಸುವಿನ ಮೇಲೆ ಚಿರತೆ ದಾಳಿ ನಡೆಸಿ ಹಸುವನ್ನು ತಿಂದು ಹಾಕಿರುವ ಘಟನೆ ತಾಲೂಕಿನ ಸೋಸಲೆ ಹೋಬಳಿ ಕೇತುಪುರ ಗ್ರಾಮದ ಬಳಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಬೆಟ್ಟದಲ್ಲಿ ಸಂಭವಿಸಿದೆ.

ತಾಲೂಕಿನ ಕೇತುಪುರ ಗ್ರಾಮದ ದೇವರಸನಗೌಡರ ಮಗ ನಿಂಗೇಗೌಡ ಎಂಬುವರಿಗೆ ಸೇರಿದ 50 ಸಾವಿರ ಬೆಲೆ ಬಾಳುವ ಹಸು ಬೆಟ್ಟದ ಮೇಲೆ ಮೇಯುತ್ತಿದ್ದ ವೇಳೆ ಚಿರತೆ ದಾಳಿ ನಡೆಸಿ ಕೊಂದು ಹಾಕಿದೆ. ಚಿರತೆ ಹಾವಳಿಯಿಂದ ಮುಕ್ತವಾಗಿದ್ದ ಗ್ರಾಮದಲ್ಲೀಗ ಮತ್ತೆ ಭೀತಿ ಎದುರಾಗಿದೆ.

ಚಿರತೆ ದಾಳಿ ಮಾಡಿ ಹಸುವನ್ನು ಕೊಂದು ಹಾಕಿದ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯಾಧಿಕಾರಿ ನಾಗರಾಜು, ಉಮೇಶ್ ಹಾಗೂ ಪಶು ವೈದ್ಯಾಧಿಕಾರಿ ಗಣೇಶ್ ಸ್ಥಳ ಪರಿಶೀಲನೆ ಮಾಡಿ ಮೃತ ಹಸುವಿನ ಮರಣೋತ್ತರ ಪರೀಕ್ಷೆ ನಡೆಸಿದರು.

ಈ ವೇಳೆ ಸ್ಥಳಕ್ಕೆ ಭೇಟಿ ನೀಡಿದ ರೈತ ಮುಖಂಡ ಕಳ್ಳೀಪುರ ಮಹದೇವಸ್ವಾಮಿ, ಚಿರತೆ ದಾಳಿಯಿಂದ ಸಾವಿಗೀಡಾದ ಹಸುವಿನ ಮಾಲೀಕರಿಗೆ ಪರಿಹಾರ ನೀಡುವಂತೆ ಒತ್ತಾಯಿಸಿದರು. ಈ ವೇಳೆ ಮಾತನಾಡಿದ ಅವರು, ಈ ಹಿಂದೆ ಮಲ್ಲಿಕಾರ್ಜುನ ಸ್ವಾಮಿ ಬೆಟ್ಟದ ತಪ್ಪಲಿನ ಗ್ರಾಮಗಳಲ್ಲಿ ಚಿರತೆ ಹಾವಳಿ ಮಿತಿ ಮೀರಿದ್ದರಿಂದ ಅರಣ್ಯ ಇಲಾಖೆ ಚಿರತೆ ಸೆರೆ ಹಿಡಿಯುವ ಟಾಸ್ಕ್‌ಫೋರ್ಸ್ ತಂಡವನ್ನು ಸ್ಥಳದಲ್ಲಿ ನಿಯೋಜಿಸಿತ್ತು ಆದರೆ ನಂತರದಲ್ಲಿ ತಂಡ ತಲಕಾಡಿಗೆ ವರ್ಗಾವಣೆಯಾಗಿರುವುದರಿಂದ ಇಲ್ಲಿ ಮತ್ತೆ ಚಿರತೆ ಹಾವಳಿ ಹೆಚ್ಚಿದೆ. ಕಳೆದ ಒಂದೂವರೆ ವರ್ಷದಿಂದೀಚೆಗೆ ತಾಲೂಕಿನಲ್ಲಿ 42 ಚಿರತೆಗಳನ್ನು ಸೆರೆಹಿಡಿಯಲಾಗಿದೆಯಾದರೂ ಅವುಗಳ ಸಂಖ್ಯೆ ಇನ್ನೂ ಕಡಿಮೆಯಾಗಿಲ್ಲ. ಬೆಟ್ಟದ ಆಸುಪಾಸನ್ನು ರೆಡ್ ಝೋನ್ ವ್ಯಾಪ್ತಿ ಎಂದು ಘೋಷಣೆ ಮಾಡಿದ್ದರೂ ತಂಡ ಮಾತ್ರ ಇಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ. ಹಾಗಾಗಿ ಮತ್ತೆ ಟಾಸ್ಕ್‌ಫೋರ್ಸ್ ತಂಡವನ್ನು ನಿಯೋಜಿಸಿ ಗ್ರಾಮಸ್ಥರು ನೆಮ್ಮದಿ ಹಾಗೂ ನಿರ್ಭೀತಿಯಿಂದ ದೈನಂದಿನ ಕೆಲಸದಲ್ಲಿ ತೊಡಗಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಮಹದೇವಸ್ವಾಮಿ ಒತ್ತಾಯಿಸಿದರು.

ಈ ವೇಳೆ ಗ್ರಾಮಸ್ಥರಾದ ನರಸೇಗೌಡನ ಚಿನ್ನಸ್ವಾಮಿ, ಚನ್ನೇಗೌಡ ಹಾಜರಿದ್ದರು.

ಕಬಿನಿ ಮುಳುಗಡೆ ಪ್ರದೇಶದ ರೈತರಿಗೆ ಜಮೀನು ನೀಡಲು ಸಮಿತಿ ರಚನೆ

ಬೆಳಗಾವಿ ಅಧಿವೇಶನದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಪ್ರಶ್ನೆಗೆ ಸಚಿವ ಕೆ.ಜೆ. ಜಾರ್ಜ್ ಉತ್ತರ

ಹೆಚ್.ಡಿ.ಕೋಟೆ, ಡಿ.13– ಕಬಿನಿ ಜಲಾಶಯದ ಮುಳುಗಡೆ ಪ್ರದೇಶದ 149 ಬಡ ರೈತ ಕುಟುಂಬಗಳಿಗೆ ಅರಣ್ಯ ವ್ಯಾಪ್ತಿಯಿಂದ ಜಮೀನು ನೀಡಲು ಸಮಿತಿ ರಚನೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಚಾರ್ಜ್ ಭರವಸೆ ನೀಡಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರ ಪ್ರಶ್ನೆಗೆ ಉತ್ತರಿಸಿದ ಅವರು ಮುಳುಗಡೆ ಪ್ರದೇಶದ ರೈತರಿಗೆ 1070 ಎಕರೆ ಜಮೀನು ನೀಡಬೇಕಿತ್ತು. ಈಗ ಕೆಲವು ಎಕರೆಗಳಷ್ಟು ಜಮೀನು ನೀಡಲಾಗಿದ್ದು, ಉಳಿದ ರೈತರಿಗೆ ಜಮೀನು ನೀಡುವ ಸಂಬಂಧ ಸಮಿತಿ ರಚಿಸಿ ಕ್ರಮ ಜರುಗಿಸಲಾಗುವುದು ಎಂದರು. ಸಚಿವರು ಉತ್ತರ ನೀಡುತ್ತಿದ್ದಂತೆ ಸ್ಪೀಕರ್ ಯು.ಟಿ. ಖಾದರ್ ಅವರು, ತಕ್ಷಣ ಸಮಸ್ಯೆಗಳನ್ನು ಬಗೆಹರಿಸಿ ರೈತರಿಗೆ ನ್ಯಾಯ ಕೊಡಿಸಬೇಕು ಎಂದು ಸೂಚಿಸಿದರು.

ಕಬಿನಿ ಜಲಾಶಯ ಅಣೆಕಟ್ಟೆ ಸಂದರ್ಭದಲ್ಲಿ ಮುಳುಗಡೆ ಆದ 36 ಹಳ್ಳಿಗಳ ರೈತರಿಗೆ 40 ವರ್ಷ ಕಳೆದರು ಕೂಡ ಇನ್ನೂ ಜಮೀನು ದೊರೆತಿಲ್ಲ. ಈ ಭಾಗದ ರೈತರು ಹೋರಾಟ ನಡೆಸುತ್ತಿದ್ದರೂ ಪ್ರಯೋಜನವಾಗಿಲ್ಲ. ನಾನು ಅನೇಕ ಬಾರಿ ಸಚಿವರು, ಉನ್ನತ ಮಟ್ಟದ ಅಧಿಕಾರಿಗಳ ಜೊತೆ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಗಳನ್ನು ತಿಳಿಸಿದ್ದೇನೆ. 149 ಕುಟುಂಬದವರಿಗೆ 369 ಎಕರೆ ಜಮೀನು ಅರಣ್ಯ ಇಲಾಖೆ ವ್ಯಾಪ್ತಿಯಿಂದ ಬರಬೇಕಾಗಿದೆ. ಈ ಸಂಬಂಧ ಅರಣ್ಯ ಸಚಿವರಿಗೆ ಮನವಿ ಸಲ್ಲಿಸಿದ್ದೇನೆ ಎಂದರು.





ಕೆ.ಜೆ.ಚಾರ್ಜ್ ಅನಿಲ್ ಚಿಕ್ಕಮಾದು

ಜಮೀನು ನೀಡುವ ವಿಚಾರದಲ್ಲಿ ವಿಳಂಬವಾಗುತ್ತಿರುವುದರಿಂದ ಈ ಭಾಗದ ರೈತರು ಅತಂತ್ರಕ್ಕೆ ಸಿಲುಕಿದ್ದಾರೆ. ಇವರನ್ನು ರಕ್ಷಿಸುವುದು ನಮ್ಮ ಕರ್ತವ್ಯ ಎಂದರು.

ನನ್ನ ಕ್ಷೇತ್ರದಲ್ಲಿ ವನ್ಯಜೀವಿ ಸಂರಕ್ಷಣೆ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದೇವೆ, ಅದರಲ್ಲೂ ಮಾನವನ ಸಂರಕ್ಷಣೆ ಮಾಡುವುದರಲ್ಲಿ ಅರಣ್ಯ ಇಲಾಖೆಯವರು ವಿಫಲರಾಗಿದ್ದಾರೆ. ಇತ್ತೀಚೆಗೆ 11 ಮಂದಿ ಪ್ರಾಣಿಗಳ ದಾಳಿಯಿಂದ ಸಾವನ್ನಪ್ಪಿರುವುದು ನಿಜಕ್ಕೂ ಬೇಸರ ತರುವಂತ ಸಂಗತಿ, ಅರಣ್ಯ ಇಲಾಖೆಯವರು ಬೇಜವಾಬ್ದಾರಿ ಕೆಲಸದಿಂದ ಇಂತಹ ಘಟನೆಗಳು ನನ್ನ ಕ್ಷೇತ್ರದಲ್ಲಿ ಹೆಚ್ಚಾಗುತ್ತಿದೆ. ಈ ಘಟನೆಗಳು ಮರುಕಳಿಸದ ಹಾಗೆ ಅರಣ್ಯ ಇಲಾಖೆ ಜವಾಬ್ದಾರಿ ಕೆಲಸವನ್ನ ಮಾಡಬೇಕಾಗಿದೆ ಎಂದು ಮನವಿ ಮಾಡಿದರು.

ನನ್ನ ಕ್ಷೇತ್ರ ಹಿಂದುಳಿದ ತಾಲೂಕು ಆಗಿದ್ದು ನನ್ನ ಕ್ಷೇತ್ರಕ್ಕೆ ಅಭಿವೃದ್ಧಿ ವಿಚಾರವಾಗಿ ಸರ್ಕಾರ ಹೆಚ್ಚಿನ ಒತ್ತು ಕೊಡುವುದರ ಮೂಲಕ ತಾಲೂಕಿಗೆ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಸರ್ಕಾರ ಜವಾಬ್ದಾರಿಯನ್ನು ವಹಿಸಬೇಕು ಎಂದು ಮನವಿ ಮಾಡಿದರು.

ಕೋಟೆ ತಾಲೂಕು ಹಿಂದುಳಿದ ತಾಲೂಕು ಎಂಬ ನಿಟ್ಟಿನಲ್ಲಿ ನಂಜುಂಡಪ್ಪ ಅವರ ವರದಿ ಮೂಲಕ ನಮ್ಮ ತಾಲೂಕಿಗೆ, ಸಾಕಷ್ಟು ಅನುದಾನಗಳು ಬಿಡುಗಡೆ ಆಗಬೇಕಿತ್ತು. ಆದರೆ ಸಾಕಷ್ಟು ಅನುದಾನಗಳು ಬಿಡುಗಡೆ ಆಗದೇ ಇರುವ ಕಾರಣ ಹಲವಾರು ಕಾಮಗಾರಿಗಳು ಕುಂಠಿತವಾಗುತ್ತಿದೆ ಎಂದರು.

ಪ್ರಮುಖವಾಗಿ ಮುಖ್ಯ ರಸ್ತೆ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ಕಳೆದ 30 ವರ್ಷಗಳಿಂದ ಕಾಂಕ್ರೀಟ್ ರಸ್ತೆ ಹಾಗೂ ಡಾಂಬರ್ ರಸ್ತೆಗಳು ಆಗದೆ, ರಸ್ತೆಗಳು ಬಹಳ ಹದಗೆಟ್ಟು ನಿಂತಿವೆ, ಇನ್ನು ಹಲವಾರು ಮೂಲಸೌಕರ್ಯಗಳು ಸಿಗದೆ ಜನರು ತೊಂದರೆಯಲ್ಲಿದ್ದಾರೆ ಎಂದ ಅವರು, ಆದ್ದರಿಂದ ಸರ್ಕಾರ ನಮ್ಮ ಹೆಚ್.ಡಿ. ಕೋಟೆ ತಾಲೂಕಿಗೆ ಹೆಚ್ಚಿನ ಅನುದಾನಗಳನ್ನ ಬಿಡುಗಡೆ ಮಾಡಿಕೊಡಿ ಎಂದು ಮನವಿ ಮಾಡಿದರು.


ಚಿಕ್ಕನಾಗಯ್ಯ ನಿಧನ



ಸರಗೂರು, ಡಿ.13– ತಾಲೂಕಿನ ಕಂದೇಗಾಲ ಗ್ರಾಮದ ನಾದಸ್ವರ ಕಲಾವಿದರಾದ ಚಿಕ್ಕನಾಗಯ್ಯ [64] ಮಂಗಳವಾರ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಕಂದೇಗಾಲ ಗ್ರಾಮದ ಮೃತರ ಜಮೀನಿನಲ್ಲಿ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಬ್ಬಾಲೆಯಲ್ಲಿ ರೋಮಾಂಚನಕಾರಿ ಎತ್ತಿನಗಾಡಿ ಓಟ

ಕ್ರೀಡಾಪ್ರೇಮಿಗಳ ಮನ ರಂಜಿಸಿದ ರಾಜ್ಯಮಟ್ಟದ ಸ್ಪರ್ಧೆ



ಕುಶಾಲನಗರ, ಡಿ.13–ಸಮೀಪದ ಹೆಬ್ಬಾಲೆ ಗ್ರಾಮದೇವತೆ ಶ್ರೀ ಬನಶಂಕರಿ ದೇವಿಯ ಜಾತ್ರೋತ್ಸವ ಅಂಗವಾಗಿ ಬುಧವಾರ ಏರ್ಪಡಿಸಿದ್ದ ಗ್ರಾಮೀಣ ಕ್ರೀಡೆಯಾದ ರಾಜ್ಯಮಟ್ಟದ ಎತ್ತಿನಗಾಡಿ ಓಟದ ಸ್ಪರ್ಧೆ ನೆರೆದಿದ್ದವರನ್ನು ಮನರಂಜಿಸಿತು.

ಗ್ರಾಮದ ಮಾದರಿ ಯುವಕರ ಸಂಘದ ಆಶ್ರಯದಲ್ಲಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆದ ಸ್ಪರ್ಧೆಯಲ್ಲಿ ಹೆಬ್ಬಾಲೆ ಸುತ್ತಮುತ್ತ ಸೇರಿದಂತೆ ಮೈಸೂರು, ಚಿಕ್ಕಮಗಳೂರು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ಗಡಿಭಾಗದ 26ಕ್ಕೂ ಹೆಚ್ಚಿನ ಸ್ಪರ್ಧಿಗಳು ಭಾಗವಹಿಸಿದ್ದರು. ಸ್ಪರ್ಧೆಗೆ 100 ಮೀಟರ್ ದೂರ ನಿಗದಿಪಡಿಸಲಾಗಿತ್ತು. ಮೊದಲ ಸ್ಥಾನಗಳಿಸಿದ ಎತ್ತಿನ ಗಾಡಿ ಮಾಲೀಕರಿಗೆ 8 ಗ್ರಾಂ ಚಿನ್ನ, 2ನೇ ಸ್ಥಾನ ಗಳಿಸಿದ ಮಾಲೀಕರಿಗೆ 6 ಗ್ರಾಂ ಹಾಗೂ ತೃತೀಯ 4 ಗ್ರಾಂ ಚಿನ್ನ ಹಾಗೂ ನಾಲ್ವರಿಗೆ ಸಮಾಧಾನಕರ ಬಹುಮಾನ ನೀಡಲಾಯಿತು. ರೋಮಾಂಚನಕಾರಿ ಹಾಗೂ ಸಾಹಸಮಯ ಕ್ರೀಡೆ ಎತ್ತಿನಗಾಡಿ ಓಟ ವೀಕ್ಷಿಸಲು ಸಾವಿರಾರು ಜನರು ಜಮಾಯಿಸಿದ್ದರು.

ಶಾಲಾ ಮೈದಾನದಲ್ಲಿ ಜಮಾಯಿಸಿದ್ದ ಜನರು ಶೀಳೆ ಹೊಡೆಯುತ್ತ ಕೂಗುವ ಮೂಲಕ ಎತ್ತುಗಳಿಗೆ ಹುರಿದುಂಬಿಸುತ್ತಿದ್ದ ದೃಶ್ಯ ಕಂಡು ಬರುತಿತ್ತು. ಸ್ಪರ್ಧೆಗೆ ಉದ್ಯಮಿ ಮೋಹನ್ ಲಾಲ್ ಚೌದರಿ ಚಾಲನೆ ನೀಡಿದರು. ತೀರ್ಪುಗಾರರಾಗಿ ದೈಹಿಕ ಶಿಕ್ಷಣ ಶಿಕ್ಷಕರಾದ ಬೋಜೇಗೌಡ, ಪ್ರವೀಣ್, ಎಚ್.ಡಿ.ಲೋಹಿತ್, ಕುಮಾರ್ ಕಾರ್ಯನಿರ್ವಹಿಸಿದರು. ಬಸವೇಶ್ವರ ಯುವಕರ ಸಂಘದ ಗೌರವಾಧ್ಯಕ್ಷ ಎಚ್.ಎನ್.ರಾಜಶೇಖರ್, ಅಧ್ಯಕ್ಷ ಪಟೇಲ್ ಜಗದೀಶ್, ಕಾರ್ಯದರ್ಶಿ ಅಭಿ, ಖಜಾಂಜಿ ಶಿವು, ಪದಾಧಿಕಾರಿಯಾದ ನವೀನ್, ರಘು, ಪುನೀತ್ ಕೆಂಪ,ನಂದನ್, ಮಾಹೇಶ್, ಸುದರ್ಶನ್, ಸಚಿನ್, ರವೀಂದ್ರ, ಸಲಹೆಗಾರ ಎಚ್.ಜಿ.ಕುಮಾರ್, ಎಚ್.ಟಿ.ದಿನೇಶ್, ಎಚ್.ಆರ್.ಶ್ರೀನಿವಾಸ್, ಗ್ರಾಪಂ ಮಾಜಿ ಅಧ್ಯಕ್ಷ ಎಚ್.ಎಸ್.ರಘು, ಮಾಜಿ ಸೈನಿಕ ಪುಟ್ಟೇಗೌಡ ಇದ್ದರು.

ಅದ್ಧೂರಿ ಬನಶಂಕರಿ ಜಾತ್ರೆ

ಹೆಬ್ಬಾಲೆ ಗ್ರಾಮದೇವತೆ ಬನಶಂಕರಿ ಅಮ್ಮನವರ ಜಾತ್ರೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ರಾತ್ರಿ ಅದ್ಧೂರಿಯಾಗಿ ನಡೆಯಿತು. ಅಮ್ಮನವರ ಸನ್ನಿಧಿಯಲ್ಲಿ ಬೆಳಗ್ಗೆ 7 ರಿಂದ ಗಣಪತಿ ಪೂಜೆ, ಪುಣ್ಯಾಹ, ರಕ್ಷಾಬಂಧನ, ಧ್ವಜಾರೋಹಣ, ನವಗ್ರಹ ಸ್ಥಾಪನೆ, ಮಹಾಮಂಗಳಾರತಿ ಸೇರಿದಂತೆ ಇನ್ನಿತರ ಪೂಜಾ ಕೈಂಕರ್ಯ ದೇವಾಲಯದ ಪ್ರಧಾನ ಅರ್ಚಕ ಕೃಷ್ಣಮೂರ್ತಿ ನೇತೃತ್ವದಲ್ಲಿ ನೆರವೇರಿದವು.

ಪೂಜಾ ಕಾರ್ಯ ದೇವಸ್ಥಾನ ಸಮಿತಿ ಅಧ್ಯಕ್ಷ ಎಚ್.ಎನ್.ಬಸವರಾಜು ಹಾಗೂ ಕಾರ್ಯದರ್ಶಿ ಎಚ್.ಪಿ.ರಾಜು, ಖಜಾಂಜಿ ನಾರಾಯಣ ಹಾಗೂ ಸಮಿತಿ ಸದಸ್ಯರ ನೇತೃತ್ವದಲ್ಲಿ ನೆರವೇರಿಸಲಾಯಿತು. ಗ್ರಾಮದ ಬಸವೇಶ್ವರ ದೇವಸ್ಥಾನ ಬಳಿಯಿಂದ ರಾತ್ರಿ ವಿದ್ಯುತ್ ಅಲಂಕೃತ ಮಂಟಪದಲ್ಲಿ ಬನಶಂಕರಿ ದೇವಿಯನ್ನು ಉತ್ಸವ ಮಂಟಪದಲ್ಲಿ ಮೆರವಣಿಗೆ ಮೂಲಕ ಪವಿತ್ರ ಬನಕ್ಕೆ ಕೊಂಡೊಯ್ಯಲಾಯಿತು. ದೇವಿಯ ಉತ್ಸವದೊಂದಿಗೆ ಗ್ರಾಮದ ಇತರೆ ಭಾಗಗಳಿಂದ ಹೊರಟ ಶೋಭಾಯಾತ್ರೆಯ ಮಂಟಪಗಳು ಹಬ್ಬಕ್ಕೆ ಮೆರಗು ನೀಡಿದವು.

CHANGE OF NAME

This is to declare that I, **SIVAPRASAD RAO, S/o. Narayana Rao**, Resident of #LL-6, 3rd Main, 7th Cross, Vivekananda Nagar, Mysuru, Karnataka - 570023. India have changed my name to **SHIVARAPRASAD RAO N.** Vide Affidavit No. In-KA66848439427079, DATED: 12-12-2023. Sworn before Notary **S.V. Nagendra**, here afterwards I wish to be called and known for all acts, deeds and things as new name only.

Sd/-
Shivaprasad Rao N.

ಸಾರ್ವಜನಿಕರ ಪ್ರಕಟಣೆಗಾಗಿ

ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತಿಗೆ ಸಂಬಂದಿಸಿದಂತೆ ಸದರಿ ಸ್ವತ್ತಿನ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಧನಗಳ್ಳಿ ಅಂಚೆ, ದೇವಗಳ್ಳಿ ಗ್ರಾಮದಲ್ಲಿ ವಾಸವಾಗಿರುವ **ಲೇಟ್ ಸಿಂಗ್ರಯ್ಯರವರ ಮಗನಾದ ಶ್ರೀ ಸಿಂಗ್ರಯ್ಯ**, ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡಿರುತ್ತಾರೆ. ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕಳಾಗಿದ್ದು ಹಾಗೂ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ವ್ಯಕ್ತಿ / ವ್ಯಕ್ತಿಗಳು / ಸಂಘಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿಗೆ ಯಾವುದೇ ಭಾಗಕ್ಕೆ ಸಂಬಂದಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೇ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕರ ಪ್ರಕಟಣೆಯಾದಂತಹ ಹದಿನೈದು ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಧನಗಳ್ಳಿ ಅಂಚೆ, ದೇವಗಳ್ಳಿ ಗ್ರಾಮದ ಸರ್ವೆ ನಂ. **63 /1** ರಲ್ಲಿ **1–09 (ಒಂದು ಎಕರೆ ಒಂಭತ್ತು ಗುಂಟೆ)** ಖುಷ್ಕಿ ಜಮೀನು, ಇದಕ್ಕೆ ಚೆಕ್‌ಬಂಧಿ: **ಪೂರ್ವಕ್ಕೆ:** ಸಿದ್ದಮ್ಮನವರ ಜಮೀನು, **ಪಶ್ಚಿಮಕ್ಕೆ:** ಮುನಿಯಮ್ಮ ನವರ ಜಮೀನು, **ಉತ್ತರಕ್ಕೆ:** ನಂಜುಂಡಪ್ಪನವರ ಜಮೀನು, **ದಕ್ಷಿಣಕ್ಕೆ:** ಶಿವಣ್ಣನವರ ಜಮೀನು

ಸಹಿ/–ವೈ.ಎಂ. ಕಿರಣ್, ವಕೀಲರು & ನೋಟರಿ
ನ.6, ಕೆಳಮಹಡಿ, ಯುಎಂಸಿಎಸ್ ಬಿಲ್ಡಿಂಗ್,
ತ್ಯಾಗರಾಜ ರಸ್ತೆ, ಮೈಸೂರು.
ಮೊ.ನಂ. 9845298478 ದಿ: 13.12.2023

ಸಾರ್ವಜನಿಕರ ಪ್ರಕಟಣೆಗಾಗಿ


ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತಿಗೆ ಸಂಬಂದಿಸಿದಂತೆ ಸದರಿ ಸ್ವತ್ತಿನ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಧನಗಳ್ಳಿ ಅಂಚೆ, ದೇವಗಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಸಿದ್ದಯ್ಯರವರ ಧರ್ಮಪತ್ನಿಯಾದ **ಶ್ರೀಮತಿ ಸಿದ್ದಮ್ಮ**, ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡಿರುತ್ತಾರೆ. ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕಳಾಗಿದ್ದು ಹಾಗೂ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ವ್ಯಕ್ತಿ / ವ್ಯಕ್ತಿಗಳು / ಸಂಘಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿಗೆ ಯಾವುದೇ ಭಾಗಕ್ಕೆ ಸಂಬಂದಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೇ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕರ ಪ್ರಕಟಣೆಯಾದಂತಹ ಹದಿನೈದು ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಧನಗಳ್ಳಿ ಅಂಚೆ, ದೇವಗಳ್ಳಿ ಗ್ರಾಮದ ಸರ್ವೆ ನಂ. **63/3**ರಲ್ಲಿ **1–09 (ಒಂದು ಎಕರೆ ಒಂಭತ್ತು ಗುಂಟೆ)** ಖುಷ್ಕಿ ಜಮೀನು, ಇದಕ್ಕೆ ಚೆಕ್‌ಬಂಧಿ : **ಪೂರ್ವಕ್ಕೆ:** ಚೆಲುವಯ್ಯನವರ ಜಮೀನು, **ಪಶ್ಚಿಮಕ್ಕೆ:** ಸಿಂಗ್ರಯ್ಯನವರ ಜಮೀನು, **ಉತ್ತರಕ್ಕೆ:** ನಂಜುಂಡಪ್ಪನವರ ಜಮೀನು, **ದಕ್ಷಿಣಕ್ಕೆ:** ಶಿವಣ್ಣನವರ ಜಮೀನು

ಸಹಿ/–ವೈ.ಎಂ. ಕಿರಣ್ ವಕೀಲರು & ನೋಟರಿ
ನ.6, ಕೆಳಮಹಡಿ, ಯುಎಂಸಿಎಸ್ ಬಿಲ್ಡಿಂಗ್,
ತ್ಯಾಗರಾಜ ರಸ್ತೆ, ಮೈಸೂರು.
ಮೊ.ನಂ. 9845298478 ದಿ: 13.12.2023

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಜನನ : 06–02–1956 ನಿಧನ : 05–12–2023

ಶ್ರೀ ಕೆ.ಎನ್.ವೆಂಕಟೇಶ್ ರವರು

ಇವರು ದಿನಾಂಕ: 05-12-2023 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ:15–12–2023 ಶುಕ್ರವಾರ ಬೆಳಗ್ಗೆ 11 ಗಂಟೆಗೆ ಪಾಂಡವಪುರ ತಾ॥ ಕ್ಯಾತನಹಳ್ಳಿ ಗ್ರಾಮದ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಇಂದಿರ. ಮೃತರ ಮಕ್ಕಳು.
ಅಣ್ಣ: ಡಾ.ಕೆ.ಎನ್.ಶಿವನಂಜೇಗೌಡರು & ಅತ್ತಿಗೆ: ಮೀನಾ ಎಸ್.ಗೌಡ.
ಅಳಿಯಂದಿರು, ಸೊಸೆಯಂದಿರು & ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

10ನೇ ವರ್ಷದ ಸವಿನೆನಪು



ಜಿ.ಕೆಂಡಗಣ್ಣರಾಧ್ಯ

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ ಕುಟುಂಬ ವರ್ಗದವರು ಹಾಗೂ ಶ್ರೀ ಪಾರ್ವತಿ ಟ್ರಾನ್ಸ್‌ಪೋರ್ಟ್ ಮೈಸೂರು

2ನೇ ವರ್ಷದ ಪುಣ್ಯಸ್ಮರಣೆ



ದೊಡ್ಡ_ಅಮಾವಾಸೇಗೌಡರು

ನಮ್ಮ ಪ್ರಾರ್ಥನೆಯಲ್ಲಿ ನೀವು ಇರುವಿರಿ. ಸದಾ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಬೇಡುವ ಪತ್ನಿ : ಚಿಕ್ಕಣ್ಣಮ್ಮ,

ದುಃಖತಪ್ತರು:- ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಕುಟುಂಬವರ್ಗದವರು, ರಾಮನಹುಂಡಿ ಗ್ರಾಮಸ್ಥರು, ಮೈಸೂರು

2ನೇ ವರ್ಷದ ಸವಿನೆನಪು



ಶ್ರೀಮತಿ ಲಕ್ಷ್ಮೀ

ದುಃಖತಪ್ತರು: ಚಂದ್ರು, ನಿತಿನ್, ಸುನೀಲ್, ರಂಜಿತ, ರಾಹುಲ್, ವರುಣ್

Estd. 1959 Tel: 2522759, 24210772432938

ದಿ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಜಗನ್‌ಮೋಹನ್ ಪ್ಯಾಲೆಸ್ ರಸ್ತೆ, ಮೈಸೂರು - 570 001.
The Mysore Merchants Co-operative Bank Ltd.,
(Registered as No. 1235/A.R.M.)
JAGANMOHAN PALACE ROAD, MYSORE-570 001.

Ref.No: 957/2023-24 Date 13/12/2023

ಸಾರ್ವಜನಿಕರ ತಿಳುವಳಿಕೆಗೆ

ನಮ್ಮ ಬ್ಯಾಂಕಿನ ವತಿಯಿಂದ ಶ್ರೀ ಎಸ್.ನಟರಾಜ್ ಬಿನ್ ಲೇಟ್ ಎನ್.ಎಸ್.ಶ್ರೀನಿವಾಸ್ ರವರ ಮಾಲೀಕತ್ವದ ಹೆಸರಿನಲ್ಲಿರುವ ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತಿನ ಮಾಲೀಕತ್ವದ ನೋಂದಾಯಿತ ದಾಖಲೆಗಳು ಹಾಗೂ ಇತರೆ ದಾಖಲೆಗಳನ್ನು ಬ್ಯಾಂಕಿನ ವಶಕ್ಕೆ ಭದ್ರತೆಯನ್ನಾಗಿ ನೀಡಿ ಮಾರ್ಟಗೇಜ್ ಸಾಲ ಪಡೆಯಲು ಉದ್ದೇಶಿಸಿದ್ದು, ಆದ್ದರಿಂದ ಅನುಸೂಚಿಯಲ್ಲಿ ಕಾಣಿಸಿರುವ ಶ್ರೀ ಎಸ್.ನಟರಾಜ್ ಬಿನ್ ಲೇಟ್ ಎನ್.ಎಸ್.ಶ್ರೀನಿವಾಸ್ ರವರ ಮಾಲೀಕತ್ವದ ಹೆಸರಿನ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಂದಲಾದರೂ ಯಾವುದೇ ರೀತಿಯ ಮಾಲೀಕತ್ವದ ಹಕ್ಕು ಮತ್ತು ಇತರೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಹಾಗೂ ಅನುಭವ ಇದ್ದಲ್ಲಿ ಅಂತಹವರು ಲಿಖಿತ ರೂಪದಲ್ಲಿ ತಕರಾರನ್ನು ಸೂಕ್ತ ದಾಖಲೆಗಳೊಡನೆ ಈ ತಿಳುವಳಿಕೆ ಪತ್ರ ಪ್ರಕಟವಾದ ಏಳು ದಿನಗಳೊಳಗೆ ಬ್ಯಾಂಕಿನ ಕಛೇರಿ ವೇಳೆಯಲ್ಲಿ ಸಲ್ಲಿಸ ತಕ್ಕದ್ದು, ಇಲ್ಲವಾದಲ್ಲಿ ಯಾವುದೇ ತಕರಾರಿರುವುದಿಲ್ಲ ವೆಂದು ಪರಿಗಣಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು.

ಅನುಸೂಚಿ: ಮೈಸೂರು ನಗರ, ಕೆ.ಆರ್.ಮೊಹಲ್ಲಾ, ಚಾಮುಂಡಿ ಪುರಂ, ಮೇದರಕೇರಿ 4ನೇ ಮೇನ್, ಮೈಸೂರು ಮಹಾನಗರ ಪಾಲಿಕೆ ಮನೆ ನಂ. 2751 ಕೆ 2ರ ಉಳ್ಳದ್ದರ ಮನೆಯಾಗಿದ್ದು, ಸದರಿ ಮನೆಯ ನಿವೇಶನದ ಅಳತೆ ಪೂರ್ವ ಪಶ್ಚಿಮ 60 ಅಡಿಗಳು, ದಕ್ಷಿಣೋತ್ತರ ಪೂರ್ವದ ಕಡೆ 40 ಅಡಿಗಳು, ಪಶ್ಚಿಮದ ಕಡೆ 16 ಅಡಿಗಳು (40+16/2 ಅಡಿಗಳು) ಉಳ್ಳ ಪೂರ್ಣ ಸ್ವತ್ತಿನ ಪೈಕಿ ಪೂರ್ವಭಾಗದ ಸ್ವತ್ತಾಗಿದ್ದು, ಸದರಿ ಪೂರ್ವ ಭಾಗದ ಸ್ವತ್ತಿನ ಪೂರ್ವ ಪಶ್ಚಿಮ 26 1/2 ಅಡಿಗಳು, ದಕ್ಷಿಣೋತ್ತರ 40+29.4/2 ಅಡಿಗಳು ಉಳ್ಳದಾಗಿದ್ದು, ಸದರಿ ನಿವೇಶನದಲ್ಲಿ ನೆಲ ಮಹಡಿ, 1ನೇ ಮಹಡಿ ಮತ್ತು 2ನೇ ಮಹಡಿ ಉಳ್ಳ ಆರ್.ಸಿ.ಸಿ ಮನೆ

Sd/- General Manager
The Mysore Merchants Co-operative Bank Ltd..

ಒಂದನೇ ವರ್ಷದ ಪುಣ್ಯಸ್ಮರಣೆ



ಎಲ್.ಎನ್.ಶಿವಯೋಗಿ

ಮಾಜಿ ಶಾಸಕರಾದ ದಿ.ಹೆಜ್ಜಿಗೆ ಎಂ.ಲಿಂಗಣ್ಣ ರವರ ಮಗ.
ನಂಜುಂಡೇಶ್ವರ ವಿದ್ಯಾವರ್ಧಕ ವಿದ್ಯಾ ಸಂಸ್ಥೆ ಮಾಜಿ ಅಧ್ಯಕ್ಷರು.
ಮರಣ : 14–12–2022

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮತ್ತು ನಿಮ್ಮ ನೆನಪಿನಲ್ಲಿ ಸದಾ ಜೀವಿಸುತ್ತಿದ್ದೇವೆ.

ದುಃಖತಪ್ತರು: ಪತ್ನಿ, ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಗ ಹಾಗೂ ಕುಟುಂಬ ವರ್ಗದವರು ಹೆಜ್ಜಿಗೆ ಗ್ರಾಮಸ್ಥರು, ನಂಜನಗೂಡು ಪಟ್ಟಣ

4ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಪುಟ್ಟತಾಯಮ್ಮನವರು

(ಲೇ. ಕರೀಗೌಡರ ಧರ್ಮಪತ್ನಿ)

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲೇ ಇರುವ

ದುಃಖತಪ್ತರು: ಶ್ರೀ ಕೆ. ವಜ್ರೇಗೌಡರು, ಪಿ.ಎಲ್.ಡಿ. ಬ್ಯಾಂಕ್ ಮಾಜಿ ಅಧ್ಯಕ್ಷರು ಮತ್ತು ಶ್ರೀ ಕೆ. ನಾಗೇಂದ್ರರವರು, ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು. ಶ್ರೀ ಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್ ಸಿಬ್ಬಂದಿ ವರ್ಗ ಹಾಗೂ ಕಗ್ಗಲೀಪುರ ಗ್ರಾಮಸ್ಥರು ತಿ.ನರಸೀಪುರ ತಾಲ್ಲೂಕು...

ಕರ್ನಾಟಕ ಸರ್ಕಾರ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಹಾಸನ ಜಿಲ್ಲೆ, ಹಾಸನ
ph No:08172-239781 E-mail ID: diet.hassan@gmail.com
ಸಿ3. KPS.ಟೆಂಡರ್:02/2022–23 ದಿನಾಂಕ 13–12–2023

" ಪ್ರಕಟಣೆಗಾಗಿ"

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ತವರದೇವರ ಕೊಪ್ಪಲು ಹಾಸನ ಇವರ ವತಿಯಿಂದ 2022–23 ನೇ ಸಾಲಿನಲ್ಲಿ ಹಾಸನ ಜಿಲ್ಲೆಯ 10 KPS ಶಾಲೆಗಳಿಗೆ ICT Digital ಉಪಕರಣಗಳನ್ನು ಸರಬರಾಜು ಮಾಡುವ ಕುರಿತು (3ನೇ ಕರೆ) ಅಲ್ಪಾವದಿ ಇ–ಟೆಂಡರ್ ಕರೆಯಲಾಗಿದೆ. (ಟೆ.ಸಂಖ್ಯೆ:DPI/2023-24/IND0057/CALL-2) ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 20–12–2023. ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ. ಹೆಚ್ಚಿನ ವಿವರಗಳನ್ನು (Kppp.karnataka.gov.in) ನಲ್ಲಿ ಪಡೆಯುವುದು. ಮಾಹಿತಿಗಾಗಿ ಸಂಪರ್ಕಿಸಬೇಕಾದ ಸಂಖ್ಯೆ–9448999371

ಸಹಿ/–ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್ ಹಾಸನ ಜಿಲ್ಲೆ. ಹಾಸನ,

ವಾಸಾಸಂಇ/ಹಿಸನಿ/ಹಾಸನ/559/ಕೆಎಸ್ಎಂಸಿಎ/563/2023–24